
ಡಿಸೆಂಬರ್ 28, 2025
41ನೇ ವರ್ಷದಲ್ಲಿ
www.facebook.com/firstcrimenewspaper/
ಸ್ಥಾಪಕ ಸಂಪಾದಕ : ದಿ||ಎಂ. ಮಲ್ಲಿಕಾರ್ಜುನಯ್ಯ

# ಪೊಲೀಸ್ ನ್ಯೂಸ್

2017
ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ
ಬೆಲೆ : ₹20/-

## ಮತ್ತೆ ಶುರುವಾಯ್ತು ಸ್ಟಾರ್ ವಾರ್!



## ಮಾರ್ಕ್‌-ಡೆವಿಲ್ ಫ್ಯಾನ್ಸ್ ಬಿಗ್ ಫೈಟ್!





## ಖದರ್ ಡಿಜಿಪಿ ಅಲೋಕ್‌ಕುಮಾರ್ ಅಲರ್ಟ್!

## ಮಲ್ಟೆ ಪೊಲೀಸ್ ಎಡವಟ್ಟಿಗೆ ಎಸ್ಪಿ ಹೈರಾಣ!

## ಡ್ರಗ್ಸ್ ನಶೆಯಲ್ಲಿ ನೇಕೆಡ್ ಆಗಿ ನಡುರೋಡಲ್ಲಿ ನಿಂತನಲ್ಲ ರೌಡಿ ಮಲೆಯಾಳಿ ಮಧು!





## ಉದ್ಯಮಿ ರಘುನಾಥ್ ನಿಗೂಢ ಕೊಲೆ ಕೇಸ್

## ಸಾರಾಯಿ ದೊರೆ ಆದಿಕೇಶವುಲು ಮಕ್ಕಳು ಅರೆಸ್ಟ್!



## ಸಂಪಾದಕರು ಸ್ಥಾಪಿಸಿದ ಪತ್ರಿಕೆಗಳು

**1975ರಲ್ಲಿ 'ಶಿಕ್ಷಣ ಸುಧಾರಕ'**
(ಮೊಟ್ಟ ಮೊದಲ ಶಿಕ್ಷಣ ಪಾಕ್ಷಿಕ)

**1984ರಲ್ಲಿ 'ಪ್ರದೇಶ ಸಮಾಚಾರ'**
(ದಿನಪತ್ರಿಕೆ)

**1985ರಲ್ಲಿ 'ಪೊಲೀಸ್ ನ್ಯೂಸ್'**
(ಕನ್ನಡ ವಾರಪತ್ರಿಕೆ)

**1987ರಲ್ಲಿ 'ಪೊಲೀಸ್ ನ್ಯೂಸ್'**
(ತಮಿಳು, ಹಿಂದಿ, ಇಂಗ್ಲೀಷ್)

**1989ರಲ್ಲಿ 'ಲೋಕವಾಣಿ'**
(ಕನ್ನಡ ದೈನಿಕ)

**1990ರಲ್ಲಿ 'ಮಂಗಳೂರು ಮಿತ್ರ'**
(ಮಂಗಳೂರಿನ ಮೊಟ್ಟ ಮೊದಲ ಸಂಜೆ ದೈನಿಕ)

**1992ರಲ್ಲಿ 'ಕರ್ನಾಟಕ ಮಲ್ಲ'**
(ಮುಂಬೈನಲ್ಲಿ ಪ್ರಕಟಿತ ಮೊಟ್ಟ ಮೊದಲ ಕನ್ನಡ ದೈನಿಕ)

**1996ರಲ್ಲಿ 'ಆದರ್ಶ ಗಂಡ ಹೆಂಡತಿ'**
(ಕನ್ನಡ ಮಾಸಪತ್ರಿಕೆ)

**1997ರಲ್ಲಿ 'ಕ್ರೀಡಾ ಸಮಯ'**
(ಕನ್ನಡ ಕ್ರೀಡೆ ಮಾಸಿಕ)

**1999ರಲ್ಲಿ 'ಶುಭದಿನ'**
(ಕನ್ನಡ ವಾಣಿಜ್ಯ ದೈನಿಕ)

**1999 ರಲ್ಲಿ 'ಸಿಟಿ ಟುಡೆ'**
(ಆಂಗ್ಲ ಸಂಜೆ ದೈನಿಕ)

**'ಪೊಲೀಸ್ ನ್ಯೂಸ್'**
(ಸಪ್ಲಿಮೆಂಟರಿ)

**'ದೇಗುಲ ಪ್ರಭೆ'**
(ಕನ್ನಡ ಮಾಸಿಕ)

**ಸಂಸ್ಥಾಪಕ ಸಂಪಾದಕರ ಸವಿನೆನಪಿನಲ್ಲಿ......**



## ಲಯನ್ ಎಂ. ಮಲ್ಲಿಕಾರ್ಜುನಯ್ಯ

**ಸಂಸ್ಥಾಪಕ ಸಂಪಾದಕರು**

**ಜನನ : 29-03-1954 ಮರಣ : 22-11-2005**

**ಸ್ಥಾಪಿಸಿದ ಹಾಗೂ ಸೇವೆ ಮಾಡಿದ ಸಂಘ-ಸಂಸ್ಥೆಗಳು**

- ಲಯನ್ಸ್ ಕ್ಲಬ್ ಮೆಜೆಸ್ಟಿಕ್ ಶಾಖೆ - ಅಧ್ಯಕ್ಷರು - 1999
- ಕಾರ್ಯನಿರತ ಪತ್ರಕರ್ತರ ಸಂಘ - ರಾಜ್ಯ ಖಜಾಂಚಿ
- ದೇಗುಲ ಮಠ ಹಳೇ ವಿದ್ಯಾರ್ಥಿಗಳ ಸಂಘ - ಪ್ರಧಾನ ಕಾರ್ಯದರ್ಶಿ
- ವಿಶ್ವ ಸೇವಾ ಕೇಂದ್ರ - ಉಪಾಧ್ಯಕ್ಷರು
- ಕನ್ನಡ ವೈದ್ಯ ಸಾಹಿತ್ಯ ಪರಿಷತ್ತು - ಗೌರವ ಪ್ರಧಾನ ಕಾರ್ಯದರ್ಶಿ
- ಬಸವ ಬಳಗ ಬಸವೇಶ್ವರನಗರ - ಸಂಸ್ಥಾಪಕರು, ಅಧ್ಯಕ್ಷರು
- ಮಂಗಳೂರು ಪ್ರೆಸ್ ಕ್ಲಬ್ - ಸಂಸ್ಥಾಪಕರು
- ಕನ್ನಡ ಸಾಹಿತ್ಯ ಸಮ್ಮೇಳನ (ದಾವಣಗೆರೆ) - ಗೌರವಾಧ್ಯಕ್ಷರು

## ಸಂದ ಪ್ರಶಸ್ತಿ ಪುರಸ್ಕಾರಗಳು

**'ಸಾಧಕರು'**
(ಅಖಿಲ ಭಾರತ ಪತ್ರಕರ್ತರ ಸಮ್ಮೇಳನ)
ದಾವಣಗೆರೆ 1993-94

**'ವಿಶಿಷ್ಟ ಸೇವಾ ಪದಕ'-1999**
(ಕರ್ನಾಟಕ ಪತ್ರಿಕಾ ಅಕಾಡೆಮಿ, ಕರ್ನಾಟಕ ಸರ್ಕಾರ)

**'ವೈದ್ಯ ಸಾಹಿತ್ಯ ಸಾಧಕ'**
(ಕನ್ನಡ ವೈದ್ಯ ಸಾಹಿತ್ಯ ಪರಿಷತ್)

**'ಮುದ್ರಣ ಕಲೆ ಸಾಧಕ'**
(ಯೂರೋಪ್ ಕನ್ನಡ ಬಳಗ)

**'ಶಾಂತಿ ಧೂತ'**
(ಇಂಡಿಯನ್ ಕಲ್ಚರಲ್ ಅಕಾಡೆಮಿ)

**'ಕನ್ನಡ ರತ್ನ'-2004**
(ಪೊಲೀಸ್ ಅಸೋಸಿಯೇಷನ್ ಕರ್ನಾಟಕ)

**'ಪತ್ರಿಕೋದ್ಯಮಿ ಶಿವರತ್ನ'-2004**
(ವೀರಶೈವ ವಿಚಾರ ವೇದಿಕೆ)

**'ಕರ್ನಾಟಕ ಮಲ್ಲ'-2005**
(ಮುಂಬೈ, ಕನ್ನಡ ಬಳಗ)

**'ಬಹುಮುಖಿ'-2005**
(ಅಭಿಮಾನಿ ಪ್ರಕಾಶನ-
'ಈ ಸಂಜೆ' ಮತ್ತು 'ಅರಗಿಣಿ' ಪತ್ರಿಕೆ ಅಂಗ ಸಂಸ್ಥೆ)

**'ದುಬೈ, ಅಬುದಾಬಿ ಕನ್ನಡ ಬಳಗದಿಂದ ಗೌರವ ಸ್ವೀಕಾರ'-1994**

# ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ 'ಸುವರ್ಣ ಭಾರತಿ' ಕಾರ್ಯಕ್ರಮ ನಡೆಸಿದ್ದು...

**ಪೊ**ಲೀಸ್ ನ್ಯೂಸ್ ವಾರ ಪತ್ರಿಕೆ 'ಕ್ರೈಂ' ಸಂಬಂಧಿತ ಸುದ್ದಿ ಪ್ರಕಟಿಸುತ್ತ ಬಂದಿದ್ದರೂ, ಪೊಲೀಸ್ ಡಿಪಾರ್ಟ್ಮೆಂಟ್ ಒರತಾಗಿಯೂ ಇನ್ನಿತರೆ ಇಲಾಖೆಗಳಲ್ಲಿ ಬೆರೆತು ಅವುಗಳ ಮುಖೇನ ಸಮಾಜ ಮುಖಿ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಿತ್ತು. ಇದರ ರೂವಾರಿ ಇನ್ನಾರು ಅಲ್ಲ, ನಮ್ಮ ಸಂಪಾದಕರಾದ ಶ್ರೀ ಎಂ. ಮಲ್ಲಿಕಾರ್ಜುನಯ್ಯನವರು. ಕನ್ನಡ ಸಾಹಿತ್ಯ ಪರಿಷತ್ತು, ವೈದ್ಯಕೀಯ ಪರಿಷತ್ತು, ಕನ್ನಡ ಸಂಸ್ಕೃತಿ ಇಲಾಖೆ, ಕ್ರೀಡಾ ಇಲಾಖೆ, ಕಾರ್ಮಿಕ ಇಲಾಖೆ... ಹೀಗೆ, ಎಲ್ಲಾ ಕ್ಷೇತ್ರಗಳಲ್ಲೂ ನುಗ್ಗಿ, ಅಲ್ಲಿನ ಅಧಿಕಾರಿಗಳಿಂದಲೂ ಸಮಾಜಸೇವೆ ಮಾಡಿಸುತ್ತಿದ್ದರು.

ನಮ್ಮ ಸಂಪಾದಕರ ಈ ಕಾರ್ಯಕ್ಕೆ ಪೊಲೀಸ್ ಇಲಾಖೆಯಿಂದ ಸಾಂಗ್ಲಿಯಾನ, ವೈದ್ಯಕೀಯ ಕ್ಷೇತ್ರದಿಂದ ಸಿ.ಆರ್ ಚಂದ್ರಶೇಖರ, ಸಾಹಿತ್ಯ ವಲಯದಿಂದ ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್, 'ಕನ್ನಡಪ್ರಭ'ದ ಆಗಿನ ಹಿರಿಯ ವರದಿಗಾರ ಜಗಳೂರು ಲಕ್ಷ್ಮಣ ರಾವ್...... ಇನ್ನೂ ಮುಂತಾದ ಗಣ್ಯರು ತುಂಬು ಮನಸ್ಸಿನ ಸಹಕಾರ ನೀಡುತ್ತಿದ್ದರು.

ನಾವೀಗ ಪ್ರಕಟಸಿರುವ ಫೋಟೋಸ್ ಆಗಸ್ಟ್ **14,1998**ರಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ 'ಪೊಲೀಸ್ ನ್ಯೂಸ್' ಹಮ್ಮಿಕೊಂಡಿದ್ದ 'ಸುವರ್ಣ ಭಾರತಿ' ಸಾಂಸ್ಕೃತಿಕ ಕಾರ್ಯಕ್ರಮದವು! ಅಂದು ಇಲಾಖೆಯ ಸಚಿವೆ ಆಗಿದ್ದ ಶ್ರೀಮತಿ ಲೀಲಾದೇವಿ ಆರ್ ಪ್ರಸಾದ್, ಎಸ್ಪಿ ಸಾಂಗ್ಲಿಯಾನ, ಮುಂತಾದ ಗಣ್ಯರು ಆಗಮಿಸಿ ಕಾರ್ಯಕ್ರಮ ನಡೆಸಿಕೊಟ್ಟಿದ್ದರು. ನೂರಾರು ಚಿಣ್ಣರನ್ನು ಒಂದೆಡೆ ಸೇರಿಸಿ ರಾಷ್ಟ್ರೀಯ ಭಾವೈಕ್ಯತೆ ಸಾರುವ ಅದ್ಭುತ ಕಾರ್ಯಕ್ರಮ ಅದಾಗಿತ್ತು. ಜಗಳೂರು ಲಕ್ಷಣ ರಾಯರು

☞ 3







# ಪ್ರಜ್ಞಾವಂತರ ಹಾಗೂ ಮಾಧ್ಯಮಗಳ ಬಾಯಿ ಮುಚ್ಚಿಸುವ ತಂತ್ರ?!



ಸಂಪಾದಕ
**ಎಂ. ರಾಹುಲ್**

**ಬೆ**ಳಗಾವಿಯಲ್ಲಿ ನಡೆದ ಕರ್ನಾಟಕ ವಿಧಾನ 'ಸಭೆಯಲ್ಲಿ ಇತ್ತೀಚೆಗೆ ಅಂಗೀಕೃತಗೊಂಡ ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ (ತಡೆಗಟ್ಟುವಿಕೆ) ಮಸೂದೆ2025 ಗಂಭೀರ ಸಾಂವಿಧಾನಿಕ ಕಳವಳಗಳನ್ನು ಹುಟ್ಟುಹಾಕಿದೆ. ಈ ಮಸೂದೆಯನ್ನು ಸಂವಿಧಾನದ ಆರ್ಟಿಕಲ್ 200ರ ಅಡಿಯಲ್ಲಿ, ರಾಷ್ಟ್ರಪತಿಗಳ ಪರಿಶೀಲನೆಗೆ ಕಾಯ್ದಿರಿಸಬೇಕು ಎಂಬ ಒತ್ತಾಯಗಳು ಎದ್ದಿವೆ. ಇದು ದ್ವೇಷ ಭಾಷಣ ಮತ್ತು ಅಪರಾಧಗಳನ್ನು ತಡೆಯುವ ಉದ್ದೇಶ ಹೊಂದಿದ್ದರೂ, ಇದರಿಂದ ಪ್ರಜಾಪ್ರಭುತ್ವದ ಸ್ವಾತಂತ್ರ್ಯಗಳಿಗೆ ಧಕ್ಕೆಯಾಗಬಹುದು ಎಂಬ ಆತಂಕ ವ್ಯಕ್ತವಾಗಿದೆ.

ಈ ಮಸೂದೆಯನ್ನು ಸೂಕ್ಷ್ಮವಾಗಿ ಪರೀಕ್ಷಿಸಿದಾಗ, ಇದು ಸರ್ಕಾರಿ ನಿಯಂತ್ರಿತ ವ್ಯವಸ್ಥೆಗೆ ಜನರ ಮಾತುಗಳ ಮೇಲೆ ನಿಗಾ ವಹಿಸುವ, ಮೌಲ್ಯಮಾಪನ ಮಾಡುವ ಮತ್ತು ಶಿಕ್ಷೆ ವಿಧಿಸುವ ವಿಶಾಲವಾದ ಅಧಿಕಾರ ನೀಡುತ್ತದೆ. ಈ ಮಸೂದೆಯು ಸರ್ಕಾರಿ ಅಧಿಕಾರಿಗಳಿಗೆ ಜನರು ಯಾವ ಮಾತನಾಡಲು ಅನುಮತಿಸಬಹುದು ಎಂಬುದನ್ನು ನಿರ್ಧರಿಸುವ ಅಧಿಕಾರ ನೀಡುತ್ತದೆ. ಇದು ಸಾರ್ವಜನಿಕ ಹಿತಾಸಕ್ತಿಗೆ ಸ್ಪಷ್ಟ ಮತ್ತು ತಕ್ಷಣದ ಅಪಾಯ ಉಂಟುಮಾಡುವ ಮಾತುಗಳನ್ನು ಮಾತ್ರ ಗುರಿಯಾಗಿಸದೆ, ಸರ್ಕಾರದ ವಿರೋಧಿ ಧ್ವನಿಗಳನ್ನು ಮುಚ್ಚಿಹಾಕುವ ಸಾಧನವಾಗಿ ಪರಿವರ್ತನೆಗೊಳ್ಳಬಹುದು. ಅಂತಿಮವಾಗಿ, ಸಂವಿಧಾನದಲ್ಲಿ ಖಾತರಿಪಡಿಸಿದ ಮಾತಿನ ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವದ ಭಿನ್ನಾಭಿಪ್ರಾಯ ವ್ಯಕ್ತಪಡಿಸುವ ಸ್ವಾತಂತ್ರ್ಯಕ್ಕೆ ಧಕ್ಕೆ ಬೀಳುತ್ತದೆ.

ಸಂವಿಧಾನದ 19(1)(ಎ) ಅನುಚ್ಛೇದ ಪ್ರತಿಯೊಬ್ಬ ಪೌರನಿಗೆ ಮಾತು ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ ನೀಡುತ್ತದೆ. ಇದಕ್ಕೆ ಕೇವಲ ಅನುಚ್ಛೇದ 19(2)ರಲ್ಲಿ ಹೇಳಿದ ನಿರ್ದಿಷ್ಟ ನಿರ್ಬಂಧಗಳು ಮಾತ್ರ ಅನ್ವಯ. ಆದರೆ ಈ ಮಸೂದೆಯಲ್ಲಿ 'ಅಸೌಹಾರ್ದತೆ', 'ದ್ವೇಷ', 'ಪೂರ್ವಾಗ್ರಹಪೀಡಿತ ಹಿತಾಸಕ್ತಿ' ಎಂಬ ಅಸ್ಪಷ್ಟ ಪದಗಳು ಬಳಕೆಯಾಗಿವೆ. ಇವುಗಳ ಅರ್ಥ ಸ್ಪಷ್ಟವಿಲ್ಲದ ಕಾರಣ ಸರ್ಕಾರಿ ಅಧಿ ಕಾರಿಗಳು ತಮ್ಮ ಇಚ್ಛೆಯಂತೆ ಬಳಸಿಕೊಳ್ಳಬಹುದು. ಇದು ತಾರತಮ್ಯ ಮತ್ತು ದುರುಪಯೋಗಕ್ಕೆ ದಾರಿ ಮಾಡಿಕೊಡುತ್ತದೆ. ಇದು ಸಂವಿಧಾನದತ್ತ ಅವಕಾಶಗಳಿಗೆ ಹೊಂದಿಕೆಯಾಗುವುದಿಲ್ಲ. ಮಾತಿನ ನಿಯಂತ್ರಣ ಕಾಯ್ದೆಗಳು ಸ್ಪಷ್ಟವಾಗಿರಬೇಕು ಮತ್ತು ಕಿರಿದಾದ ಮಿತಿಯಲ್ಲಿರಬೇಕು.

ಅದರಲ್ಲಿ ಯಾವುದೇ ಅಸ್ಪಷ್ಟತೆ ಇರಬಾರದು. ಕಾನೂನುಗಳು ಅಸ್ಪಷ್ಟತೆಯಿಂದ ಕೂಡಿದ್ದರೆ ಜನರು ಭಯದಿಂದ ಮಾತನಾಡದಂತೆ ಆಗುತ್ತದೆ ಎಂದು ಸುಪ್ರೀಂ ಕೋರ್ಟ್‌ನ ಶ್ರೇಯಾ ಸಿಂಘಲ್ ಪ್ರಕರಣದ (2015) ತೀರ್ಪು ಸ್ಪಷ್ಟವಾಗಿ ಹೇಳಿದೆ. ಪ್ರಸ್ತುತ ಮಸೂದೆಯ ನಿಬಂಧನೆಗಳು ಇದೇ ರೀತಿಯ ಸಾಂವಿಧಾನಿಕ ದೋಷಗಳಿಂದ ಬಳಲುತ್ತಿದ್ದು, ಅದರ ಸಿಂಧುತ್ವದ ಬಗ್ಗೆ ಗಂಭೀರ ಅನುಮಾನಗಳನ್ನು ಹುಟ್ಟುಹಾಕುತ್ತಿದೆ. ಈ ಮಸೂದೆಯ ಇನ್ನೊಂದು ದೊಡ್ಡ ಸಮಸ್ಯೆಯೆಂದರೆ, ತನಿಖೆ ಮತ್ತು ತೀರ್ಪಿನ ಅಧಿಕಾರಗಳು ಸರ್ಕಾರಿ ಇಲಾಖೆಯಲ್ಲೇ ಕೇಂದ್ರೀಕೃತವಾಗಿವೆ. ನ್ಯಾಯಾಲಯದ



ಸಹಭಾಗಿತ್ವ ಕಡಿಮೆಯಿದೆ. ಶಿಕ್ಷೆಗಳನ್ನು ನೇರವಾಗಿ ಸರ್ಕಾರಿ ಅಧಿ ಕಾರಿಗಳ ನಿರ್ಧಾರಕ್ಕೆ ಜೋಡಿಸಲಾಗಿದೆ. ಇದರಿಂದ ಮೂಲಭೂತ ಹಕ್ಕುಗಳನ್ನು ಕಾಪಾಡಲು ಬೇಕಾದ ನ್ಯಾಯಸಮ್ಮತ ರಕ್ಷಣೆಗಳು ದುರ್ಬಲಗೊಳ್ಳುತ್ತವೆ. ಇಂತಹ ವ್ಯವಸ್ಥೆಯು ನ್ಯಾಯಯುತ ಪ್ರಕ್ರಿಯೆ ಮತ್ತು ಅಧಿ ಕಾರಗಳನ್ನು ಪ್ರತ್ಯೇಕವಾಗಿರಿಸುವ ಸಂವಿಧಾನದ ಮೂಲ ತತ್ವಗಳಿಗೆ ವಿರುದ್ಧವಾಗಿದೆ.

ಬಹುಷಃ ಈ ಮಸೂದೆ ದಮನಿತರ ಧ್ವನಿ ಅಡಗಿಸುವ ಅಪಾಯವಿರಬಹುದು. ವಿಶೇಷವಾಗಿ ಆತಂಕ ತರುವ ಸಂಗತಿಯೆಂದರೆ, ಈ ಮಸೂದೆಯು ಐತಿಹಾಸಿಕವಾಗಿ ದಮನಿತ ಮತ್ತು ಸಂವಿಧಾನದಲ್ಲಿ ರಕ್ಷಣೆ ಪಡೆದ ಗುಂಪುಗಳ ಮೇಲೆ ಉಂಟುಮಾಡಬಹುದಾದ ಪರಿಣಾಮ. ಮಸೂದೆಯಲ್ಲಿರುವ ಅಸ್ಪಷ್ಟ ಪದಗಳನ್ನು ಕನ್ನಡ ಭಾಷಾ ಹೋರಾಟಗಾರರು, ಮಹಿಳಾ ಸಂಘಟನೆಗಳು, ದಲಿತರು, ಆದಿವಾಸಿಗಳು, ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತರು, ಪತ್ರಕರ್ತರು, ವಿದ್ಯಾರ್ಥಿ ಸಂಘಟನೆಗಳು ಮತ್ತು ಸಮಾಜ ಸೇವಾ ಸಂಸ್ಥೆಗಳ ವಿರುದ್ಧ ಬಳಸಿಕೊಳ್ಳಬಹುದು. ದುರ್ಬಲ ಸಮುದಾಯಗಳಿಗೆ ಶಕ್ತಿ ನೀಡುವ ಬದಲು, ಈ ಕಾಯ್ದೆಯು ಅವರ ಧ್ವನಿಯನ್ನು ಮುಚ್ಚಿಹಾಕಿ, ಸರಿಯಾದ ಟೀಕೆಗಳನ್ನು ತಡೆಯಬಹುದು. ಆಡಳಿತ, ಸಾಮಾಜಿಕ ನ್ಯಾಯ ಮತ್ತು ಜವಾಬ್ದಾರಿಯ ಬಗ್ಗೆ ಸಾರ್ವಜನಿಕ ಚರ್ಚೆಯಲ್ಲಿ ಭಾಗವಹಿಸದಂತೆ ಮಾಡಬಹುದು. ಇಂತಹ ಫಲಿತಾಂಶವು ಸಂವಿಧಾನದಲ್ಲಿ ಭರವಸೆ ನೀಡಿರುವ ಸಮಾನತೆ, ಘನತೆ ಮತ್ತು ಎಲ್ಲರನ್ನೂ ಒಳಗೊಳ್ಳುವ ಪ್ರಜಾಪ್ರಭುತ್ವದ ಆಶಯಕ್ಕೆ ಧಕ್ಕೆ ತರುತ್ತದೆ.



ಈ ಮಸೂದೆಗೆ ಸಮಾಜ ಸೇವಾ ಸಂಘಟನೆಗಳು, ಪತ್ರಕರ್ತರ ಸಂಘಗಳು, ಕಾನೂನು ಸಂಸ್ಥೆಗಳು ಮತ್ತು ಇತರ ಸಾಮಾಜಿಕ ಹಿತಾಸಕ್ತ ವ್ಯಕ್ತಿಗಳಿಂದ ವ್ಯಾಪಕ ವಿರೋಧ ವ್ಯಕ್ತವಾಗುತ್ತಿದೆ. ಅನೇಕರು ಈ ಕಾಯ್ದೆಯು ಸಂವಿಧಾನ ವಿರೋಧಿ ಎಂದು ಟೀಕಿಸಿದ್ದಾರೆ. ಇದು ಸೂಕ್ತವಾದ ವಿಮರ್ಶೆ ಹಾಗೂ ವಿರೋಧಾಭಿಪ್ರಾಯಗಳನ್ನು ಮುಚ್ಚಿಹಾಕಲು ದುರುಪಯೋಗವಾಗಬಹುದು ಎಂಬ ಆತಂಕವನ್ನು ವ್ಯಕ್ತಪಡಿಸಿದ್ದಾರೆ. ಒಟ್ಟಾರೆಯಾಗಿ ಈ ಮಸೂದೆಯಲ್ಲಿರೋ ನಿಯಮಗಳು ಸಾರ್ವಜನಿಕ ಚರ್ಚೆಯ ಮೇಲೆ ಎಲ್ಲೆಡೆ ಭಯದ ವಾತಾವರಣ ಸೃಷ್ಟಿಸಿ, ಜನರು ಮಾತನಾಡಲು ಹೆದರುವಂತೆ ಮಾಡಬಹುದು. ಇದು ಪ್ರಜಾಪ್ರಭುತ್ವದ ಆಡಳಿತಕ್ಕೆ ಪೂರ್ತಿ ವಿರುದ್ಧವಾಗಿದೆ.

ಈ ಮಸೂದೆಯು ಸಂವಿಧಾನದ ಮೂರನೇ ಭಾಗದಲ್ಲಿ ಖಾತರಿಪಡಿಸಿದ ಮೂಲಭೂತ ಹಕ್ಕುಗಳ ಮೇಲೆ ನೇರವಾಗಿ ಪರಿಣಾಮ ಬೀರುತ್ತದೆ. ಗಂಭೀರ ಸಾಂವಿಧಾನಿಕ ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ. ಆದ್ದರಿಂದ, ಸಂವಿಧಾನದ 200ನೇ ಅನುಚ್ಛೇದದಡಿ ರಾಜ್ಯಪಾಲರ ವಿವೇಚನಾಧಿಕಾರವನ್ನು ಬಳಸುವುದಕ್ಕೆ ಇದು ಸೂಕ್ತ ಪ್ರಕರಣ. ಈ ಮಸೂದೆಯನ್ನು ಮಾನ್ಯ ರಾಷ್ಟ್ರಪತಿಗಳ ಪರಿಶೀಲನೆಗೆ ಕಾಯ್ದಿರಿಸಿದರೆ, ನಾಗರಿಕ ಸ್ವಾತಂತ್ರ್ಯಗಳು ಮತ್ತು ಒಕ್ಕೂಟ ವ್ಯವಸ್ಥೆಯ ಮೇಲೆ ಆಗುವ ಪರಿಣಾಮಗಳ ಬಗ್ಗೆ ವಿಶಾಲವಾದ ಸಾಂವಿಧಾನಾತಕ್ಷ್ಮಿಕ ಪರೀಕ್ಷೆ ನಡೆಯಬಹುದು.

ಸಾಂವಿಧಾನಾತ್ಮಕ ಆಡಳಿತ, ಪ್ರಜಾಪ್ರಭುತ್ವದ ಸ್ವಾತಂತ್ರ್ಯಗಳು ಮತ್ತು ಕಾನೂನು ರಕ್ಷಣೆಯ ಹಿತದೃಷ್ಟಿಯಿಂದ, ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ (ತಡೆಗಟ್ಟುವಿಕೆ) ಮಸೂದೆ2025ಕ್ಕೆ ಅನುಮೋದನೆ ನೀಡದೆ ತಡೆಹಿಡಿಯಬೇಕು. ಸಂವಿಧಾನದ ಮೌಲ್ಯಗಳ ರಕ್ಷಣೆಗಾಗಿ ಈ ಮಸೂದೆಯನ್ನು ರಾಷ್ಟ್ರಪತಿಗಳ ಪರಿಶೀಲನೆಗೆ ಕಾಯ್ದಿರಿಸುವುದು ಅತ್ಯಗತ್ಯವಾಗಿದೆ ಅನ್ನೋದು ಬಹುತೇಕರ ಅಭಿಪ್ರಾಯವಾಗಿದೆ... ನೀವೇನಂತೀರಿ?

ಅಂದಹಾಗೆ, ಕಾಂಗ್ರೆಸ್ ಸರ್ಕಾರ ಜಾರಿಗೆ ತರಲು ಉದ್ದೇಶಿಸಿರುವ ದ್ವೇಷ ಭಾಷಣ ತಡೆ ಮಸೂದೆಗೆ 'ಅಂಕಿತ' ಹಾಕದಂತೆ ರಾಜ್ಯಪಾಲರಿಗೆ ಹಿಂದೂ ಜನ ಜಾಗೃತಿ ಸಮಿತಿ ಒತ್ತಾಯಪೂರ್ವಕ ಮನವಿ ಸಲ್ಲಿಸಿದೆ! ಈ ಸಂಬಂಧ ರಾಜ್ಯಪಾಲರಿಗೆ ಮನವಿ ಪತ್ರ ಸಲ್ಲಿಸಿರುವ ಸಂಘಟನೆ, ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷದ ಅಪರಾಧಗಳ (ತಡೆಗಟ್ಟುವಿಕೆ) ಮಸೂದೆ 2025 ಅಸಂವಿಧಾನಿಕವಾಗಿದ್ದು, ವಾಕ್ ಮತ್ತು ಧಾರ್ಮಿಕ ಸ್ವಾತಂತ್ರ್ಯಕ್ಕೆ 'ಗಂಭೀರ ಬೆದರಿಕೆ'ಯನ್ನುಂಟು ಮಾಡುತ್ತದೆ.

ರಾಜ್ಯ ವಿಧಾನಮಂಡಲದ ಚಳಿಗಾಲದ ಅಧಿವೇಶನದಲ್ಲಿ ಉಭಯ ಸದನಗಳಲ್ಲಿ ಅಂಗೀಕಾರವಾಗಿರುವ ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ ಮಸೂದೆಗೆ ಅಂಕಿತ ಹಾಕದಂತೆ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರನ್ನು ಹಿಂದೂ ಜನ ಜಾಗೃತಿ ಸಮಿತಿ ಒತ್ತಾಯಿಸಿದೆ. ಈ ಸಂಬಂಧ ರಾಜ್ಯಪಾಲರಿಗೆ ಮನವಿ ಪತ್ರ ಸಲ್ಲಿಸಿರುವ ಸಂಘಟನೆ, ಕರ್ನಾಟಕ ದ್ವೇಷ ಭಾಷಣ ಮತ್ತು ದ್ವೇಷದ ಅಪರಾಧಗಳ (ತಡೆಗಟ್ಟುವಿಕೆ) ಮಸೂದೆ 2025 ಅಸಂವಿಧಾನಿಕವಾಗಿದ್ದು, ವಾಕ್ ಮತ್ತು ಧಾರ್ಮಿಕ ಸ್ವಾತಂತ್ರ್ಯಕ್ಕೆ 'ಗಂಭೀರ ಬೆದರಿಕೆ'ಯನ್ನುಂಟು ಮಾಡುತ್ತದೆ ಎಂದು ಹೇಳಿದೆ.

ದ್ವೇಷ ಭಾಷಣ, ದ್ವೇಷ ಅಪರಾಧ ಮತ್ತು ಪಕ್ಷಪಾತಪ್ರೇರಿತ ಆಸಕ್ತಿ ಎಂಬ ವ್ಯಾಖ್ಯಾನ, ಹಿಂಸಾಚಾರದ ಉದ್ದೇಶ ಇಲ್ಲದಿದ್ದರೂ ಭಾಷಣವನ್ನು ಅಪರಾಧಗೊಳಿಸಬಹುದು ಮತ್ತು ಪೊಲೀಸರಿಗೆ ಆಯ್ದ ಕ್ರಮಕ್ಕೆ ಅವಕಾಶ ನೀಡಬಹುದು ಎಂದು ಹೇಳಿದೆ. ಪ್ರಸ್ತಾವಿತ ಮಸೂದೆಯಡಿ ವೈದಿಕ ಗ್ರಂಥಗಳನ್ನು ಉಲ್ಲೇಖಿಸುವುದು, ಧಾರ್ಮಿಕ ಪ್ರವಚನಗಳು, ಸೈದ್ಧಾಂತಿಕ ಚರ್ಚೆಗಳು, ಮತಾಂತರದ ಚರ್ಚೆಗಳು ಅಥವಾ ಧಾರ್ಮಿಕ ಸಿದ್ಧಾಂತಗಳ ಟೀಕೆಗಳಂತಹ ಪ್ರಮುಖ ಹಿಂದೂ ಚಟುವಟಿಕೆಗಳನ್ನು ಅಪರಾಧೀಕರಿಸಬಹುದು ಎಂದು ಸಮಿತಿ ಎಚ್ಚರಿಸಿದೆ.





ವಾಕ್ ಸಂಬಂಧಿತ ಅಪರಾಧಗಳು ಮತ್ತು ಜಾಮೀನು ಸಿಗದಂತೆ ಮಾಡುವುದನ್ನು ಸಮಿತಿ ಆಕ್ಷೇಪಿಸಿದ್ದು, ಇದು ತಕ್ಷಣದ ಸಂತರು, ಸಾಮಾಜಿಕ ಕಾರ್ಯಕರ್ತರು ಮತ್ತು ಪತ್ರಕರ್ತರಿಗೆ ಕಿರುಕುಳ ಮತ್ತು ಭಿನ್ನಾಭಿಪ್ರಾಯ ಮತ್ತು ಮುಕ್ತ ಅಭಿವ್ಯಕ್ತಿಯ ನಿಗ್ರಹಕ್ಕೆ ಕಾರಣವಾಗಬಹುದು ಎಂದು ಹೇಳಿದೆ.

ರಾಜ್ಯಪಾಲರು 'ಸಂವಿಧಾನದ 200ನೇ ವಿಧಿಯ ಅಡಿಯಲ್ಲಿ ಮಸೂದೆಗೆ ಅಂಕಿತ ಹಾಕದಂತೆ ಮತ್ತು ಮರುಪರಿಶೀಲನೆಗಾಗಿ ಶಾಸಕಾಂಗಕ್ಕೆ ಹಿಂದಿರುಗಿಸಬೇಕು' ಎಂದು ಹಿಂದೂ ಜನ ಜಾಗೃತಿ ಸಂಘಟನೆ ಮನವಿ ಮಾಡಿಕೊಂಡಿದೆ!!

**-ಸಂ.**

2 ☞

ಅಚ್ಚುಕಟ್ಟಾಗಿ ನಿರೂಪಣೆ ಮಾಡಿದ್ದು ಇಂದಿಗೂ ಕಣ್ಮುಂದೆ ಬರುತ್ತದೆ!

ನೇತ್ರ ತಜ್ಞ ಡಾಕ್ಟರ್ ಎಂ.ಸಿ.ಮೋದಿ, ವಿಜ್ಞಾನಿ ಸಿಎನ್‌ಆರ್ ರಾವ್, ಎಸ್ಪಿ ಸಾಂಗ್ಲಿಯಾನ,ಇತರೆ ಪೊಲೀಸರು, ವಿವಿಧ ಇಲಾಖೆಯ ಅಧಿಕಾರಿಗಳೆಲ್ಲ ಅಂದು ನಮ್ಮೊಡನೆ ಬೆರೆತು 'ಸುವರ್ಣ ಭಾರತಿ' ಕಾರ್ಯಕ್ರಮವನ್ನು ಅತ್ಯಂತ ಯಶಸ್ವಿಯಾಗಿ






ನಡೆಸಿಕೊಟ್ಟರು. ನಮ್ಮ ಸಂಪಾದಕರ ಇನ್ನೊಂದು ವಿಶೇಷತೆ ಅಂದ್ರೆ, ಯಾವುದೇ ಕಾರ್ಯಕ್ರಮವಿರಲಿ, ಅದನ್ನು ಅಚ್ಚುಕಟ್ಟಾಗಿ ಮುಗಿಸಿ, ಅತಿಥಿಗಳಿಗೆ ಒಳ್ಳೆಯ ಊಟ ಮಾಡಿಸುವುದು! ಅದೊಂತರ ಸುಖಾಗ್ರ ಭೋಜನ!! ಗುಂಪು ಗುಂಪಾಗಿ ನಿಂತುಕೊಂಡು, ಎಷ್ಟು ಬೇಕೋ ಹಾಕಿಸಿಕೊಂಡು ಮಾತಿನ ಸಮೇತ ತಿನ್ನುವುದು... ಅದೆಲ್ಲ ಈಗ ಸವಿ ನೆನಪು.... ಮರೆಯಲಾಗದ ಸವಿ ಸವಿ ನೆನಪು.....



# ಪರಪ್ಪನ ಅಗ್ರಹಾರಕ್ಕೆ ಡಿಜಿಪಿ ಅಲೋಕ್ ಕುಮಾರ್ ಎಂಟ್ರಿ! ಅಧಿಕಾರಿಗಳ ಬೆವರಿಳಿಸಿ ಖಡಕ್ ವಾರ್ನಿಂಗ್ ಸೆಂಡ್ರಿ!!

**ಬೆಂಗಳೂರು**

✍ ಹೆಚ್.ಕೆ. ಮಹದೇವ್

ಖೈದಿಗಳಿಗೆ ಸಿಗುವ 'ರಾಜಾತಿಥ್ಯ'ದ ವಿಚಾರವಾಗಿ ಸದಾ ಸುದ್ದಿಯಲ್ಲಿರುವ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ವ್ಯವಸ್ಥೆಯಲ್ಲಿ ಬದಲಾವಣೆಯ ಗಾಳಿ ಬೀಸುವ ಲಕ್ಷಣಗಳು ಕಾಣಿಸುತ್ತಿವೆ. ನೂತನ ಕಾರಾಗೃಹ ಡಿಜಿಪಿ ಆಗಿ ಅಧಿಕಾರ ವಹಿಸಿಕೊಂಡ ಅಲೋಕ್‌ಕುಮಾರ್ ಅವರು ನಡೆಸಿದ ದಿಢೀರ್ ಜೈಲು ಭೇಟಿ, ಅಲ್ಲಿನ ಅಧಿಕಾರಿಗಳು ಮತ್ತು ಸಿಬ್ಬಂದಿಯಲ್ಲಿ ನಡುಕ ಹುಟ್ಟಿಸಿದೆ.

ಅಲೋಕ್ ಅವರ ಆಜ್ಞೆಯನ್ನು ಅಕ್ಷರಶ ಪಾಲಿಸುತ್ತಿರುವ ಸಿಎಸ್ ಅಂಶುಕುಮಾರ್ ಅವರು ಹಗಲು ರಾತ್ರಿ ಸುಳಿವೇ ನೀಡದೆ ಜೈಲು ಬ್ಯಾರಕ್ ಒಳಗೆ ದಾಳಿ ನಡೆಸುತ್ತಲೇ ಇದ್ದಾರೆ. ಮೊನ್ನೆ ಮೊನ್ನೆ ಕೂಡ ಒಂದೇ ದಿನದಲ್ಲಿ ಎರಡೆರಡು ಭಾರಿ ದಾಳಿ ಮಾಡಿ ಖೈದಿಗಳು ಅಡಗಿಸಿಟ್ಟಿದ್ದ ಮೊಬೈಲ್‌ಗಳನ್ನು ಚಾಕು ಚೂರಿ ಇತ್ಯಾದಿಗಳನ್ನು ಜಪ್ತಿ ಮಾಡಿದ್ದಾರೆ.

**ಕಳ್ಳಾಟ ಬಂದ್, ಕಠಿಣ ಕ್ರಮ ಫಿಕ್ಸ್!**

ಕಾರಾಗೃಹ ಇಲಾಖೆ ನೂತನ ಡಿಜಿಪಿ ಅಲೋಕ್ ಕುಮಾರ್ ಅವರು ತಮ್ಮ ಮೊದಲ ಭೇಟಿಯಲ್ಲೇ ಜೈಲು ಅಧಿ ಕಾರಿಗಳು ಮತ್ತು ಸಿಬ್ಬಂದಿಯನ್ನು ತರಾಟೆಗೆ ತೆಗೆದುಕೊಂಡಿದ್ದರ ಫಲ ಇದೆನ್ನಬಹುದು. ಪರಪ್ಪನ ಅಗ್ರಹಾರ ಜೈಲಿನ ಆವರಣದಲ್ಲಿನ ಪಾರ್ಕಿಂಗ್ ವಿಚಾರವಾಗಿಯೂ ಅಧಿಕಾರಿಗಳಿಗೆ ಕ್ಲಾಸ್ ತೆಗೆದುಕೊಂಡ ಅಲೋಕ್‌ಕುಮಾರ್ ಅವರು, 'ಇನ್ನು ಮುಂದೆ ಯಾವುದೇ ಕಳ್ಳಾಟ ನಡೆದರೆ ಕಠಿಣ ಕ್ರಮ ಎದುರಿಸಲು ಸಿದ್ಧರಾಗಿರಿ' ಎಂದು ನೇರವಾಗಿಯೇ ಖಡಕ್ ವಾರ್ನಿಂಗ್ ನೀಡಿದ್ದಾರೆ. ಇದು, ಜೈಲಿನ ಕಳಪೆ ಹೆಸರಿಗೆ ಕಾರಣವಾದ ಹಳೆಯ ಪದ್ಧತಿಗಳನ್ನು ಇನ್ನು ಮುಂದೆ ಸಹಿಸುವುದಿಲ್ಲ ಎಂಬುದರ ಸ್ಪಷ್ಟ ಸಂಕೇತವಾಗಿದೆ.





**ಗಾಂಜಾ, ಮೊಬೈಲ್ ಸಿಕ್ಕರೆ ಸಿಬ್ಬಂದಿಯೇ ಹೊಣೆ!**

ಜೈಲಿನೊಳಗೆ ನಡೆಯುವ ಅಕ್ರಮ ಚಟುವಟಿಕೆಗಳಿಗೆ ಸಂಪೂರ್ಣ ಕಡಿವಾಣ ಹಾಕಲು ಡಿಜಿಪಿ ಮುಂದಾಗಿದ್ದಾರೆ. 'ಎಲ್ಲಾ ವ್ಯವಹಾರಗಳು ಸಂಪೂರ್ಣವಾಗಿ ನಿಲ್ಲಬೇಕು' ಎಂದು ಆದೇಶಿಸಿರುವ ಅವರು, ಜವಾಬ್ದಾರಿಯನ್ನು ನೇರವಾಗಿ ಸಿಬ್ಬಂದಿಯ ಹೆಗಲಿಗೆ ಹೊರಿಸಿದ್ದಾರೆ. ಈ ಕುರಿತು ಅವರು ನೀಡಿದ ಎಚ್ಚರಿಕೆ ಹೀಗಿದೆ:

ಇನ್ಮುಂದೆ ಜೈಲಿನೊಳಗೆ ಗಾಂಜಾ, ಬೀಡಿ, ಸಿಗರೇಟ್ ಸಿಗುವುದಿಲ್ಲ. ಒಂದು ವೇಳೆ ಮೊಬೈಲ್ ಅಥವಾ ಗಾಂಜಾ ಸಾಗಾಣೆ ಮಾಡಿದರೆ ಸಂಬಂಧಪಟ್ಟ ಸಿಬ್ಬಂದಿ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು. ನಿಷೇಧಿತ ವಸ್ತುಗಳು ಪತ್ತೆಯಾದರೆ ಸಂಬಂಧಪಟ್ಟ ಸಿಬ್ಬಂದಿಯನ್ನೇ ಹೊಣೆಗಾರರನ್ನಾಗಿ ಮಾಡುವುದರಿಂದ, ಕಾರಾಗೃಹದೊಳಗೆ ವಸ್ತುಗಳನ್ನು ಕಳ್ಳಸಾಗಣೆ ಮಾಡಲು ಸಹಾಯ ಮಾಡುವ ಆಂತರಿಕ ಜಾಲವನ್ನು ಬೇರುಸಹಿತ ಕಿತ್ತು ಹಾಕುವ ಗುರಿಯನ್ನು ಈ ಕ್ರಮ ಹೊಂದಿದೆ.

**ಬ್ಯಾರಕ್‌ನಿಂದ ಬೇಕರಿವರೆಗೆ ಸಂಪೂರ್ಣ ಪರಿಶೀಲನೆ!**

ಡಿಜಿಪಿ ಅಲೋಕ್‌ಕುಮಾರ್ ಅವರ ಈ ಭೇಟಿ ಕೇವಲ ಮೇಲ್ನೋಟದ ಪರಿಶೀಲನೆಯಾಗಿರಲಿಲ್ಲ. ಅವರು ಐಜಿಪಿ ದಿವ್ಯಾ, ಡಿಸಿಪಿ ನಾರಾಯಣ ಮತ್ತು ಮುಖ್ಯ ಅಕ್ಷಕ ಅಂಶುಕುಮಾರ್ ಸೇರಿದಂತೆ 50ಕ್ಕೂ ಹೆಚ್ಚು ಅಧಿಕಾರಿಗಳ ತಂಡದೊಂದಿಗೆ ಜೈಲಿನ ಮೂಲೆ ಮೂಲೆಯನ್ನೂ ಪರಿಶೀಲಿಸಿದರು. ಜೈಲಿನ ಹೊರಾಂಗಣದಿಂದ ಹಿಡಿದು ಪ್ರತಿ ಬ್ಯಾರಕ್‌ಗಳು, ಅಡುಗೆ ಮನೆ, ಆಸ್ಪತ್ರೆ ಹಾಗೂ ಬೇಕರಿಗಳಿಗೂ ಖುದ್ದು ಭೇಟಿ ನೀಡಿ ಅಲ್ಲಿನ ವ್ಯವಸ್ಥೆಯನ್ನು ಅವಲೋಕಿಸಿದರು. ಇದು ಜೈಲಿನ ಪ್ರತಿಯೊಂದು ಕಾರ್ಯಾಚರಣೆಯ ಮೇಲೆ ಹಿಡಿತ ಸಾಧಿಸುವ ಗಂಭೀರ ಪ್ರಯತ್ನ ಎಂಬುದನ್ನು ಸ್ಪಷ್ಟಪಡಿಸುತ್ತದೆ.



**ಸುಧಾರಣೆಯ ಹೊಸ ಭರವಸೆ?**

ಒಟ್ಟಿನಲ್ಲಿ, ನೂತನ ಡಿಜಿಪಿ ಅಲೋಕ್ ಕುಮಾರ್ ಅವರ ಈ ದಿಢೀರ್ ಭೇಟಿ ಮತ್ತು ಖಡಕ್ ಎಚ್ಚರಿಕೆಗಳು ಪರಪ್ಪನ ಅಗ್ರಹಾರದಲ್ಲಿ ಸುಧಾರಣೆಯ ಪರ್ವ ಆರಂಭವಾಗುವ ಸೂಚನೆ ನೀಡಿವೆ. ಆದರೆ, ಈ ಮೊದಲ ಭೇಟಿಯಲ್ಲೇ ಖಡಕ್ ಎಚ್ಚರಿಕೆಗಳು ಪರಪ್ಪನ ಅಗ್ರಹಾರದ 'ರಾಜಾತಿಥ್ಯ' ಸಂಸ್ಕೃತಿಗೆ ನಿಜವಾಗಿಯೂ ಅಂತ್ಯ ಹಾಡುತ್ತವೆಯೇ? ಕಾದು ನೋಡಬೇಕಿದೆ. ☯



## ರೌಡಿಗಳ ಪಾಲಿಗೆ ಸಿಂಹಸ್ವಪ್ನ...

**1994** ಬ್ಯಾಚ್‌ನ ಐಪಿಎಸ್ ಅಧಿಕಾರಿ ಅಲೋಕ್ ಕುಮಾರ್ ಅವರು ಕರ್ನಾಟಕ ರಾಜ್ಯ ಕಂಡ ಅಪರೂಪದ ಅತ್ಯಂತ ದಕ್ಷ ಪೊಲೀಸ್ ಆಫೀಸರ್. ಅಂಥ ಸೂರ್ಯನಿಗೂ ಗ್ರಹಣ ಹಿಡಿಯುತ್ತೆ... ಎಂಬಂತೆ, 2019ರಲ್ಲಿ ನಡೆದಿದ್ದ ಫೋನ್ ಟ್ಯಾಪಿಂಗ್ ಹಗರಣ ಪ್ರಕರಣದಲ್ಲಿ ಅಲೋಕ್ ಕುಮಾರ್ ಸೇರಿ ಕೆಲ ಅಧಿಕಾರಿಗಳ ವಿರುದ್ಧ ರಾಜ್ಯ ಸರ್ಕಾರ ಇಲಾಖಾ ತನಿಖೆಗೆ ಆದೇಶ ಹೊರಡಿಸಿತ್ತು. ಆ ವೇಳೆ ಅಲೋಕ್ ಕುಮಾರ್ ಬೆಂಗಳೂರು ಮಹಾನಗರದ ಪೊಲೀಸ್ ಆಯುಕ್ತರಾಗಿದ್ದರು. ಸಿಬಿಐ ಆ ಪ್ರಕರಣದ ಬಗ್ಗೆ ತನಿಖೆ ನಡೆಸಿ 'ಬಿ' ರಿಪೋರ್ಟ್ ಸಲ್ಲಿಸಿತ್ತು.

ಆದರೆ ರಾಜ್ಯ ಸರ್ಕಾರ 2025 ಮೇ ತಿಂಗಳಿನಲ್ಲಿ ಇಲಾಖಾ ತನಿಖೆಗೆ ಆದೇಶಿಸಿತ್ತು! ಆಗಿನ ಸರ್ಕಾರದ ಈ ಆದೇಶವನ್ನು ಪ್ರಶ್ನಿಸಿ ಅಲೋಕ್ ಕುಮಾರ್ ಅವರು ಇತ್ತೀಚೆಗೆ ಕೇಂದ್ರ ಆಡಳಿತಾತ್ಮಕ ನ್ಯಾಯಮಂಡಳಿ (ಕೆಎಟಿ) ಮೊರೆ ಹೋಗಿದ್ದರು. ನನ್ನ ವಿರುದ್ಧ ಷಡ್ಯಂತ್ರ ಮಾಡಲಾಗಿದೆ ಎಂದು ವಾದಿಸಿದ್ದರು.


ಅಲೋಕ್ ಕುಮಾರ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ಮಾಡಿದ್ದ ಕೇಂದ್ರ ಆಡಳಿತಾತ್ಮಕ ನ್ಯಾಯಮಂಡಳಿಯ ಇಬ್ಬರು ನ್ಯಾಯಮೂರ್ತಿಗಳು ವಿಭಿನ್ನ ತೀರ್ಪು ನೀಡಿದ್ದರು. ಹೀಗಾಗಿ ವಿಚಾರಣೆ ಸಿಎಟಿ ಮುಖ್ಯಸ್ಥ ನ್ಯಾಯಮೂರ್ತಿ ರಣ್‌ಜೀತ್ ಅವರ ಬಳಿಗೆ ಹೋಗಿತ್ತು. ಈ ವೇಳೆ ವಾದ ಪ್ರತಿವಾದದ ಬಳಿಕ ಅಕ್ಟೋಬರ್ 14ರಂದು ತನಿಖೆಯನ್ನು ರದ್ದುಗೊಳಿಸಿ ಮಹತ್ವದ ತೀರ್ಪು ನೀಡಲಾಗಿತ್ತು.

ಜೊತೆಗೆ ಅಲೋಕ್ ಅವರಿಗೆ ತಡೆ ಹಿಡಿಯಲಾಗಿದ್ದ ಬಡ್ತಿ ಮತ್ತು ಇತರೆ ಸೌಲಭ್ಯಗಳನ್ನು ನೀಡುವಂತೆ ಆದೇಶಿಸಲಾಗಿತ್ತು. ಆ ಮೂಲಕ ಅಲೋಕ್ ಕುಮಾರ್ ರಾಜ್ಯ ಸರ್ಕಾರದ ವಿರುದ್ಧ ಗೆದ್ದಿದ್ದರು ಎಂದೇ ಹೇಳಬೇಕು! ಸರ್ಕಾರ ಸಿಎಟಿ ಆದೇಶ ಪ್ರಶ್ನಿಸಿ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿತ್ತು. ಆದರೆ ಸಿಎಟಿ ಆದೇಶಕ್ಕೆ ಹೈಕೋರ್ಟ್ ತಡೆ ನೀಡಲು ನಿರಾಕರಿಸಿತ್ತು. ಹೀಗಾಗಿ ಇದೀಗ ಅಲೋಕ್ ಕುಮಾರ್ ಅವರಿಗೆ ಬಡ್ತಿ ನೀಡಿ ಸರ್ಕಾರ ಆದೇಶ ಹೊರಡಿಸಿದೆ.

ರಾಜ್ಯ ಸರ್ಕಾರದ ವಿರುದ್ಧದ ಕಾನೂನು ಹೋರಾಟದಲ್ಲಿ ಐಪಿಎಸ್ ಅಧಿಕಾರಿ ಅಲೋಕ್ ಕುಮಾರ್ ಗೆಲುವು ಸಾಧಿಸಿದ್ದಾರೆ. ಅಲ್ಲದೇ ಮುಂಬಡ್ತಿ ಪಡೆದುಕೊಳ್ಳುವಲ್ಲಿಯೂ ಯಶಸ್ವಿಯಾಗಿದ್ದಾರೆ. 2019ರ ಟೆಲಿಫೋನ್ ಟ್ಯಾಪಿಂಗ್ ಪ್ರಕರಣಕ್ಕೆ ಸಂಬಂಧಿಸಿದಂತೆ ಹಿರಿಯ ಐಪಿಎಸ್ ಅಧಿಕಾರಿ ಅಲೋಕ್‌ಕುಮಾರ್ ವಿರುದ್ಧ ರಾಜ್ಯ ಸರ್ಕಾರ ಆದೇಶಿಸಿದ್ದ ಇಲಾಖಾ ತನಿಖೆಯನ್ನು ಕೇಂದ್ರ ಆಡಳಿತಾತ್ಮಕ ನ್ಯಾಯಮಂಡಳಿ ರದ್ದುಗೊಳಿಸಿದೆ. ಇದರ ಬೆನ್ನಲ್ಲೇ ಇದೀಗ ರಾಜ್ಯ ಸರ್ಕಾರ ಅಲೋಕ್ ಕುಮಾರ್‌ಗೆ ಎಡಿಜಿಪಿಯಿಂದ ಡಿಜಿಪಿಯಾಗಿ ಬಡ್ತಿ ನೀಡಿದ್ದು, ಡಿಸೆಂಬರ್ 11 ಅಲೋಕ್‌ಕುಮಾರ್ ಅವರು ಕಾರಾಗೃಹ ಇಲಾಖೆಯ ನೂತನ ಡಿಜಿಪಿಯಾಗಿ ಅಧಿಕಾರ ಸ್ವೀಕರಿಸಿದ್ದಾರೆ!

ಈ ಹಿಂದೆ ಬೆಂಗಳೂರು, ಬಿಜಾಪುರ, ಕಲಬುರ್ಗಿ, ಯಾದಗಿರಿ ಹಾಗೂ ಇತರೆ ಜಿಲ್ಲೆಗಳಲ್ಲಿ ಕರ್ತವ್ಯ ನಿರ್ವಹಿಸಿದ್ದಾರೆ. ಕೆಲ ಕಾಲ ಸಿಸಿಬಿ ಜಾಯಿಂಟ್ ಕಮಿಷನರ್ ಆಗಿಯೂ ದುಡಿದು ರೌಡಿಗಳ ಪಾಲಿಗೆ ಸಿಂಹಸ್ವಪ್ನ ವಾಗಿದ್ದರು. ಇಂತಹ ದಕ್ಷ ಪೊಲೀಸ್ ಅಧಿಕಾರಿ ಅಲೋಕ್ ಕುಮಾರ್ ಅವರು ಇದೀಗ ಕಾರಾಗೃಹ ಇಲಾಖೆಗೆ ಅಂಟಿರೋ ಕಳಂಕವನ್ನು ತೊಳೆಯಲು ಪಣ ತೊಟ್ಟು ಕಾರ್ಯತತ್ಪರರಾಗಿದ್ದಾರೆ. ಈ ಕಾರ್ಯದಲ್ಲಿ ಇವರು ಯಶಸ್ವಿಯಾಗಲಿ... ಜೈಲುಗಳು ಇನ್ನಾದರೂ ಸುಧಾರಣೆ ಕಾಣಲಿ... ☯

# ಡ್ರಗ್ಸ್ ನಶೆಯಲ್ಲಿ ನಡುರೋಡಲ್ಲೇ ಬೆತ್ತಲಾದ ಕುಖ್ಯಾತ ರೌಡಿ ಮಲೆಯಾಳಿ ಮಧು!



ಕೃಷ್ಣ ವಿಹಾರ್ ಹೋಟೆಲ್ ಮುಂದೆ ನೇಕೆಡ್ ಮಲೆಯಾಳಿ

ಮಹದೇವ್ ಕೆಂಪಯ್ಯ

**ಜೆ**.ಪಿ. ನಗರದಲ್ಲಿ ನಡೆದಿದ್ದ ಜೋಡಿ ಕೊಲೆಯ ಕುಖ್ಯಾತಿ ಹೊಂದಿದ್ದ ರೌಡಿ ಶೀಟರ್ ಮಲೆಯಾಳಿ ಮಧು ಇದೀಗ ಇಡೀ ಸೌತ್ ಬೆಂಗಳೂರನ್ನೇ ಬೆಚ್ಚಿಬೀಳಿಸಿದ್ದಾನೆ! ಒಂದೇ ಒಂದು ಲೈನ್ ಡ್ರಗ್ಸ್ ಸೇವಿಸಿ ಮನೆಯಿಂದ ಹೊರ ಬಿದ್ದವನು ಮೈಮೇಲಿನ ಬಟ್ಟೆಗಳನ್ನೆಲ್ಲಾ


ಕೊಲೆಯಾದ ರೌಡಿ ಮಂಜ ಹಾಗೂವರುಣ್ ರೆಡ್ಡಿ

ಕಿತ್ತೆಸೆದು ಬೀದಿಗಳಲ್ಲಿ ಬೆತ್ತಲಾಗಿ ಸುತ್ತಾಡಿ ಗಲಾಟೆ ಮಾಡುತ್ತಾ, ಬೇಕರಿ ಅಂಗಡಿಗಳನ್ನು ಪುಡಿಗುಟ್ಟುತ್ತಾ ಓಡಾಡಿದ್ದಾನೆ!


ಇದ್ಯಾಕಯ್ಯ ಹಿಂಗಾಡ್ತಿಯೇ ಅಂತ ಕೇಳಲು ಹೋದ ಹೆಂಡತಿಗೆ ಹಿಡಿದು ದನಕ್ಕೆ ಬಡಿದಂಗೆ ಬಡಿದಿದ್ದಾನೆ. ನೀನು ಯಾರ ಜೊತೆಗೋ ಅನೈತಿಕ ಸಂಬಂಧ ಇಟ್ಕೊಂಡಿದೀಯಾ... ಎಂದು ಕಿರುಚಾಡಿದ್ದಾನೆ! ಜೆ.ಪಿ. ನಗರದ 8ನೇ ಹಂತದ ಜಂಬೂಸವಾರಿ ದಿಣ್ಣೆಯ ರಾಯಲ್ ಕೌಂಟಿ ಪಾರ್ಕ್ ನಲ್ಲಿರುವ ಬಿಬಿಎಂಪಿ ಕಛೇರಿಗೆ ನುಗ್ಗಿ ಕಿಟಕಿ ಗ್ಲಾಸ್ ಪುಡಿ ಮಾಡಿದ್ದಾನೆ! ಹಿಡಿಯಲು ಹೋದವರಿಗೆ ಗ್ಲಾಸ್ ಪೀಸ್ ನಿಂದ ತಿವಿಯಲು ಹೋಗಿದ್ದಾನೆ. ಆದಾಗ್ಯೂ ಜನ ಸುತ್ತುವರೆಯುತ್ತಿದ್ದಾಗ, ಹತ್ರ ಬಂದ್ರೆ ನಾನೇ ಕತ್ತು ಕುಯ್ದುಕೊಳ್ತೀನಿ ಎಂದು ಹೆದರಿಸಿದ್ದಾನೆ! ತಾನೇನು ಮಾಡ್ತಿದ್ದೇನೆಂದು ತಿಳಿಯದೇ ರಸ್ತೆಗಳಲ್ಲಿ ಕಾಚಾ ಕೂಡ ಇಲ್ಲದೆ ನಗ್ನವಾಗಿ ಗಂಟೆ, ಕರಿ ಗುಂಜು ಪ್ರದರ್ಶನ ಮಾಡಿಕೊಂಡು ಹಣೆಯಲ್ಲಿ ರಕ್ತ ಸುರಿಸಿಕೊಂಡು ಓಡಾಡಿದ್ದಾನೆ!

ಜೆ.ಪಿ. ನಗರದ 8ನೇ ಮುಖ್ಯರಸ್ತೆಯಲ್ಲಿ ಅಡ್ಡ ಬಂದ ಕಾರುಗಳಿಗೆ ಅಡ್ಡ ಕುಳಿತು ಪ್ರಯಾಣಕ್ಕೆ ಅಡ್ಡಿ ಪಡಿಸಿದ್ದಾನೆ! ಇದನ್ನೆಲ್ಲಾ ನೋಡಿದ ಜನ ಈತ ಮಾಡಿದ ಪಾಪ ಹಾಗೂ ಇವನಿಗೆ ಅಂಟಿದ ಸತ್ತವರ ಮನೆಯ ಶಾಪವನ್ನು ನೆನೆದು ಕರ್ಮ ಬೆನ್ನತ್ತಿದೆ... ಎಂದುಕೊಂಡು ಸುಮ್ಮನಾಗಿದ್ದಾರೆ! ಮಚ್ಚು ಹಿಡಿದು ತಲೆ ಕಡಿದು ರಕ್ತ ಹರಿಸುತ್ತಿದ್ದ ರಣ ರೌಡಿಯ ಪರಿಸ್ಥಿತಿ ನೋಡಿ ವಿಧಿಯಾಟ, ಕರ್ಮ ರಿಟರ್ನ್ಸ್ ಅಂದುಕೊಂಡ ಕೆಲವರು 112 ಹೊಯ್ಸಳ ಪೊಲೀಸರಿಗೆ ಫೋನ್ ಮಾಡಿ ಕರೆಸಿದ್ದಾರೆ!

**ಪೊಲೀಸರಿಗೇ ಡಿಚ್ಚಿ...**

ಆಸಾಮಿ ಮಲೆಯಾಳಿ ಮಧು ತನ್ನನ್ನು ಹಿಡಿಯಲು ಬಂದ ಪೊಲೀಸರಿಗೆ ಹಣೆಯಿಂದ ಡಿಚ್ಚಿ ಹೊಡೆದು ಕೈಯಿಂದ ಗುದ್ದಿ ಗಾಯಗೊಳಿಸಿದ್ದಾನೆ! ಇದರಿಂದ ಉರಿದು ಬಿದ್ದಿರೋ ಕೋಣನಕುಂಟೆ ಪೊಲೀಸರು ರೌಡಿಶೀಟರ್ ಮಧುವನ್ನು ಹಿಗ್ಗಾ ಮುಗ್ಗಾ ಒದ್ದು ಹೆಡೆಮುರಿ ಕಟ್ಟಿ ನಿಮ್ಹಾನ್ಸ್ ಆಸ್ಪತ್ರೆಗೆ ಸೇರಿಸುವುದರ ಜೊತೆಗೆ ಕೇಸು ದಾಖಲಿಸಿದ್ದಾರೆ!

ಡ್ರಗ್ಸ್ ವಿಷಯದಲ್ಲಿ 'ಲೈನ್' ಎಂದು ಕರೆಯುವುದು ಸಾಮಾನ್ಯವಾಗಿ ಪುಡಿ ರೂಪದ ಡ್ರಗ್‌ಗಳನ್ನು (ಕೋಕೇನ್, ಬ್ರೌನ್ ಶುಗರ್, MDMA ಪೌಡರ್ ಇತ್ಯಾದಿ) ಸೇವಿಸುವ ಒಂದು ಅಳತೆ/ವಿಧಾನ ಅನ್ನು ಸೂಚಿಸುತ್ತದೆ. ಪುಡಿ ಡ್ರಗ್ ಅನ್ನು ಸಣ್ಣ ನೇರ ರೇಖೆಯಂತೆ ಮೇಜು, ಗ್ಲಾಸ್, ಮೊಬೈಲ್ ಸ್ಕ್ರೀನ್ ಮುಂತಾದ ಸಮತಟ್ಟಾದ ಮೇಲ್ಮೈ ಮೇಲೆ ಇಡುತ್ತಾರೆ. ನಂತರ ಅದನ್ನು ಮೂಗಿನಿಂದ ಎಳೆದು ಸೇವಿಸುತ್ತಾರೆ ಆ ಒಂದು ನೇರ ರೇಖೆಯಷ್ಟು ಪ್ರಮಾಣವನ್ನೇ 'ಒಂದು ಲೈನ್' ಎಂದು ಸ್ಲಾಂಗ್ ಭಾಷೆಯಲ್ಲಿ ಕರೆಯುತ್ತಾರೆ!




'ಅವನು ಒಂದು ಲೈನ್ ತೆಗೆದುಕೊಂಡ' ಅಂದರೆ ಅವನು ಒಂದು ಸಣ್ಣ ಪ್ರಮಾಣದ ಪುಡಿ ಡ್ರಗ್ ಅನ್ನು ಟೇಬಲ್ ಮೇಲೋ ಅಥವಾ ಮೊಬೈಲ್ ಬೆನ್ನಿನ ಮೇಲೋ ಲೈನ್ ಹಾಕಿಕೊಂಡು ಮೂಗಿನಿಂದ ಸೇವಿಸಿದ್ದಾನೆ ಎಂದು ಅರ್ಥ... ಗಮನಿಸಬೇಕಾದ ಮುಖ್ಯ ವಿಚಾರವೇನೆಂದರೆ, 'ಲೈನ್' ಅನ್ನೋದು ಯಾವುದೇ ಒಂದು ನಿಶ್ಚಿತ ಗ್ರಾಂ ಅಥವಾ ಮಿಲಿಗ್ರಾಂ ಅಳತೆ ಅಲ್ಲ... ವ್ಯಕ್ತಿಯ ಅಭ್ಯಾಸ, ಮಾರಾಟಗಾರನ ಮೇಲೆ ಅವಲಂಬಿತವಾಗಿರೋ ಗೆರೆ! ಕೆಲವೊಮ್ಮೆ ಒಂದು ಲೈನ್ ಕೂಡ ಅಪಾಯಕಾರಿಯಾಗಿ ಪರಿಣಮಿಸಿ ಪ್ರಾಣ ಹಾರಿ ಹೋಗಬಹುದು! ಒವರ್‌ಡೋಸ್, ಮೆದುಳಿಗೆ ಹಾನಿಕಾರಕವಾಗಿ ಕ್ಷಣ ಮಾತ್ರದಲ್ಲಿ ಡ್ರಗ್ ಅಡಿಕ್ಟ್ ಗೊಟಕ್ ಎನ್ನಬಹುದು! ಈಗ ರೌಡಿ ಮಲೆಯಾಳಿ ಮಧು ಕೂಡ ಒಂದು ಲೈನ್ ಡ್ರಗ್ಸ್ ನಶೆಗೇ ಬಟ್ಟೆ ಬಿಚ್ಚಿ ಬೆತ್ತಲಾಗಿದ್ದಾನೆ ಅನ್ನೋದು ಸರ್ವ ವಿಧಿತ!

ಬೆಂಗಳೂರು ಈಗ ಡ್ರಗ್ಸ್ ರಾಜಧಾನಿಯಾಗಿದೆ! ಡ್ರಗ್ಸ್ ಇಲ್ಲಿ ದೊಡ್ಡ ಉದ್ಯಮವಾಗಿದೆ ಎಂದು ಹೋಮ್ ಮಿನಿಸ್ಟರ್ ಜಿ.ಪಿ. ಸಾಹೇಬ್ರೆ ಓಪನ್ ಆಗಿ ಹೇಳುತ್ತಿದ್ದಾರೆ! ಮಲೆಯಾಳಿ ಮಧು ಹೇಳಿಕೇಳಿ ಟ್ಯಾಬ್ಲೆಟ್ ರಘು ಶಿಷ್ಯ! ಗುರುವಿನಂತೆಯೇ ಡ್ರಗ್ಸ್ ಚಟದ ದಾಸನಾಗಿದ್ದ ಈ ಮಲೆಯಾಳಿ ಮಧುಗೆ ಅದ್ಯಾರು ಡ್ರಗ್ಸ್ ಸಪ್ಲೈ ಮಾಡಿದ್ದಾರೋ ಗೊತ್ತಿಲ್ಲ.... ಕಾಚಾ ಕೂಡ ಬಿಡದೆ ಕಿತ್ತೆಸೆದು ಬಟಾ ಬೆತ್ತಲಾಗಿ ಸುತ್ತಾಡಿ ಸಾರ್ವಜನಿಕರನ್ನು ಬೆಸ್ತುಬೀಳಿಸಿದ್ದಾನೆ!

ಮಾತ್ರೆ ಮಧು ಅಲಿಯಾಸ್ ಮಲಯಾಳಿ ಮಧು ಬೆಂಗಳೂರಿನ ಕುಮಾರಸ್ವಾಮಿ ಲೇಔಟ್ ಪೊಲೀಸ್ ಠಾಣೆಯಲ್ಲಿ ರೌಡಿ ಶೀಟರ್ ಆಗಿದ್ದವನು. ಈತನ ವಿರುದ್ಧ ಐದು ಕ್ರಿಮಿನಲ್ ಪ್ರಕರಣಗಳಿವೆ. ಶಂಕರ್ ನಾಗ್ ಅವರ ಕನಸಿನ ಕೂಸಾದ 'ರಂಗಶಂಕರ'ದ ಹತ್ತಿರವಿರುವ ನಂದಿನಿ ಹೋಟೆಲ್ ಸರ್ಕಲ್‌ನಲ್ಲಿ ಪುಟ್ಟೇನಹಳ್ಳಿ ಜಂಕ್ಷನ್‌ನಲ್ಲಿ 2019 ಇಸವಿಯಲ್ಲಿ ಜೋಡಿ ಕೊಲೆ ಮಾಡಿ, ಸತ್ತ ರೌಡಿ ಮುಖದ ಮೇಲೆ ಉಚ್ಚೆ ಹುಯ್ದು ಕತ್ತು ಕುಯ್ದು ಪರಾರಿಯಾಗಿದ್ದವನು ಇದೇ ಮಲೆಯಾಳಿ ಮಧು!





ನಡುರೋಡಲ್ಲಿ ಕುಳಿತಿರುವುದು

**ಬಾಸ್ ಕೊಲೆಗೆ ರಿವೇಂಜ್ ಮಾಡಿದ್ದ 'ಮಾತ್ರೆ' ಮಧು**

ಜೆ.ಪಿ. ನಗರ ದಕ್ಷಿಣ ವಿಭಾಗದ ಪೊಲೀಸರು ಮಿಂಚಿನ ಕಾರ್ಯಾಚರಣೆ ನಡೆಸಿ. ಯಲಚೇನಹಳ್ಳಿ ನಿವಾಸಿ ನರೇಂದ್ರ ಅಲಿಯಾಸ್ ನರು, ಮಧುಸೂಧನ್ ಅಲಿಯಾಸ್ ಮಧುಕರ್, ಮಧು, ಮಲೆಯಾಳಿ ಮಧು, ರಾಕ್ ಮಧು, ಯಲಚೇನಹಳ್ಳಿ ನಿವಾಸಿ ಲಿಖಿನ್ ಬಿ.ವಿ. ಅಲಿಯಾಸ್ ಲಿಖಿನ್ ಬೋಪಣ್ಣರನ್ನು ಹೆಡೆಮುರಿ ಕಟ್ಟಿ ಬಂಧಿಸಿದ್ದರು. ಆ ಜೋಡಿ ಕೊಲೆ ಕೇಸಿನಲ್ಲಿ ಬೆಂಗಳೂರಿನ ಲೇಡಿ ಡಾನ್ ಒಬ್ಬಳ ಹೆಸರು ಕೂಡ ತಳುಕಿ ಹಾಕಿಕೊಂಡಿತ್ತು!

ಕೊಲೆಯಾಗುವ ಮುನ್ನ ಆ ಭಾನುವಾರ ರಾತ್ರಿ ಮಂಜ ಅಲಿಯಾಸ್ ತಮ್ಮ ಮಂಜ ಮತ್ತು ವರುಣ್ ರೆಡ್ಡಿ ಇಬ್ಬರೂ ವಾರಾಂತ್ಯದ ಎಣ್ಣೆ ಪಾರ್ಟಿ ಮುಗಿಸಿ ಬೈಕ್‌ನಲ್ಲಿ ಮನೆಗೆ ಹಿಂತಿರುಗುತ್ತಿದ್ದಾಗ ಎದುರಾಳಿ ಗುಂಪಿನ ಗ್ಯಾಂಗ್ ಕಾರಿನಲ್ಲಿ ಫಾಲೋ ಮಾಡಿ ಹಿಂಬಾಲಿಸಿಕೊಂಡು ಬಂದು ನಂದಿನಿ ಹೋಟೆಲ್ ಮುಂದೆ ತಮ್ಮ ಮಂಜನ ಬೈಕ್‌ಗೆ ಗುದ್ದಿ ಮಾರಕಾಸ್ತ್ರಗಳಿಂದ ಹೊಡೆದು ಕ್ರೂರವಾಗಿ ಹತ್ಯೆ ಮಾಡಿದ್ದರು. ಬೆಂಗಳೂರಿನ ಜೆ.ಪಿ. ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಆಗಸ್ಟ್ 25ನೇ ತಾರೀಕು ರಾತ್ರಿ ಸುಮಾರು 11.30 ಗಂಟೆಗೆ ಭೀಕರ ಜೋಡಿ ಕೊಲೆ ನಡೆದಿತ್ತು. ಇಡೀ ಬೆಂಗಳೂರೇ ಬೆಚ್ಚಿಬಿದ್ದಿತ್ತು.

☞ 10

## ಇಬ್ಬರೂ ಹೆಂಡಿರು ಬಿಟ್ಟು ಹೋಗಿ ಖಿನ್ನತೆ...?!

ಒಂದು ಕಾಲದ ನಟೋರಿಯಸ್ ರೌಡಿ ಶೀಟರ್ ಮಲಯಾಳಿ ಮಧು, ಇಂದು ಬಟ್ಟೆಯೂ ಇಲ್ಲದೆ ಬೀದಿ ಬೀದಿ ಅಲೆಯುವ ದುಸ್ಥಿತಿಗೆ ತಲುಪಿದ್ದಾನೆ. ಆತನ ಇಂದಿನ ಸ್ಥಿತಿ ಎದುರಾಳಿಗೂ ಬೇಡ ಎನ್ನುವಂತಾಗಿದೆ ಎಂದು ಸ್ವತಃ ರೌಡಿ ಶೀಟರ್‌ಗಳೇ ಹೇಳುತ್ತಾರೆ. ಒಂದು ಕಾಲದಲ್ಲಿ ಹೆಸರು ಕೇಳಿದ್ರೆ ಎದುರಾಳಿಗಳು ನಡುಗುವಂತಿದ್ದ ಈ ಕುಖ್ಯಾತ ರೌಡಿ, ಈಗ ನಗ್ನವಾಗಿ ಬೀದಿಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾನೆ. ಎರಡು ಮದುವೆಯಾಗಿದ್ದ ಮಲಯಾಳಿ ಮಧುಗೆ, ಇಬ್ಬರು ಪತ್ನಿಯರೂ ಈಗ ಆತನ ಜೊತೆಗಿಲ್ಲ. ಕೌಟುಂಬಿಕ ಜೀವನ ಸಂಪೂರ್ಣ ಹಾಳಾದ ಕಾರಣ ತೀವ್ರ ಖಿನ್ನತೆಗೆ ಒಳಗಾಗಿರುವ ಮಧು, ಈ ದುರಂತ ಸ್ಥಿತಿಗೆ ತಲುಪಿದ್ದಾನೆ. ತನ್ನ ಕುಟುಂಬ ಜೀವನ ಹಾಳಾಗಿದೆ ಎಂದು ಹೇಳಿಕೊಳ್ಳುತ್ತಾ, ಬಟ್ಟೆ ಬಿಚ್ಚಿಕೊಂಡು ಅಲೆಯುತ್ತಿರುವ ಆತನ ಸ್ಥಿತಿ ನಿಜಕ್ಕೂ ಮನಕಲಕುವಂತಿದೆ. ☯

# ಮಲ್ಪೆ ಪೊಲೀಸರ ಎಡವಟ್ಟು; ಎಸ್ಪಿ ಹೈರಾಣ!

**ಉಡುಪಿ ಜಿಲ್ಲೆಯ ಮಲ್ಪೆ ಪೊಲೀಸ್ ಠಾಣೆಯ ಪೊಲೀಸರು ಇಕ್ಕಟ್ಟಿಗೆ ಸಿಲುಕಿದ್ದಾರೆ. ನ್ಯಾಯಾಲಯದ ಆದೇಶವನ್ನು ಕಾನೂನು ಮೀರಿ ಪಾಲಿಸಲು ಹೋಗಿ ಇದೀಗ ಪೊಲೀಸರ ಮೇಲೆಯೇ ಕ್ರಿಮಿನಲ್ ಮೊಕದ್ದಮೆ ದಾಖಲಾಗಿದೆ. ಇಡೀ ಉಡುಪಿ ಜಿಲ್ಲೆಯ ಪೊಲೀಸ್ ವ್ಯವಸ್ಥೆಯ ಬಗ್ಗೆ ಸಾರ್ವಜನಿಕರಲ್ಲಿ ಅಸಹನೆ ಸೃಷ್ಟಿಸಿದಂತಹ ಪ್ರಕರಣದ ಹಿನ್ನೆಲೆ ಅತ್ಯಂತ ಕುತೂಹಲವಾಗಿದೆ.**

**ಉಡುಪಿ**

✍ ಮೋಹನ್ ಬೋಳಂಗಡಿ


ಅಕ್ಷತಾ ಪೂಜಾರಿ

ಮಲ್ಪೆ ಪೊಲೀಸ್ ಠಾಣೆಯ ಮೂವರು ಸಿಬ್ಬಂದಿಗಳು ಮತ್ತು ಪ್ರಕರಣವೊಂದರ ದೂರುದಾರರು ಸೇರಿಕೊಂಡು ಖಾಸಗಿ ಕಾರಿನಲ್ಲಿ ಬ್ರಹ್ಮಾವರ ಪೊಲೀಸ್ ಠಾಣಾ ವ್ಯಾಪ್ತಿಯ ಉಪ್ಪೂರು ಸಮೀಪದ ಉಗ್ಗೆಲ್‌ಬೆಟ್ಟುವಿನ ಮನೆಯೊಂದಕ್ಕೆ ಡಿಸೆಂಬರ್ 10ರಂದು ಮುಂಜಾನೆ ನಾಲ್ಕು ಗಂಟೆಯ ವೇಳೆಗೆ ಹೋಗಿದ್ದರು. ಅವರು ನ್ಯಾಯಾಲಯ ಹೊರಡಿಸಿದ್ದಂತಹ ವಸೂಲಾತಿ ವಾರಂಟ್ ಜಾರಿ ಮಾಡಲು ಉಗ್ಗೆಲ್ ಬೆಟ್ಟುವಿನ ಉಷಾ ಎಂಬವರ ಮನೆಗೆ ಹೋಗಿದ್ದರು. ವಸೂಲಾತಿ ವಾರಂಟಿಗೂ ಉಷಾ ಅವರಿಗೂ ಯಾವುದೇ ಸಂಬಂಧ ಇರಲಿಲ್ಲ. ಹಾಗಾದರೆ ಪೊಲೀಸರು ಆ ಮನೆಗೆ ಹೋಗಿದ್ದು ಯಾಕೆ ಎಂಬ ಪ್ರಶ್ನೆ ಸಹಜವಾಗಿಯೇ ಮೂಡುತ್ತದೆ. ಪೊಲೀಸರ ಕೈಯಲ್ಲಿದ್ದ ವಸೂಲಾತಿ ವಾರಂಟ್ ಜಾರಿಯಾಗಬೇಕಾಗಿದ್ದದ್ದು ಉಷಾ ಅವರ ಸಹೋದರಿಯ ಮಗನಾದ ಆಶಿಕ್ ಎಂಬಾತನಿಗೆ. ಈ ಆಶಿಕ್ ಮೂಲತಃ ಮಲ್ಪೆ ಬಳಿಯ ಕೊಡವೂರು ನಿವಾಸಿ. ಆತನ ಮನೆಗೆ ಹೋಗಿ ಪೊಲೀಸರು ವಿಚಾರಿಸಿದ ಸಂದರ್ಭದಲ್ಲಿ ಆತ ಚಿಕ್ಕಮ್ಮನ ಮನೆಯಲ್ಲಿ ಇರಬಹುದು ಎಂಬ ಮಾಹಿತಿ ದೊರಕಿತ್ತು. ಪೊಲೀಸರು ಆತನ ಮೊಬೈಲ್ ನಂಬರ್‌ನ ಲೊಕೇಶನ್ ಸರ್ಚ್ ಮಾಡಿದಾಗ ಉಗ್ಗೆಲ್ ಬೆಟ್ಟು ಪರಿಸರವನ್ನು ತೋರಿಸುತ್ತಿತ್ತು. ಆದ್ದರಿಂದ ಪೊಲೀಸರು ಆಶಿಕ್ ಉಷಾ ಅವರ ಮನೆಯಲ್ಲಿಯೇ ಇದ್ದಾನೆ ಎಂಬ ಖಚಿತ ಮಾಹಿತಿಯನ್ವಯ ಹೊತ್ತಲ್ಲದ ಹೊತ್ತಿನಲ್ಲಿ ಕೇವಲ ಮಹಿಳೆಯರೇ ಇರುವಂತಹ ಮನೆಗೆ ನುಗ್ಗಿ ರಾದ್ಧಾಂತ ಸೃಷ್ಟಿಸಿ ತಮ್ಮ ಮೇಲೆ ಕ್ರಿಮಿನಲ್ ಕೇಸ್ ಹಾಕಿಸಿಕೊಂಡಿದ್ದಾರೆ.

### ಯಾಕೆ ಹೋದರು?!

ಮಲ್ಪೆ ಸಮೀಪದ ಕೊಡವೂರಿನ ಆಶಿಕ್ 2014ರಲ್ಲಿ ಬೈಕ್ ಚಲಾಯಿಸಿಕೊಂಡು ಹೋಗುತ್ತಿದ್ದಾಗ ದೇವೇಂದ್ರ ಸುವರ್ಣ ಎಂಬವರಿಗೆ ಡಿಕ್ಕಿ ಹೊಡೆದಿದ್ದ. ಈ ಸಂಬಂಧ ಮಲ್ಪೆ ಠಾಣೆಯಲ್ಲಿ ಕೇಸು ದಾಖಲಾಗಿತ್ತು. ಅಪಘಾತ ಪ್ರಕರಣ ಆಗಿದ್ದುದರಿಂದ ಆರೋಪಿಯಾಗಿದ್ದ ಆಶಿಕ್ ನ್ಯಾಯಾಲಯಕ್ಕೆ ದಂಡ ಕಟ್ಟಿ ಪ್ರಕರಣವನ್ನು ಮುಗಿಸಿಕೊಂಡಿದ್ದ. ಈ ಅಪಘಾತದಲ್ಲಿ ಗಾಯಾಳುವಾಗಿದ್ದ ದೇವೇಂದ್ರ ಸುವರ್ಣ ಅವರು ಸುಮಾರು ದಿನಗಳ ಕಾಲ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಚೇತರಿಸಿಕೊಂಡಿದ್ದರು. ಅವರಿಗೆ ಸುಮಾರು 20ಲಕ್ಷ ರೂ.ಗಳಷ್ಟು ಆಸ್ಪತ್ರೆಗೆ ಖರ್ಚಾಗಿತ್ತು. ಈ ಹಣವನ್ನು ಇನ್ಶೂರೆನ್ಸ್ ಕಂಪೆನಿಯಿಂದ ಪಡೆದುಕೊಳ್ಳುವ ಸಲುವಾಗಿ ಅವರು ಬೈಕಿನ ಇನ್ಶೂರೆನ್ಸ್ ಕಂಪೆನಿ, ಬೈಕಿನ ಮಾಲೀಕ, ಬೈಕಿನ ಸವಾರ ಆಗಿದ್ದ ಆಶಿಕ್‌ನ ವಿರುದ್ಧ ಮೋಟಾರು ವಾಹನ ಅಪಘಾತ ಪರಿಹಾರ ನ್ಯಾಯಾಧಿಕರಣಕ್ಕೆ ಕೇಸು ದಾಖಲಿಸಿದ್ದರು. ಈ ಪ್ರಕರಣ ನ್ಯಾಯಾಧಿಕರಣದಲ್ಲಿ ವಿಚಾರಣೆ ನಡೆದು ಸಂಬಂಧಿತ ಇನ್ಶೂರೆನ್ಸ್ ಕಂಪೆನಿ ಮತ್ತು ಬೈಕಿನ ಮಾಲೀಕ, ಸವಾರ ಸುಮಾರು 25 ಲಕ್ಷ ರೂ. ಪರಿಹಾರ ಕೊಡಬೇಕು ಎಂದು ಆದೇಶ ಹೊರಡಿಸಿತ್ತು. ಈ ಸಂದರ್ಭದಲ್ಲಿ ಬೈಕಿನ ದಾಖಲಾತಿಗಳು ಸರಿಯಾಗಿ ಇಲ್ಲದೇ ಇದ್ದುದರಿಂದ ಇನ್ಶೂರೆನ್ಸ್ ಕಂಪೆನಿ ಪರಿಹಾರ ಕೊಡಲು ನಿರಾಕರಿಸಿತ್ತು.

ಇದರಿಂದಾಗಿ ದೇವೇಂದ್ರ ಪೂಜಾರಿ ಅವರು ನ್ಯಾಯಾಧಿಕರಣ ಆದೇಶ ಮಾಡಿದಂತಹ 25ಲಕ್ಷ ರೂ.ಗಳನ್ನು ವಸೂಲಿ ಮಾಡಲು ಉಡುಪಿಯ ಸಿವಿಲ್ ನ್ಯಾಯಾಲಯದಲ್ಲಿ ವಸೂಲಾತಿ ಮೊಕದ್ದಮೆಯನ್ನು ದಾಖಲಿಸಿದ್ದರು. ನ್ಯಾಯಾಲಯವು ಬೈಕಿನ ಮಾಲೀಕನಿಗೂ, ಬೈಕಿನ ಸವಾರ ಆಶಿಕ್‌ಗೂ ನೋಟೀಸು ನೀಡಿತ್ತು. ಈ ನೋಟೀಸಿಗೆ ಇಬ್ಬರೂ ಪ್ರತಿಕ್ರಿಯಿಸಲಿಲ್ಲ. ಬೈಕಿನ ಮಾಲೀಕ ವಿದೇಶಕ್ಕೆ ಉದ್ಯೋಗಕ್ಕೆ ಹೋಗಿದ್ದರೆ ಆಶಿಕ್ ಈ ಪ್ರಕರಣಕ್ಕೂ ತನಗೂ ಸಂಬಂಧ ಇಲ್ಲ ಎಂಬ ರೀತಿಯಲ್ಲಿದ್ದ. ಯಾವಾಗ ಆಶಿಕ್ ಮತ್ತು ಬೈಕ್‌ನ ಮಾಲೀಕ ಸಿವಿಲ್ ನ್ಯಾಯಾಲಯಕ್ಕೆ ಹಾಜರಾಗಲಿಲ್ಲವೋ ಆ ಸಂದರ್ಭದಲ್ಲಿ ನ್ಯಾಯಾಲಯ ಏಕಪಕ್ಷೀಯವಾಗಿ ನ್ಯಾಯಾಧಿಕರಣ ಆದೇಶ ಮಾಡಿದಂತಹ 25 ಲಕ್ಷ ರೂ.ಗಳನ್ನು ವಸೂಲಿ ಮಾಡುವಂತೆ ರಿಕವರಿ ವಾರಂಟನ್ನು ಹೊರಡಿಸಿತ್ತು. ಸಾಮಾನ್ಯವಾಗಿ ಸಿವಿಲ್ ನ್ಯಾಯಾಲಯ ಹೊರಡಿಸುವಂತಹ ಆದೇಶಗಳನ್ನು ಜಾರಿ ಮಾಡುವ ಅಧಿಕಾರ ಇರುವುದು ಸಿವಿಲ್ ನ್ಯಾಯಾಲಯದ ಬೈಲಿಫ್ ಯಾನೆ ಕೋರ್ಟ್ ಅಮೀನರಿಗೆ. ಅವರು ಆದೇಶವನ್ನು ಜಾರಿಗೊಳಿಸುವ ಸಂದರ್ಭದಲ್ಲಿ ಪ್ರತಿರೋಧ ಎದುರಾಗುವ ಸಾಧ್ಯತೆಗಳು ಇರುವುದರಿಂದ ಪೊಲೀಸರ ರಕ್ಷಣೆ ಪಡೆಯಬೇಕು ಎಂದು ನ್ಯಾಯಾಲಯವು ರಿಕವರಿ ವಾರಂಟ್ ಹೊರಡಿಸುವ ಸಂದರ್ಭದಲ್ಲಿಯೇ ಸೂಚನೆ ನೀಡುತ್ತದೆ.


ದೇವೇಂದ್ರ ಸುವರ್ಣ

ಈ ವಾರಂಟನ್ನು ದೂರುದಾರರಾದ ದೇವೇಂದ್ರ ಸುವರ್ಣ ಅವರು ಅವರ ವಕೀಲರ ಮೂಲಕ ಪಡೆದುಕೊಂಡು ಮಲ್ಪೆ ಪೊಲೀಸ್ ಠಾಣೆಗೆ ಹೋಗಿ ವಾರಂಟ್ ಜಾರಿ ಮಾಡುವಂತೆ ವಿನಂತಿಸಿದ್ದರು. ಮಲ್ಪೆ ಪೊಲೀಸರು ವಾರಂಟಿನ ಹಿನ್ನೆಲೆಯನ್ನು ತಿಳಿಯದೆ ಈ ಪ್ರಕರಣದ ಪ್ರತಿವಾದಿಯಾದ ಆಶಿಕ್‌ನನ್ನು ಬಂಧಿಸಲು ವ್ಯೂಹ ರಚಿಸಿದರು. ಆಶಿಕ್‌ನ ವಾಸ್ತವ್ಯದ ಬಗ್ಗೆ ದೂರುದಾರ ದೇವೇಂದ್ರ ಸುವರ್ಣ ಅವರೇ ಪೊಲೀಸರಿಗೆ ಎಲ್ಲಾ ಮಾಹಿತಿಯನ್ನು ಒದಗಿಸಿದ್ದರು. ಇದರನ್ವಯ ಮಲ್ಪೆ ಠಾಣೆಯ ಮೂವರು ಪೊಲೀಸರು ದೇವೇಂದ್ರ ಸುವರ್ಣ ಹಾಗೂ ಅವರ ಮಗನೊಂದಿಗೆ ಆಶಿಕ್‌ನನ್ನು ಹುಡುಕಿಕೊಂಡು ಉಗ್ಗೆಲ್‌ಬೆಟ್ಟುವಿನ ಆತನ ಚಿಕ್ಕಮ್ಮ ಉಷಾ ಅವರ ಮನೆಗೆ ಬೆಳ್ಳಂಬೆಳಗ್ಗೆ ಅಂದರೆ ಮುಂಜಾನೆ 4.15ರ ವೇಳೆಗೆ ಹೋಗಿದ್ದರು. ಆ ಮನೆಯಲ್ಲಿ ಹಾಸಿಗೆ ಹಿಡಿದಿದ್ದ ಉಷಾ ಅವರ ತಾಯಿ, ಉಷಾ ಮತ್ತು ಕಾಲೇಜು ವಿದ್ಯಾರ್ಥಿನಿ ಅಕ್ಷತಾ ಮಾತ್ರ ಇದ್ದರು. ಪೊಲೀಸರು ಬಾಗಿಲು ತಟ್ಟಿದಾಗ ಉಷಾ ಅವರು ಎದ್ದು ಕಿಟಕಿ ಮೂಲಕ ಪೊಲೀಸರೊಂದಿಗೆ ವಾಗ್ವಾದ ನಡೆಸಿದರು. ಪೊಲೀಸರು ಬಾಗಿಲು ತೆರೆಯುವಂತೆ ಇಲ್ಲದೇ ಇದ್ದಲ್ಲಿ ಬಾಗಿಲು ಮುರಿಯುವ ಬೆದರಿಕೆ ಒಡ್ಡಿದ ಹಿನ್ನೆಲೆಯಲ್ಲಿ ಉಷಾ ಅವರು ಬಾಗಿಲು ತೆರೆದಿದ್ದರು. ಪೊಲೀಸರು ಮನೆಯೊಳಗೆ ನುಗ್ಗಿದಾಗ ಮಗಳು ಅಕ್ಷತಾ ಪೊಲೀಸರಿಗೆ ಅಡ್ಡಿ ಉಂಟು ಪಡಿಸಿದಾಗ ಪೊಲೀಸರು ಆಕೆಯ ಕೈ ಹಿಡಿದು ಎಳೆದಿದ್ದು, ಪರಿಣಾಮವಾಗಿ ಆಕೆಗೆ ಮೂಳೆ ಮುರಿತ ಉಂಟಾಯಿತು.

ಪೊಲೀಸರು ಮನೆಯನ್ನು ಜಾಲಾಡಿ ಆಶಿಕ್ ಮನೆಯಲ್ಲಿ ಇಲ್ಲ ಎಂದು ಖಚಿತಪಡಿಸಿಕೊಂಡು ಆಶಿಕ್ ಸಿಕ್ಕುವವರೆಗೆ ಈ ಮನೆಗೆ ಆಗಿಂದಾಗ್ಗೆ ಬಂದು ತೊಂದರೆ ಕೊಡುತ್ತೇವೆ ಎಂದು ಬೆದರಿಸಿ ಹೊರಟು ಹೋಗಿದ್ದರು.

### ಆಸ್ಪತ್ರೆಗೆ ದಾಖಲು

ಪೊಲೀಸರು ಮನೆಯಿಂದ ಹೋದ ಬಳಿಕ ಅಕ್ಷತಾಗೆ ಕೈ ಮೂಳೆ ಮುರಿತ ಆಗಿರುವುದು ಗಮನಕ್ಕೆ ಬಂತು. ಆಕೆ ಮತ್ತು ತಾಯಿ ಬೆಳಿಗ್ಗೆ ಉಡುಪಿಯ ಅಜ್ಜರಕಾಡು ಆಸ್ಪತ್ರೆಗೆ ಬಂದು ದಾಖಲಾದರು. ವೈದ್ಯರು ವಿಚಾರಿಸಿದಾಗ ಮಲ್ಪೆ ಪೊಲೀಸರು ಮನೆಗೆ ನುಗ್ಗಿ ಹಲ್ಲೆ ನಡೆಸಿದ್ದರಿಂದ ಗಾಯಗಳಾಗಿವೆ ಎಂದು ಮಾಹಿತಿ ನೀಡಿದ್ದರು. ವೈದ್ಯರು ಎಂಎಲ್‌ಸಿ ದಾಖಲಿಸಿಕೊಂಡು ಬ್ರಹ್ಮಾವರ ಠಾಣೆಗೆ ಅಂದರೆ ಘಟನೆ ನಡೆದ ಸ್ಥಳದ ವ್ಯಾಪ್ತಿಯ ಠಾಣೆಗೆ ಇಂಟಿಮೇಷನ್ ಕಳುಹಿಸಿದರು. ಇಂಟಿಮೇಷನ್ ಪಡಕೊಂಡ ಬ್ರಹ್ಮಾವರ ಠಾಣೆಯ ಪ್ರಭಾರಿ ಪೊಲೀಸ್ ಅಧಿಕಾರಿ ಆಸ್ಪತ್ರೆಗೆ ಬಂದು ಚಿಕಿತ್ಸೆ ಪಡೆಯುತ್ತಿದ್ದ ಅಕ್ಷತಾಯವರ ಹೇಳಿಕೆ ದಾಖಲಿಸಿಕೊಂಡು ತೆರಳಿದ್ದರು. ಎರಡು ದಿನಗಳ ಬಳಿಕ ಅಕ್ಷತಾಯವರು ಹೇಳಿಕೆ ದಾಖಲು ಮಾಡಿಕೊಳ್ಳಲು ಬಂದಿದ್ದ ಪೊಲೀಸ್ ಅಧಿಕಾರಿಯನ್ನು ದೂರವಾಣಿ ಮೂಲಕ ಸಂಪರ್ಕಿಸಿದಾಗ ಅವರು ಆಘಾತಕಾರಿ ಮಾಹಿತಿ ನೀಡಿದ್ದರು. ಬ್ರಹ್ಮಾವರ ಪೊಲೀಸ್ ಠಾಣೆಯಲ್ಲಿ ಮಲ್ಪೆ ಠಾಣೆಯ ಹೆಡ್‌ಕಾನ್ಸ್‌ಟೇಬಲ್ ವಿಶ್ವನಾಥ್ ಎಂಬವರು ನೀಡಿದ ದೂರಿನಂತೆ ಉಷಾ ಆಕೆಯ ಮಗಳು ಅಕ್ಷತಾ ಅವರ ಮೇಲೆಯೇ ಸರಕಾರಿ ಅಧಿಕಾರಿಗಳ ಕರ್ತವ್ಯಕ್ಕೆ ಅಡ್ಡಿ ಎಂಬಂತೆ ದೂರು ದಾಖಲಾಗಿದೆ. ಇದು ಜಾಮೀನು ರಹಿತ ಅಪರಾಧವಾಗಿದ್ದು, ಬಂಧಿಸುವ ಎಚ್ಚರಿಕೆಯನ್ನು ನೀಡಿದ್ದರು. ಇದರಿಂದ ಆಘಾತಕ್ಕೊಳಗಾದ ಅಕ್ಷತಾ ಅವರು ಆಸ್ಪತ್ರೆಯ ಬೆಡ್ಡಿನ ಮೇಲೆಯೇ ಕುಳಿತುಕೊಂಡು ತನ್ನ ಮೊಬೈಲ್‌ನಲ್ಲಿ ಸೆಲ್ಫಿ ವೀಡಿಯೋವೊಂದನ್ನು ಮಾಡಿ ತನಗಾಗಿರುವ ಅನ್ಯಾಯದ ಬಗ್ಗೆ ನೋವು ತೋಡಿಕೊಂಡರು. ಈ ವೀಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿ ಸಾರ್ವಜನಿಕವಾಗಿ ಆಕ್ರೋಶ ವ್ಯಕ್ತವಾಯಿತು.


ಪೊಲೀಸ್ ದೌರ್ಜನ್ಯಕ್ಕೆ ಒಳಗಾದ ಬ್ರಹ್ಮಾವರದ ಅಕ್ಷತಾ ಪೂಜಾರಿ; ಆಸ್ಪತ್ರೆಯಲ್ಲಿ ಭೇಟಿ ನೀಡಿದ ವಿನಯ್‌ಕುಮಾರ್ ಸೊರಕೆ

ಅಕ್ಷತಾ ಅವರಿಗೆ ಆದ ಅನ್ಯಾಯವನ್ನು ಪ್ರತಿಭಟಿಸಲೇಬೇಕು ಎಂದು ಆಕೆಯ ಸಮುದಾಯದ ಮುಖಂಡರು ಸ್ಥಳೀಯವಾಗಿ ಸಭೆ ಸೇರಿ ಚರ್ಚಿಸಿ ಜಿಲ್ಲಾ ಎಸ್ಪಿ ಹರಿರಾಮ್ ಶಂಕರ್ ಅವರನ್ನು ಅವರ ಕಚೇರಿಯಲ್ಲಿ ಭೇಟಿಯಾಗಿ ಮನವಿ ಅರ್ಪಿಸಿದರು ಮಾತ್ರವಲ್ಲದೇ ತಪ್ಪು ಮಾಡಿರುವ ಪೊಲೀಸ್ ಅಧಿಕಾರಿಗಳ ಮೇಲೆ

☞ 10




ಪ್ರತಿಭಟನಾಕಾರರು

# ಹಾಲಿ-ಮಾಜಿ ಶಾಸಕರ ಮಧ್ಯೆ ಕೋಳಿ ಕಾಳಗ!

ದಕ್ಷಿಣ ಕನ್ನಡ

✍ ಮೋಹನ್ ಬೋಳಂಗಡಿ

ದಕ್ಷಿಣ ಕನ್ನಡ ಜಿಲ್ಲೆ ಅಂದರೆ ಕರಾವಳಿಯ ವೈವಿಧ್ಯಮಯ ಆಚರಣೆಗಳಿವೆ. ಇಲ್ಲಿ ಸಾವಿರಾರು ದೈವಗಳ ಆರಾಧನೆ ನಡೆಯುತ್ತದೆ. ಹಲವಾರು ದೇವಸ್ಥಾನಗಳಿವೆ. ನಾಗಾರಾಧನೆಯ ಪುಣ್ಯ ಕ್ಷೇತ್ರಗಳು ಇವೆ. ವರ್ಷಂಪೂರ್ತಿ ದೈವ ದೇವರುಗಳ ಆಚರಣೆ ನಡೆಯುತ್ತಲೇ ಇರುತ್ತದೆ. ಪ್ರತಿಯೊಂದು ದೈವದ ಆಚರಣೆಗಳು ಭಿನ್ನವಾಗಿರುತ್ತದೆ. ಸ್ಥಳೀಯವಾಗಿ ಜನರು ನಂಬಿಕೊಂಡು ಬಂದಂತಹ ರೀತಿಯಲ್ಲಿ ಆಚರಣೆಗಳು ನಡೆಯುತ್ತದೆ. ಬಹುತೇಕ ದೈವಗಳು ಮಾಂಸಾಹಾರಿಗಳು. ಅವುಗಳಿಗೆ ಕುರಿ, ಕೋಳಿ, ಹಂದಿ, ಕೋಣಗಳನ್ನು ಬಲಿ



ಸ್ಥಳೀಯರೊಂದಿಗೆ ಚರ್ಚಿಸುತ್ತಿರುವ ಸತೀಶ್ ಕುಂಪಲ, ಮಠಂದೂರು

ಕೊಟ್ಟು ರಕ್ತಬಿಂದು ನೀಡಲಾಗುತ್ತದೆ. ಇದರಿಂದಾಗಿ ನಂಬಿಕೊಂಡು ಬಂದಂತಹ ಭಕ್ತರಿಗೆ, ಗ್ರಾಮಗಳಿಗೆ ಸುಭಿಕ್ಷೆ ಉಂಟಾಗುತ್ತದೆ ಎಂಬ ನಂಬಿಕೆ ಇದೆ. ಇದು ತಲತಲಾಂತರದಿಂದ ನಡೆದುಕೊಂಡು ಬಂದಂತಹ ಸಂಪ್ರದಾಯವಾಗಿದೆ. ಕಾಯ್ದೆ ಕಾನೂನುಗಳು ಅನುಷ್ಠಾನಗೊಳ್ಳುವ ಮೊದಲೇ ಈ ಸಂಪ್ರದಾಯ ಆರಂಭವಾಗಿದೆ. ಇಂದಿನವರೆಗೂ ನಡೆದುಕೊಂಡು ಬಂದಿದೆ. ಇಂತಹ ಸಂಪ್ರದಾಯಗಳಲ್ಲಿ ಪ್ರಮುಖವಾದದ್ದು ದೈವಾರಾಧನೆ. ಅದಕ್ಕೆ ಕಟ್ಟಳೆಗಳಿವೆ. ಆ ಪ್ರಕಾರವೇ ಆರಾಧನೆ ನಡೆಯಬೇಕು. ಚ್ಯುತಿ ತರುವಂತಿಲ್ಲ. ದೈವಾರಾಧನೆ ನಡೆದ ಬಳಿಕ ದೈವದ ಕೊಡಿಅಡಿಯಲ್ಲಿ ಕೋಳಿ ಅಂಕವನ್ನು ನಡೆಸುವ ಮೂಲಕ ದೈವಗಳಿಗೆ ರಕ್ತಬಿಂದು ನೀಡುವ ಸಂಪ್ರದಾಯ ಇದೆ. ಈ ಸಂಪ್ರದಾಯ ಇದೀಗ ವಿವಾದಕ್ಕೆ ಕಾರಣವಾಗಿದೆ. ಯಾಕೆಂದರೆ ಕೆಲವು ವರ್ಷಗಳ ಹಿಂದೆ ಕೇಂದ್ರ ಸರಕಾರ ಜಾರಿಗೊಳಿಸಿದಂತಹ ಪ್ರಾಣಿ ಹಿಂಸೆ ತಡೆ ಕಾಯ್ದೆಯನ್ವಯ ಕೋಳಿ ಬಲಿ ಕೊಡುವುದು, ಕೋಳಿ ಅಂಕ ಏರ್ಪಡಿಸುವುದು, ಪ್ರಾಣಿಗಳಿಗೆ ಹಿಂಸೆ ನೀಡುವುದು ಮೊದಲಾದವುಗಳು ಅಪರಾಧದ ಸಾಲಿಗೆ ಸೇರಿದೆ. ಕಾನೂನನ್ನು ಜಾರಿ ಮಾಡುವಂತಹ ಹೊಣೆಗಾರಿಕೆ ಪೊಲೀಸ್ ಇಲಾಖೆಯ ಮೇಲೆ ಇರುವುದರಿಂದ ಇಂತಹ ಕೃತ್ಯಗಳನ್ನು ಪೊಲೀಸರು ತಡೆಯುವುದು ಸಹಜ. ಆದರೆ ಸಂಪ್ರದಾಯದ ವಿಚಾರದಲ್ಲಿ ಇಂತಹ ಘಟನೆಗಳು ಅನಿವಾರ್ಯವಾಗಿರುವುದರಿಂದ ಪೊಲೀಸರು ಮತ್ತು ಸಾರ್ವಜನಿಕರ ಮಧ್ಯೆ ಸಂಘರ್ಷ ಏರ್ಪಟ್ಟು ವೈಮನಸ್ಸು ಸೃಷ್ಟಿಯಾಗುತ್ತಿದೆ. ಇಂತಹದ್ದೆ ಒಂದು ಘಟನೆ ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನ ವಿಟ್ಲ ಸಮೀಪದ ಕೇಪು ಎಂಬಲ್ಲಿ ನಡೆದಿದೆ. ಹಾಲಿ ಮತ್ತು ಮಾಜಿ ಶಾಸಕರು ಪೊಲೀಸರ ಸೂಚನೆಯನ್ನು ಮೆಟ್ಟಿ ನಿಂತು ಕೋಳಿ ಅಂಕ ನಡೆಸುವ ಮೂಲಕ ಕಾನೂನಿಗೆ ಸವಾಲು ಒಡ್ಡಿದ್ದಾರೆ. ಶಾಸಕರು ಮತ್ತು ಇತರರ ಮೇಲೆ ಸಹಜವಾಗಿಯೇ ಪೊಲೀಸರು ಕೇಸು ದಾಖಲಿಸಿಕೊಂಡಿದ್ದಾರೆ. ಒಟ್ಟಾರೆಯಾಗಿ ವಿವಾದ ಸೃಷ್ಟಿಯಾಗಿದೆ. ಪರಿಹಾರ ಕಾಣುತ್ತಿಲ್ಲ.



### ಏನಾಯಿತು?!

ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನ ಕೇಪು ಎನ್ನುವುದು ಒಂದು ಗ್ರಾಮ. ರೈತಾಪಿ ವರ್ಗದವರೇ ಹೆಚ್ಚಾಗಿ ಇರುವಂತಹ ಪ್ರದೇಶ. ಇಲ್ಲಿ ಉಳ್ಳಾಲ್ತಿ ದೈವಸ್ಥಾನ ಪುರಾತನವಾದದ್ದು. ಸುಮಾರು 800 ವರ್ಷಗಳ ಇತಿಹಾಸ ಇದೆ. ವರ್ಷಕ್ಕೆ ಒಮ್ಮೆ ಈ ದೇವಸ್ಥಾನದಲ್ಲಿ ಕಜಂಬು ಉತ್ಸವ ಇದೆ. ದೇವಿಗೆ ಆರಾಧನೆ ನಡೆಯುತ್ತಿದೆ. ದೇವಿಯ ನೇಮೋತ್ಸವದ ಸಂದರ್ಭದಲ್ಲಿ ಮಹಿಳೆಯರು ದೇವಸ್ಥಾನದ ಒಳಭಾಗದಲ್ಲಿ ಇರಬಾರದು ಎಂಬ ನಂಬಿಕೆಯಿದೆ. ಈ ದೈವಸ್ಥಾನದಲ್ಲಿ ನಡೆಯುವ ವಾರ್ಷಿಕ ಉತ್ಸವಕ್ಕೆ ಕಜಂಬು ಎಂಬ ಹೆಸರು ಇದೆ.



ಉತ್ಸವ ನಡೆದು ದೇವರ ಭಂಡಾರ ದೈವಸ್ಥಾನದಿಂದ ಇಳಿದ ಬಳಿಕ ಎದುರಿನ ಗದ್ದೆಯಲ್ಲಿ ಸಾಂಪ್ರದಾಯಿಕ ಕೋಳಿ ಅಂಕ ನಡೆಯುವುದು ಪದ್ದತಿ. ಸ್ಥಳೀಯರು ತಮ್ಮ ಮನೆಯಲ್ಲಿ ಸಾಕಿದ ಕೋಳಿಗಳನ್ನು ಅಂಕದ ಕಲಕ್ಕೆ ತಂದು ಪರಸ್ಪರ ಕಾದಾಡಿಸುವುದು ಕ್ರಮ. ಆ ಕೋಳಿಗಳು ಕಾದಾಟ ನಡೆಸಿದ ಸಂದರ್ಭದಲ್ಲಿ ರಕ್ತಗಾಯವಾಗುವುದು ಸಹಜ. ಆ ಮಣ್ಣಿನಲ್ಲಿ ಆ ರಕ್ತ ಬೀಳಬೇಕು ಎನ್ನುವ ನಿಯಮ ಇದೆ. ಇದರಿಂದ ಗ್ರಾಮಕ್ಕೆ ಮತ್ತು ಗ್ರಾಮಸ್ಥರಿಗೆ ಒಳಿತಾಗುತ್ತದೆ ಎಂಬ ನಂಬಿಕೆ ಇದೆ. ಈ ಜಾತ್ರೆಯ ಒಂದು ವಿಶೇಷ ಇದೆ. ಇಲ್ಲಿ ಜಾತ್ರೆಗೆ ಬರುವಂತಹ ಭಕ್ತರಿಗೆ ಎಲ್ಲವೂ ಉಚಿತವಾಗಿರುತ್ತದೆ. ರಿಕ್ಷಾ ಚಾಲಕರು ಭಕ್ತಾಧಿ ಗಳನ್ನು ಉಚಿತವಾಗಿಯೇ ಕರೆದೊಯ್ಯುತ್ತಾರೆ. ಭಕ್ತರಿಗೆ ನೀರು, ಬೆಲ್ಲ,ಶರಬತ್ತು ಮೊದಲಾದವುಗಳನ್ನು ಉಚಿತವಾಗಿಯೇ ನೀಡಲಾಗುತ್ತದೆ. ಬೇರೆ ಕಡೆಗಳಲ್ಲಿ ನಡೆಯುವ ಕೋಳಿ ಅಂಕದಲ್ಲಿ ಜೂಜಾಟ ಇದ್ದರೆ ಇಲ್ಲಿ ಜೂಜಿಗೆ ಅವಕಾಶ ಇಲ್ಲ.ಕೋಳಿ ಅಂಕದಲ್ಲಿ ಭಾಗವಹಿಸುವಂತಹ ಕೋಳಿ ಬಿಡುವವರು, ನೀರು ಕೊಡುವವರು, ಕೋಳಿಗೆ ಕತ್ತಿ ಕಟ್ಟುವವರು, ದಂಡೆಯುವರು ಯಾರೂ ಹಣ ತೆಗೆದುಕೊಳ್ಳುವಂತಿಲ್ಲ. ಪ್ರತಿ ಬಾರಿಯೂ ವರ್ಷಕ್ಕೆ ಮೂರು ದಿನಗಳ ಕಾಲ ಈ ಸಂಪ್ರದಾಯ ಬದ್ಧ ಕೋಳಿ ಅಂಕ ನಡೆಯುತ್ತದೆ. ಆದರೆ ಈ ವರ್ಷದ ಕೋಳಿ ಅಂಕ ವಿವಾದಕ್ಕೆ ಕಾರಣವಾಗಿದೆ. ಎರಡು ದಿನಗಳ ಕಾಲ ಕೋಳಿ ಅಂಕ ನಡೆಯಿತಾದರೂ ಪೊಲೀಸರು ಧಾಳಿ ನಡೆಸಿ ಕೋಳಿಗಳನ್ನು ವಶಪಡಿಸಿಕೊಂಡರಲ್ಲದೆ ಸುಮಾರು 40 ಕ್ಕೂ ಹೆಚ್ಚು ಮಂದಿಯ ಮೇಲೆ ಕೇಸು ದಾಖಲಿಸಿಕೊಂಡಿದ್ದಾರೆ. ಹಾಲಿ ಪುತ್ತೂರು ಶಾಸಕ ಅಶೋಕ್ ಕುಮಾರ್ ರೈ ಅವರು ಸ್ವತಃ ನಿಂತು ಒಂದು ದಿನದ ಕೋಳಿ ಅಂಕವನ್ನು ಮುನ್ನಡೆಸಿದರೆ, ಮರುದಿನ ಪುತ್ತೂರಿನ ಮಾಜಿ ಶಾಸಕ ಸಂಜೀವ ಮಠಂದೂರು, ಜಿಲ್ಲಾ ಬಿಜೆಪಿ ಅಧ್ಯಕ್ಷ ಸತೀಶ್ ಕುಂಪಲ ನೇತೃತ್ವದಲ್ಲಿ ಸ್ಥಳೀಯ ಬಿಜೆಪಿ ಪ್ರಮುಖರು ಕೋಳಿ ಅಂಕ ನಡೆಸಿ ಪೊಲೀಸರಿಗೆ ಸವಾಲು ಒಡ್ಡಿದ್ದಾರೆ. ಒಟ್ಟಾರೆಯಾಗಿ ಈ ಕೋಳಿ ಅಂಕ ಪೊಲೀಸರು ಮತ್ತು ಸ್ಥಳೀಯರ ಮಧ್ಯೆ ವಿರಸಕ್ಕೆ ಕಾರಣವಾಗಿದೆ.



### ಕಟ್ಟುನಿಟ್ಟು ಯಾಕೆ?

ಕೋಳಿ ಅಂಕ ಎನ್ನುವುದು ಸಾಂಪ್ರದಾಯಿಕ ಎನ್ನಲಾಗುತ್ತಿದೆ. ಈ ಹಿಂದೆ ಕೋಳಿ ಅಂಕವನ್ನು ಸಾರಾಯಿ ಅಂಗಡಿ, ಶೇಂದಿ ಅಂಗಡಿಗಳ ಅಕ್ಕಪಕ್ಕದಲ್ಲಿ ವ್ಯವಹಾರ ವೃದ್ಧಿಗಾಗಿ ನಡೆಸಲಾಗುತ್ತಿತ್ತು. ಇತ್ತೀಚೆಗೆ ಕೆಲವೊಂದು ಕಡೆಗಳಲ್ಲಿ ಕೋಳಿ ಅಂಕಗಳು ನಡೆಯುತ್ತಿವೆ. ಇದಕ್ಕೆ ಪೊಲೀಸರ ಮೌಖಿಕ ಅನುಮತಿಯೂ ಇರುತ್ತಿತ್ತು. ಕೆಲವು ಕಡೆಗಳಲ್ಲಿ ವಾರಕ್ಕೊಮ್ಮೆ ಕೋಳಿ ಅಂಕ ನಡೆದರೆ ಮಿಕ್ಕ ಕಡೆಗಳಲ್ಲಿ ವಾರಕ್ಕೆ ಎರಡು ಮೂರು ಬಾರಿ ಅಂಕಗಳು ನಡೆಯುವಂತಹ ನಿದರ್ಶನಗಳಿವೆ. ಹಲವಾರು ಬಾರಿ ಪೊಲೀಸರು ದಾಳಿ ನಡೆಸಿ ಕೋಳಿಗಳನ್ನು ವಶಪಡಿಸಿಕೊಂಡು ಅಂಕಪ್ರಿಯರ ಮೇಲೆ ಕರ್ನಾಟಕ ಪೊಲೀಸ್ ಕಾಯ್ದೆಯಡಿಯಲ್ಲಿ ಕೇಸು ದಾಖಲಿಸಿದ ಉದಾಹರಣೆಗಳಿವೆ.


ಕೋಳಿ ಅಂಕದಲ್ಲಿ ಶಾಸಕ ರೈ


ದಕ್ಷಿಣ ಕನ್ನಡ ಪೊಲೀಸ್ ವರಿಷ್ಠಾಧಿ ಕಾರಿಗಳಾಗಿ ಕೆ. ಅರುಣ್ ಅವರು ಅಧಿ ಕಾರ ವಹಿಸಿಕೊಂಡ ನಂತರ ತನ್ನ ಅಧೀನ ಸಿಬ್ಬಂದಿಗಳಿಗೆ ಕಟ್ಟುನಿಟ್ಟಿನ ನಿರ್ದೇಶನ ನೀಡಿ ಯಾವುದೇ ರೀತಿಯ ಅಕ್ರಮ ವ್ಯವಹಾರಗಳು ನಡೆಯದಂತೆ ನೋಡಿಕೊಳ್ಳಬೇಕು ಎಂದಿದ್ದಾರೆ. ಯಾವುದೇ ಅಧಿ ಕಾರಿಗಳು ಈ ಸೂಚನೆಯನ್ನು ಪಾಲಿಸದಿದ್ದಲ್ಲಿ ಕಠಿಣ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಸಿದ್ದಾರೆ. ಪರಿಣಾಮವಾಗಿ ಪೊಲೀಸರು ಕೋಳಿ ಅಂಕ, ಮರಳು ಸಾಗಾಣಿಕೆ, ಕಪ್ಪು-ಕೆಂಪು ಕಲ್ಲು ವ್ಯವಹಾರ, ಜುಗಾರಿ, ರಿಕ್ರಿಯೇಷನ್ ಕ್ಲಬ್ ಗಳನ್ನು ನಡೆಯಲು ಅವಕಾಶ ನೀಡುತ್ತಿಲ್ಲ. ಆದರೂ ಇಂತಹ ವ್ಯವಹಾರಗಳು ಕದ್ದುಮುಚ್ಚಿ ನಡೆಯುತ್ತಿವೆ.

ಡಿಸೆಂಬರ್ 19ರಂದು ವಿಟ್ಲ ಸಮಿಪದ ಕೇಪು ಉಳ್ಳಾಲ್ತಿ ದೈವಸ್ಥಾನದಲ್ಲಿ ಕಜಂಬು ಉತ್ಸವ. ವಿಟ್ಲದಿಂದ ಬುಳೇರಿಕಟ್ಟೆಯಾಗಿ ಪುತ್ತೂರಿಗೆ ಹೋಗುವ ರಾಜ್ಯ ಹೆದ್ದಾರಿಯಲ್ಲಿ ಈ ಕೇಪು ಎನ್ನುವ ಗ್ರಾಮ ಬರುತ್ತದೆ. ಈ ದೇವಸ್ಥಾನದ ಕಜಂಬು ಉತ್ಸವ



ನಡೆದು ಭಂಡಾರ ಇಳಿದ ಬಳಿಕ ಅಂದರೆ ಡಿ.20ರಂದು ಮಧ್ಯಾಹ್ನದ ನಂತರ ಸಾಂಪ್ರದಾಯಿಕ ಕೋಳಿ ಅಂಕ ನಡೆಯುವುದು ವಾಡಿಕೆ. ಊರ ಗ್ರಾಮಸ್ಥರೇ ಈ ಕೋಳಿ ಅಂಕದಲ್ಲಿ ತಮ್ಮ ಮನೆಯಲ್ಲಿ ಸಾಕಿದಂತಹ ಕೋಳಿಗಳನ್ನು ತಂದು ಅದರ ರಕ್ತವನ್ನು ಆ ಮಣ್ಣಿನಲ್ಲಿ ಅರ್ಪಿಸುವುದು ಸಂಪ್ರದಾಯ. ಅದರಂತೆ ಕೋಳಿ ಅಂಕ ಆರಂಭಗೊಳ್ಳುತ್ತಿದ್ದಂತೆಯೇ ವಿಟ್ಲ ಪೊಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಮತ್ತು ಸಿಬ್ಬಂದಿಗಳ ಆಗಮನವಾಗಿತ್ತು. ಪೊಲೀಸರನ್ನು ಕಂಡ ಕೂಡಲೇ ಗ್ರಾಮಸ್ಥರು ತಾವು ತಂದಿದ್ದ ಕೋಳಿಗಳೊಂದಿಗೆ ಜಾಗ ಖಾಲಿ ಮಾಡಲು ಆರಂಭಿಸಿದ್ದರು. ಈ ಮಾಹಿತಿ ಸ್ಥಳೀಯ ಶಾಸಕ ಅಶೋಕ್ ಕುಮಾರ್ ರೈ ಅವರ ಗಮನಕ್ಕೆ ಬಂತು.

☞ 12



**ಫೇಸ್ ಬುಕ್ ಮೂಲಕ ಪರಿಚಯವಾದ ಯುವಕನಿಂದ ಹಣ ಪಡೆದ ಯುವತಿ ಆತ ವಾಪಸ್ ಹಣ ಕೇಳಿದ ವೇಳೆ ನೀನು ಬಾ ಸುಖ ಕೊಡುತ್ತೇನೆಂದು ಕರೆಯಿಸಿಕೊಂಡು ಬಳಿಕ ಆತನನ್ನು ಮನೆಯೊಂದರಲ್ಲಿ ಕೂಡಿ ಹಾಕಿಸಿ ಬೆತ್ತಲೆ ಮಾಡಿ ಹಲ್ಲೆ ಮಾಡಿದ್ದಲ್ಲದೆ, ಹಣಕ್ಕಾಗಿ ಬೇಡಿಕೆಯಿಟ್ಟ ಘಟನೆ ಕೊಡಗಿನ ಮಡಿಕೇರಿಯಲ್ಲಿ ನಡೆದಿದೆ. ಆದರೆ ಆ ಯುವಕ ಅಲ್ಲಿಂದ ತಪ್ಪಿಸಿಕೊಂಡು ಒಳಚಡ್ಡಿಯಲ್ಲಿಯೇ ಪೊಲೀಸ್ ಠಾಣೆಗೆ ತೆರಳಿ ದೂರು ನೀಡಿದ್ದರಿಂದ ಪ್ರಕರಣ ಬಯಲಾಗಿದೆ.**


ಆರೋಪಿಗಳಾದ ರಚನಾ ಹಾಗೂ ಮಾಲತಿ

# ಸುಖ ಕೊಡ್ತೀನಿ ಅಂಥ ಕರೆಯಿಸಿಕೊಂಡವಳು ಮಾಡಿದ್ದೇನು?

**ಕೊಡಗು**
✍ಬಿ.ಎಂ. ಲವಕುಮಾರ್

ಫೇಸ್ ಬುಕ್ ಸೇರಿದಂತೆ ಇತರೆ ಸಾಮಾಜಿಕ ಜಾಲತಾಣಗಳ ಮೂಲಕ ಪರಿಚಯವಾಗಿ ನಂತರ ಅದು ಬೇರೆ, ಬೇರೆ ತಿರುವು ಪಡೆದುಕೊಂಡು ಕೊನೆಗೆ ಕ್ರೈಂ ಮೂಲಕ ಅಂತ್ಯಗೊಳ್ಳುವುದು ಮಾಮೂಲಿಯಾಗಿದೆ. ಯುವಕ, ಯುವತಿ, ಮಹಿಳೆ, ಪುರುಷ ಹೀಗೆ ಎಲ್ಲರೂ ಒಂದಲ್ಲ ಒಂದು ರೀತಿಯ ವಿಷವರ್ತುಲದಲ್ಲಿ ಸಿಲುಕಿ ಬದುಕನ್ನೇ ಹಾಳು ಮಾಡಿಕೊಳ್ಳುತ್ತಿರುವುದು ಗುಟ್ಟಾಗಿಯೇನು ಉಳಿದಿಲ್ಲ.







ಬಹಳಷ್ಟು ಫೋರ್ ಟ್ವೆಂಟಿಗಳಿಗೆ ಇದೇ ಉದ್ಯೋಗವಾಗಿದೆ.

ಕೆಲವು ಐನಾತಿಗಳು ಹೆಣ್ಣುಮಕ್ಕಳನ್ನು ಮುಂದಿಟ್ಟುಕೊಂಡು ತಮ್ಮ ಬೇಳೆ ಬೇಯಿಸಿಕೊಳ್ಳುತ್ತಿದ್ದಾರೆ. ಒಂದು ವೇಳೆ ಸೋಷಿಯಲ್ ಮೀಡಿಯಾವನ್ನು ಸದುದ್ದೇಶಕ್ಕೆ ಬಳಸದೆ ಅಡ್ಡಮಾರ್ಗದಲ್ಲಿ ಬಳಸಿಕೊಂಡಿದ್ದೀರಾ ಎನ್ನುವುದಾದರೆ ಇವತ್ತಲ್ಲ ನಾಳೆ ನಿಮಗೆ ಸಂಕಷ್ಟ ತಪ್ಪಿದಲ್ಲ. ಸೋಷಿಯಲ್ ಮೀಡಿಯಾ ಮೂಲಕ ಕೆಲವರು ತಮ್ಮ ಮಾನ ಹರಾಜು ಹಾಕಿಕೊಂಡಿದ್ದಾರೆ. ಮತ್ತೆ ಕೆಲವರು ಸಂಸಾರ ಹಾಳು ಮಾಡಿಕೊಂಡಿದ್ದಾರೆ. ಇನ್ನು ಕೆಲವರು ಜೈಲ್ ಸೇರಿದ್ದಾರೆ. ಆದರೂ ಜನ ಮಾತ್ರ ಬುದ್ದಿ ಕಲಿತಂತೆ ಕಾಣುತ್ತಿಲ್ಲ.

ಇಲ್ಲಿ ಹೇಳಲು ಹೊರಟಿರುವ ಕಥೆ ಖತರ್ ನಾಕ್ ತಾಯಿ ಮಗಳ ವಂಚನೆಯ ಸ್ಟೋರಿ... ಇದನ್ನು ನಾವು ಹನಿಟ್ರ್ಯಾಪ್ ಎಂದರೂ ತಪ್ಪಾಗಲಾರದು. ಹಾಗೆಯೇ ತೆಳ್ಳಗೆ ಬೆಳ್ಳಗೆ ಮಾಡ್ರನ್ ಆಗಿ ಕಾಣುವ ಪ್ರೊಫೈಲ್ ಫೋಟೋ ನೋಡಿ ಫ್ರೆಂಡ್ ಶಿಪ್ ಮಾಡಿಕೊಂಡು ಏನಾದರೂ ಆಟ ಆಡೋಣ ಅಂಥ ಕಾಮುಕರು ಹೊರಟಿದ್ದರೆ ಅಂಥವರಿಗೆ ಇದು ಪಾಠ ಕಲಿಸುವ ಕಥೆಯಾಗಿದೆ. ಫೇಸ್ ಬುಕ್‌ನಲ್ಲಿ ಪೋರ್ಕಿಗಳೇ ತುಂಬಿದ್ದು, ಹೆಣ್ಣುಮಕ್ಕಳಿಗೆ ಅಶ್ಲೀಲ ಕಾಮೆಂಟ್, ಮೆಸೇಜ್ ಮಾಡುವುದು, ಅಸಹ್ಯ ಫೋಟೋ ಕಳಿಸುವುದು ಹೀಗೆ ದುರ್ವರ್ತನೆ ತೋರುವವರಿಗೇನು ಕೊರತೆಯಿಲ್ಲ.

ಇದರ ನಡುವೆಯೂ ಕೆಲವು ತಲೆ ಮಾಸಿದ ಹೆಂಗಸರು ಗಂಡಸರಿಗೆ ಗತಿ ಕಾಣಿಸುವ ಪ್ರಕರಣಗಳಿಗೇನು ಕೊರತೆಯಿಲ್ಲ. ಅದರಲ್ಲೂ ಹನಿಟ್ರ್ಯಾಪ್‌ನಂತಹ ಘಟನೆಗಳು ಅಲ್ಲಲ್ಲಿ ನಡೆಯುತ್ತಿದ್ದರೂ ಕೆಲವೇ ಕೆಲವು ಪ್ರಕರಣಗಳಷ್ಟೇ ಬೆಳಕಿಗೆ ಬರುತ್ತವೆ. ಉಳಿದಂತೆ ಹೆಚ್ಚಿನ ಪ್ರಕರಣಗಳು ಮಾನ ಮರ್ಯಾದೆಗೆ ಅಂಜಿ ಪೊಲೀಸ್ ಠಾಣೆವರೆಗೆ ಹೋಗದೆ ಮುಚ್ಚಿ ಹೋಗಿ ಬಿಡುತ್ತವೆ.

ಸದ್ಯ ಈ ಪ್ರಕರಣವನ್ನು ಗಮನಿಸಿದರೆ ಆತ ಪೊಲೀಸ್ ಠಾಣೆಗೆ ಹೋಗದಿದ್ದರೆ ಇನ್ನ್ಯಾವ ತಿರುವು ಪಡೆಯುತ್ತಿತ್ತೋ ಗೊತ್ತಿಲ್ಲ. ಆದರೆ ಮಡಿಕೇರಿಯ ಆ ತಾಯಿ ಮಗಳ ಅಸಲಿ ಕಥೆ ಬಯಲಾಗಿದೆ.

ಈ ಪ್ರಕರಣದ ಸೂತ್ರಧಾರಿ ರಚನಾ... ಆಕೆಗೆ ಬೆನ್ನಿಗೆ ನಿಂತವಳು ತಾಯಿ ಮಾಲತಿ. ಮಡಿಕೇರಿ ಅಶೋಕಪುರದ ನಿವಾಸಿಯಾಗಿರುವ ಮಾಲತಿ ಈ ಹಿಂದೆಯೇ ಮದುವೆಯಾಗಿದ್ದು, ಗಂಡನಿಂದ ವಿಚ್ಛೇದನೆ ಪಡೆದು ಮಗಳು ರಚನಾ ಜತೆಯಲ್ಲಿ ವಾಸವಿದ್ದಳು ಎನ್ನಲಾಗಿದೆ. ರಚನಾಳ ಆಟಕ್ಕೆ ತಾಯಿಯ ಕುಮ್ಮಕ್ಕು ಇದೆ ಎನ್ನಲಾಗಿದೆ. ರಚನಾ ಸೋಷಿಯಲ್ ಮೀಡಿಯಾದಲ್ಲಿ ಆಕ್ಟೀವ್ ಆಗಿದ್ದು, ಫೇಸ್‌ಬುಕ್ ಬಗೆ, ಬಗೆಯ ಫೋಟೋ, ರೀಲ್ಸ್‌ಗಳನ್ನು ಮಾಡುತ್ತಾ ಪಡ್ಡೆ ಹುಡುಗರ ನಿದ್ದೆ ಗೆಡಿಸುವ ಕೆಲಸ ಮಾಡಿದ್ದಳು. ಇನ್ನು ಫೇಸ್‌ಬುಕ್ ನಲ್ಲಿ ಪರಿಚಯವಾಗುವವರೊಂದಿಗೆ ಚಾಟ್ ಮಾಡುತ್ತಾ ಅವರಿಂದ ಹಣ ಪೀಕುವುದರಲ್ಲಿ ನಿಸ್ಸೀಮಳಾಗಿದ್ದಳು. ಹೀಗಿರುವಾಗಲೇ ಅವಳಿಗೆ ಫೇಸ್‌ಬುಕ್‌ನಲ್ಲಿ ಪರಿಚಯವಾದವನು ಮಂಡ್ಯ ಜಿಲ್ಲೆಯ ಮದ್ದೂರು ತಾಲೂಕಿನ ಹಳ್ಳಿಕೆರೆ ನಿವಾಸಿಯಾಗಿದ್ದು, ಬೆಂಗಳೂರಿನ ಚಾಮರಾಜಪೇಟೆಯಲ್ಲಿ ವ್ಯಾಪಾರ ಮಾಡುತ್ತಿದ್ದ ಮಹದೇವ್(39).


ಆರೋಪಿ ದಿನೇಶ


ಆರೋಪಿ ಸುಜಿತ್

ಈತನೊಂದಿಗೆ ಕ್ಲೋಸ್ ಆಗಿ ಚಾಟ್ ಮಾಡುತ್ತಿದ್ದರಿಂದ ಆಕೆಯ ಮೇಲೇ ಆತನಿಗೆ ನಂಬಿಕೆ ಬಂದಿತ್ತು. ಪ್ರತಿ ದಿನ ಚಾಟ್ ಫೋನ್ ಅಂಥ ದಿನಗಳು ಕಳೆದಿದ್ದವು. ಈ ನಡುವೆ ಆತನ ಬಗ್ಗೆ ತಿಳಿದುಕೊಂಡು ಅವನಿಂದ ಫೋನ್ ಪೇ ಮೂಲಕ 5 ಸಾವಿರ ಹಣವನ್ನು ಪೀಕಿದ್ದಳು. ಆದರೆ ಅದನ್ನು ವಾಪಸ್ ಕೊಡುವ ಗೋಜಿಗೆ ಹೋಗಿರಲಿಲ್ಲ.

ಹೇಳಿದ ತಕ್ಷಣವೇ ಆತ ಹಣ ಹಾಕಿದ್ದರಿಂದ ಮತ್ತೊಮ್ಮೆ ಹಣ ಹಾಕಿಸಿಕೊಂಡಿದ್ದಳು. ಹೀಗೆ ಸುಮಾರು 10 ಸಾವಿರದಷ್ಟು ಹಣವನ್ನು ಪಡೆದಿದ್ದಳು. ಆದರೆ ಆಕೆ ಕೊಡಲ್ಲ ಎಂಬುದು ಗೊತ್ತಾಗುತ್ತಿದ್ದಂತೆಯೇ ಹಣ ನೀಡುವಂತೆ ಕೇಳಲಾರಂಭಿಸಿದನು. ಯಾವಾಗ ಆತ ಹಣ ಕೇಳಲು ಆರಂಭಿಸಿದನೋ ಆಕೆ ಅವನನ್ನು ಬದಿಗಿಡುವ ಪ್ರಯತ್ನ ಮಾಡಿದಳು.

ಈ ನಡುವೆ ಆಕೆಗೆ ಕೊಟ್ಟ ಹಣ ಸಿಗಲ್ಲ ಎಂಬುದು ಗೊತ್ತಾಗುತ್ತಿದ್ದಂತೆಯೇ ಮೇಲಿಂದ ಮೇಲೆ ಹಣಕೊಡುವಂತೆ ಮಹದೇವ್ ಒತ್ತಾಯಿಸತೊಡಗಿದನು. ಹೀಗಾಗಿ ಇವನಿಂದ ತಪ್ಪಿಸಿಕೊಳ್ಳುವುದು ಸಾಧ್ಯವಿಲ್ಲ ಎಂದರಿತ ರಚನಾ ತನ್ನ ತಾಯಿ ಮಾಲತಿ ಮತ್ತು ಸಹಚರರಾದ ದಿನೇಶ್, ಸುಜಿತ್, ದರ್ಶನ್ ಅವರೊಂದಿಗೆ ಸೇರಿ ಮಹದೇವನನ್ನು ಮಡಿಕೇರಿಗೆ ಕರೆಯಿಸಿಕೊಂಡು ಅವನ ಸಾಲವನ್ನು ಮರು ಪಾವತಿ ಮಾಡುವ ಬದಲಿಗೆ ಅವನಿಂದಲೇ ಹಣಪೀಕುವ ಸಂಚು ರೂಪಿಸಿದ್ದರು. ಅದರಂತೆ ಮಹದೇವನಿಗೆ ರಚನಾ ಮುಹೂರ್ತ ಫಿಕ್ಸ್ ಮಾಡಿಯೇ ಬಿಟ್ಟಳು.

ರಚನಾಗೆ ಫೋನ್ ಮಾಡಿದ ಮಹದೇವನಿಗೆ ನಿನ್ನ ಹಣ ಕೊಡಲು ಸಾಧ್ಯವಾಗಲ್ಲ. ಬದಲಿಗೆ ನೀನು ಬಂದರೆ ನಿನಗೆ ಸುಖ ನೀಡುವುದಾಗಿ ಹೇಳಿದ್ದಲ್ಲದೆ, ನೀನು ಬಂದರೆ ಕುಶಾಲನಗರ ಅಥವಾ ಮೈಸೂರಿನಲ್ಲಿ ರೂಂ ಮಾಡಿಕೊಂಡು ಜಾಲಿಯಾಗಿ ಕಳೆಯೋಣ ಎಂದಿದ್ದಾಳೆ. ಅವಳ ಆ ಮಾತಿಗೆ ಅವನ ನರನಾಡಿಯನ್ನೆಲ್ಲ ನೆಟ್ಟಗೆ ಆಗಿದೆ. ಸುಖದ ಹಂಬಲದಲ್ಲಿ ಆತ ಹಿಂದೆ ಮುಂದೆ ಆಲೋಚಿಸದೆ ಡಿಸೆಂಬರ್ 12ರಂದು ಬೆಂಗಳೂರಿನಿಂದ ಮಡಿಕೇರಿ ಬಸ್ ಹತ್ತಿದ್ದಾನೆ. ಸುಖದ ಕನವರಿಕೆಯಲ್ಲಿಯೇ ಪ್ರಯಾಣ ಮುಗಿಸಿ ರಾತ್ರಿ 10.30ರ ವೇಳೆಗೆ ಮಡಿಕೇರಿ ಬಸ್ ನಿಲ್ದಾಣ ತಲುಪಿದ ಮಹದೇವ ಅಲ್ಲಿಂದ ರಚನಾಗೆ ಫೋನ್ ಮಾಡಿದ್ದಾನೆ.

ಈ ವೇಳೆ ಮಡಿಕೇರಿ ಪಟ್ಟಣದ ನಕ್ಷತ್ರ ಸೂಪರ್ ಮಾರ್ಕೆಟ್ ಬಳಿಗೆ ಬರುವಂತೆ ರಚನಾ ಹೇಳಿದ್ದು ಅದರಂತೆ ಅವನು ಅಲ್ಲಿಗೆ ಹೋಗಿದ್ದಾನೆ. ಆ ನಂತರ ರಚನಾ ಅವನನ್ನು ರಾತ್ರಿ 11.45ರ ವೇಳೆಗೆ ಮಂಗಳಾದೇವಿ ನಗರದ ಮನೆಯೊಂದಕ್ಕೆ ಕರೆದುಕೊಂಡು ಹೋಗಿದ್ದು, ಮನೆಯ ರೂಂನಲ್ಲಿ ಕುಳಿತು ಆತನೊಂದಿಗೆ ಮಾತನಾಡಿದ್ದಾಳೆ. ಆದರೆ ಹೊರಗೆ ಏನು ಮಾಡಬೇಕು ಎಂಬುದರ ಬಗ್ಗೆ ಮೊದಲೇ ತಾಯಿ ಮಾಲತಿ ಮತ್ತು ದಿನೇಶ್‌ಗೆ ತಿಳಿಸಿದ್ದರಿಂದ ಅದರಂತೆ ರಚನಾ ನಡೆದುಕೊಂಡಿದ್ದಾಳೆ. ಪಾನೀಯ ಕೊಟ್ಟು ಉಪಚರಿಸುವ ಮೂಲಕ ಯಾವುದೇ ಸಂಶಯ ಬಾರದಂತೆ ನೋಡಿಕೊಂಡಿದ್ದಾಳೆ. ಇತ್ತ ಮನೆಯ ರೂಂನಲ್ಲಿ ಹುಡುಗಿಯ ಜತೆಗಿದ್ದ ಮಹದೇವನಿಗೆ ಸ್ವರ್ಗವೇ ಧರೆಗೆ ಇಳಿದು ಬಂದ ಅನುಭವವಾಗಿದೆ. ಅಷ್ಟರಲ್ಲೇ ರಚನಾಗೆ ಫೋನ್ ಕಾಲ್ ಬಂದಿದ್ದು ಅದನ್ನು ರಿಸೀವ್ ಮಾಡಿ ಮಾತನಾಡಿದ ಆಕೆ ಬಳಿಕ ಮಹದೇವನ ಬಳಿ ನಮ್ಮ ರಿಲೇಶನ್ ತೀರಿ ಹೋಗಿದ್ದಾರಂತೆ. ಹೋಗಿ ಬರುತ್ತೇನೆ ಎಂದು ಹೇಳುತ್ತಾ ಗಡಿಬಿಡಿಯಲ್ಲಿ ಅಲ್ಲಿಂದ ಬಂದಿದ್ದಾಳೆ.

ಆಕೆ ಹೊರ ಬರುತ್ತಿದ್ದಂತೆಯೇ ಮಾಲತಿ, ದಿನೇಶ್ ಮನೆಯೊಳಗೆ ನುಗ್ಗಿ ಮಹದೇವನನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ಈ ವೇಳೆ ದಿನೇಶ್ ಮಾಲತಿಗೆ ನೀವು ಹೋಗಿ ನಾವು ನೋಡಿಕೊಳ್ಳುತ್ತೇವೆ ಎನ್ನುತ್ತಾ ಆಕೆಯನ್ನು ಹೊರ ಕಳಿಸಿದ್ದು, ಅದರಂತೆ ಮಾಲತಿ, ರಚನಾ ತಮ್ಮ ಪಾಡಿಗೆ ತಾವು ಹೋಗಿದ್ದಾರೆ. ಇತ್ತ ದಿನೇಶ್ ಗೆಳೆಯರಾದ ಸುಜಿತ್, ದರ್ಶನ್‌ಗೆ ಫೋನ್ ಮಾಡಿ ಅಲ್ಲಿಗೆ ಕರೆಯಿಸಿಕೊಂಡಿದ್ದು ನಂತರ ಮೂವರು ಸೇರಿಕೊಂಡು ಮಹದೇವನಿಗೆ ಕೈಗಳಿಂದ, ದೊಣ್ಣೆಯಿಂದ ಮತ್ತು ಕತ್ತಿಯ ಹಿಡಿಯಿಂದ



ಮುಖಕ್ಕೆ ಬಾಯಿಗೆ, ಎಡ ಎದೆಯ ಭಾಗಕ್ಕೆ ಹಾಗೂ ಎಡ ಕಾಲಿನ ಮಂಡಿಗೆ ಹೊಡೆದಿದ್ದು, ಬಟ್ಟೆಯನ್ನು ಬಲವಂತವಾಗಿ ಬಿಚ್ಚಿ ಬೆತ್ತಲೆ ಮಾಡಿ ಮೊಬೈಲ್ ಗಳಿಂದ ಅವನ ಬೆತ್ತಲೆ ವಿಡಿಯೋವನ್ನುಮಾಡಿಕೊಂಡು 50 ಲಕ್ಷ ಹಣ ಕೊಡು ಇಲ್ಲದಿದ್ದರೆ ನಿನ್ನ ವಿಡಿಯೋವನ್ನು ಸಾಮಾಜಿಕ ಜಾಲತಾಣದಲ್ಲಿ ಹಾಕುವುದಾಗಿ ಹೆದರಿಸಿದ್ದಾರೆ.

ನೀನು ಹಣ ಕೊಡದಿದ್ದರೆ ಬಿಡಲ್ಲ ಎನ್ನುತ್ತಾ ಆ ರಾತ್ರಿ ಪೂರ್ತಿ ನಿಕ್ಕರ್‌ನಲ್ಲಿ ಮನೆಯೊಳಗೆ ಕೂಡಿ ಹಾಕಿದ್ದಾರೆ. ಬೆಳಗ್ಗೆ ಮಹದೇವ್ ಬಾತ್‌ರೂಮಿಗೆ ಹೋಗುವುದಾಗಿ ಹೇಳಿ ಧರಿಸಿದ್ದ ಒಳಚಡ್ಡಿಯೊಂದಿಗೆ ಮನೆಯಿಂದ ತಪ್ಪಿಸಿಕೊಂಡಿದ್ದಾನೆ. ಈ ವೇಳೆ ರವಿಯನ್ನು ಕರೆಯಿಸಿ ಆತನ ಆಟೋದಲ್ಲಿ ಆರೋಪಿಗಳು ಅವನನ್ನು ಹಿಂಬಾಲಿಸಿದ್ದಾರೆ. ಆದರೆ ಅದ್ಯಾಗೋ ಅಲ್ಲಿಂದ ತಪ್ಪಿಸಿಕೊಂಡ ಮಹದೇವ್ ಅವರಿವರನ್ನು ಕೇಳಿಕೊಂಡು ಮಡಿಕೇರಿ ನಗರ ಪೊಲೀಸ್ ಠಾಣೆಯನ್ನು ತಲುಪಿ ನಡೆದ ಕಥೆಯನ್ನು ಪೊಲೀಸರ ಮುಂದೆ ಹೇಳಿದ್ದಾನೆ. ಪೊಲೀಸರು ಮಂಗಳಾದೇವಿ ನಗರದ ಮನೆ ತಲುಪುವ ಹೊತ್ತಿಗೆ ಅವರು ಅಲ್ಲಿಂದ ಪರಾರಿಯಾಗಿದ್ದರು. ಸದ್ಯ ಮಹದೇವ್ ನೀಡಿದ ದೂರಿನ ಮೇರೆಗೆ ರಚನಾ, ಮಾಲತಿ, ದರ್ಶನ್ ಹಾಗೂ ಆಟೋ ಚಾಲಕ ರವಿ ಎಂಬುರನ್ನು ಬಂಧಿಸಲಾಗಿದೆ. ದಿನೇಶ್ ಮತ್ತು ಸುಜಿತ್‌ಗಾಗಿ ಹುಡುಕಾಟ ನಡೆಸಿದ್ದಾರೆ. ಮಾಲತಿ ಮತ್ತು ರಚನಾ ಬೇರೆಯವರಿಗೂ ಇದೇ ರೀತಿ ಮಾಡಿದ್ದಾರಾ? ಎಂಬುದನ್ನು ಪೊಲೀಸರು ಪತ್ತೆಹಚ್ಚಬೇಕಾಗಿದೆ.

ಕೊಡಗು ಪ್ರವಾಸೋದ್ಯಮ ಜಿಲ್ಲೆಯಾಗಿದ್ದು, ಇಲ್ಲಿಗೆ ಸಾವಿರಾರು ಪ್ರವಾಸಿಗರು ಆಗಮಿಸುತ್ತಲೇ ಇರುತ್ತಾರೆ. ಹೀಗಿರುವಾಗ ಇಂತಹ ಘಟನೆಗಳಿಂದ ಜಿಲ್ಲೆಯ ಬಗ್ಗೆ ಕೆಟ್ಟ ಸಂದೇಶ ಹೊರಹೋಗಬಾರದು. ಇನ್ನು ಮುಂದೆ ಇಂತಹ ಪ್ರಕರಣಗಳು ನಡೆಯದಂತೆ ಸಂಬಂಧಿಸಿದವರು ಕಠಿಣ ಕ್ರಮ ಕೈಗೊಳ್ಳಬೇಕಿದೆ. ☯










# ಉದ್ಯಮಿ ರಘುನಾಥ್ ನಿಗೂಢ 'ನೇಣು' ಕೇಸ್! ಲಿಕ್ಕರ್ ಧಣಿ ಆದಿಕೇಶವುಲು ಮಕ್ಕಳು ಅರೆಸ್ಟ್!!


ಉದ್ಯಮಿ ರಘುನಾಥ್

**ಬೆಂಗಳೂರಿನ ಉದ್ಯಮಿ ರಘುನಾಥ್ ಅವರ ನಕಲಿ ವಿಲ್ ಸೃಷ್ಟಿಸಿ ಆಸ್ತಿ ಕಬಳಿಕೆಗೆ ಯತ್ನಿಸಿದ ಕೇಸ್‌ನಲ್ಲಿ ಉದ್ಯಮಿ ಆದಿಕೇಶವಲು ಪುತ್ರ ಶ್ರೀನಿವಾಸ್, ಪುತ್ರಿ ಡಾ. ಕಲ್ಪಜಾ ಹಾಗೂ ಡಿವೈಎಸ್ಪಿ ಮೋಹನ್ ಅವರನ್ನು ಸಿಬಿಐ ಅಧಿಕಾರಿಗಳು ಬಂಧಿಸಿದ್ದಾರೆ. 2019ರಲ್ಲಿ ನಡೆದಿದ್ದ ಉದ್ಯಮಿ ರಘುನಾಥ್ ನಿಗೂಢ ಸಾವಿನ ಹಿನ್ನಲೆಯಲ್ಲಿ ಹೆಚ್ಚಿನ ವಿಚಾರಣೆಗಾಗಿ ಸಿಬಿಐ ಕೋರ್ಟ್ ಆರೋಪಿಗಳನ್ನು 7 ದಿನಗಳ ಕಾಲ ಸಿಬಿಐ ಅಧಿ ಕಾರಿಗಳ ವಶಕ್ಕೆ ನೀಡಿದೆ....**


ಆದಿಕೇಶವುಲು ಮಕ್ಕಳಾದ ಡಾ. ಕಲ್ಪಜಾ ಹಾಗೂ ಶ್ರೀನಿವಾಸ್

ಉದ್ಯಮಿ ರಘುನಾಥ್ ಕೊಲೆ ಪ್ರಕರಣದ ನಕಲಿ ಛಾಪಾ ಕಾಗದ ಹಾಗೂ ನಕಲಿ ವಿಲ್ ಸೃಷ್ಟಿ ಮಾಡಿದ್ದ ಆರೋಪದ ಕೇಸ್ ನಲ್ಲಿ ಮಾಜಿ ಸಂಸದ ಆದಿಕೇಶವಲು ಮಗ ಶ್ರೀನಿವಾಸ್ ಮತ್ತು ಮಗಳು ಡಾ.ಕಲ್ಪಜಾ ಹಾಗೂ ಮಾನವ ಹಕ್ಕು ಆಯೋಗದ ಡಿವೈಎಸ್ಪಿ ಎಸ್.ವೈ.ಮೋಹನ್ ರನ್ನು ಸಿಬಿಐ ಅಧಿಕಾರಿಗಳು ಬಂಧಿಸಿದ್ದಾರೆ. ಸೋಮವಾರ ಸಂಜೆ ಬೆಂಗಳೂರಿನ ನೃಪತುಂಗ ರಸ್ತೆಯಲ್ಲಿರುವ ಸಿಬಿಐ ವಿಶೇಷ ನ್ಯಾಯಾಲಯಕ್ಕೆ ಮೂವರು ಆರೋಪಿಗಳನ್ನ ಸಿಬಿಐ ಅಧಿಕಾರಿಗಳು ಹಾಜರುಪಡಿಸಿ, ಹೆಚ್ಚಿನ ವಿಚಾರಣೆ ಸಲುವಾಗಿ ಮೂವರು ಆರೋಪಿಗಳನ್ನು 10 ದಿನಗಳ ಕಾಲ ತಮ್ಮ ವಶಕ್ಕೆ ನೀಡುವಂತೆ ಸಿಬಿಐ ಅಧಿ ಕಾರಿಗಳು ಕೋರ್ಟ್‌ಗೆ ಮನವಿ ಮಾಡಿಕೊಂಡಿದ್ದು, ಈ ವೇಳೆ ಜಡ್ಜ್ ಮುಂದೆ ನಿಂತು ಆದಿಕೇಶವಲು ಪುತ್ರಿ ಡಾ. ಕಲ್ಪಜಾ ಕಣ್ಣೀರು ಹಾಕಿದ್ದಾರೆ!


ಆದಿಕೇಶವುಲು ನಾಯ್ಡು

ಸಿಬಿಐ ಅಧಿ ಕಾರಿಗಳು ತಮಗೆ ಗ್ರೌಂಡ್ಸ್ ಆಫ್ ಅರೆಸ್ಟ್ ನೀಡಿಲ್ಲ ಎಂದು ಕಲ್ಪಜಾ ಹೇಳಿದರೆ, ಅವರ ವಕೀಲ ಕಿರಣ್ ಜವಳಿ, ಬಂಧನ ಪ್ರಕ್ರಿಯೆ ಸರಿಯಿಲ್ಲ.. ಎಂದು ಆಕ್ಷೇಪಿಸಿದ್ದರು! ಬಂಧಿಸುವಾಗ ಯಾಕೆ ಬಂಧಿಸುತ್ತಿದ್ದೇವೆ ಎಂಬ ಮಾಹಿತಿ, ದಾಖಲೆ ಕೊಟ್ಟಿದ್ದಾರೆಯೇ ಎಂದು ಮಾನ್ಯ ನ್ಯಾಯಾದೀಶರು ಆರೋಪಿಗಳಿಗೆ ಪ್ರಶ್ನೆ ಮಾಡಿದ್ದರು. ಹೌದು, ಮಾಹಿತಿ,ದಾಖಲೆ ನೀಡಿದ್ದಾರೆ ಎಂದು ಆರೋಪಿ ಕಲ್ಪಜಾ ಕೋರ್ಟ್ ಗೆ ತಿಳಿಸಿದ್ದರೂ, ಆರೋಪಿ ಕಲ್ಪಜಾಗೆ ಅಂಗವೈಕಲ್ಯ ಮಗಳಿದ್ದಾಳೆ, ಆಕೆಯನ್ನ ನೋಡಿಕೊಳ್ಳುವ ಅವಶ್ಯಕತೆ ಇದೆ,ಹೀಗಾಗಿ ಆಕೆಯನ್ನ ಸಿಬಿಐ ವಶಕ್ಕೆ ನೀಡದೆ, ಜಾಮೀನು ನೀಡಬೇಕೆಂದು ಕಲ್ಪಜಾ ಪರ ವಕೀಲ ಕಿರಣ್ ಜವಳಿ ಕೋರ್ಟ್ ಗೆ ಮನವಿ ಮಾಡಿಕೊಂಡರು. ಪ್ರತಿದಿನಿ ಸಿಬಿಐ ಕಚೇರಿಗೆ ವಿಚಾರಣೆಗೆ ಹಾಜರಾಗಲಿದ್ದಾರೆಂದು ಜವಳಿ ವಾದಿಸಿದ್ದರು!

ಆದರೆ, ಸಿಬಿಐ ಪರ ವಕೀಲರು ಆರೋಪಿಗಳು ಪ್ರಭಾವಿಗಳಾಗಿದ್ದಾರೆ, ಜಾಮೀನು ನೀಡಬಾರದು ಎಂದು ವಾದಿಸಿದ್ದರು. ಹೀಗಾಗಿ, ಆರೋಪಿಗಳಿಗೆ ಜಾಮೀನು ಸಿಕ್ಕಿಲ್ಲ. ಅಂದ ಹಾಗೆ, ಸದ್ಯ ಮೂವರು ಆರೋಪಿಗಳನ್ನು ನಕಲಿ ಛಾಪಾಕಾಗದ ಮತ್ತು ನಕಲಿ ವಿಲ್ ಸೃಷ್ಟಿ ಮಾಡಿದ್ದಕ್ಕೆ ಅರೆಸ್ಟ್ ಮಾಡಲಾಗಿದೆ ಯಷ್ಟೇ. ರಘುನಾಥ್ ಕೊಲೆ ಪ್ರಕರಣಕ್ಕೆ ಇನ್ನೂ ಯಾರನ್ನು ಅರೆಸ್ಟ್ ಮಾಡಿಲ್ಲ... ಮುಂದೆ ಏನಾಗುವುದೋ ಗೊತ್ತಿಲ್ಲ! ಎರಡೂ ಕಡೆಯ ವಾದ ಪ್ರತಿವಾದ ಆಲಿಸಿದ ಸಿಬಿಐ ವಿಶೇಷ ನ್ಯಾಯಾಲಯ ಡಿಸೆಂಬರ್ 29 ರವರೆಗೆ ಮೂವರು ಆರೋಪಿಗಳನ್ನು ಸಿಬಿಐ ವಶಕ್ಕೆ ನೀಡಿ ಆದೇಶಿಸಿದೆ....

**ರಘುನಾಥ್ ನಿಗೂಢ ಸಾವಿನ ಹಿನ್ನಲೆಯಲ್ಲಿ....**

**ಬೆಂಗಳೂರು**
✍ಹೆಚ್.ಕೆ. ಮಹದೇವ್

ರಿಯಲ್ ಎಸ್ಟೇಟ್ ಉದ್ಯಮಿಯಾಗಿದ್ದ ರಘುನಾಥ್, ಕರ್ನಾಟಕ, ಆಂಧ್ರಪ್ರದೇಶದಲ್ಲಿ ಹೆಚ್ಚು ಭೂ ವ್ಯವಹಾರ ನಡೆಸುತ್ತಿದ್ದರು. ಲಿಕ್ಕರ್ ಧಣಿ,ಮಾಜಿ ಸಂಸದ,ಟಿ ಟಿ ಡಿ ಮಾಜಿ ಅಧ್ಯಕ್ಷರಾಗಿದ್ದ ಆದಿಕೇಶವಲು ನಾಯ್ಡುಗೂ ಅತ್ಯಂತ ಆತ್ಮೀಯರಾಗಿದ್ದರು. ಇಸವಿ 2013, ಏಪ್ರಿಲ್ 24 ರಂದು ಉದ್ಯಮಿ ಆದಿಕೇಶವುಲು ಮೃತಪಟ್ಟಿದ್ದರು. ಅವರು ನಿಧಾನರಾದ ಬಳಿಕ ಉದ್ಯಮಿ ರಘುನಾಥ್ ಹೆಸರಿನಲ್ಲಿದ್ದ ಆಸ್ತಿಯನ್ನು ತಮ್ಮ ಹೆಸರಿಗೆ ವರ್ಗಾಯಿಸಲು ಆದಿಕೇಶವುಲು ಮಕ್ಕಳು ರಘುನಾಥ್ ಮೇಲೆ ಒತ್ತಡ ಹೇರುತ್ತಿದ್ದಾರೆಂಬ ಆರೋಪ ಮಾಡಲಾಗಿದೆ! ಆದಿಕೇಶವುಲು ಅವರು ಬದುಕಿದ್ದಾಗ ತಮ್ಮ ಹಣದಿಂದ ರಘುನಾಥ್ ಹೆಸರಿನಲ್ಲಿ ಆಸ್ತಿ ಖರೀದಿಸಿದ್ದಾರೆಂಬುದು ಆದಿಕೇಶವುಲು ಮಕ್ಕಳ ಆರೋಪವಾಗಿದೆ ಎನ್ನಲಾಗುತ್ತಿದೆ.


ಡಿವೈಎಸ್ಪಿ ಎಸ್.ವೈ. ಮೋಹನ್

ಹೀಗಾಗಿ, ರಘುನಾಥ್ ಹೆಸರಲ್ಲಿದ್ದ ಆಸ್ತಿಯನ್ನು ತಮ್ಮ ಹೆಸರಿಗೆ ಹಿಂತಿರುಗಿಸುವಂತೆ ಒತ್ತಡ ಹೇರುತ್ತಿದ್ದಾರೆಂದು ಆರೋಪ ಮಾಡಲಾಗಿತ್ತು. ಆದರೆ ತಮ್ಮ ಹೆಸರಿನಲ್ಲಿದ್ದ ಆಸ್ತಿಯನ್ನು ಆದಿಕೇಶವಲು ಮಕ್ಕಳಾದ ಶ್ರೀನಿವಾಸ್, ಕಲ್ಪಜಾ ಹೆಸರಿಗೆ ವರ್ಗಾಯಿಸಲು ಉದ್ಯಮಿ ಕೆ.ರಘುನಾಥ್ ನಿರಾಕರಿಸಿದ್ದರು!

ಅಷ್ಟೆಲ್ಲ ಆಸ್ತಿಯನ್ನು ತಾವೇ ರಿಯಲ್ ಎಸ್ಟೇಟ್ ವ್ಯವಹಾರದ ಮೂಲಕ ಸಂಪಾಧನೆ ಮಾಡಿರುವುದಾಗಿ ರಘುನಾಥ್ ಹೇಳಿದ್ದರಂತೆ!ತಮ್ಮ ಹೆಸರಿನಲ್ಲಿದ್ದ ಆಸ್ತಿಪಾಸ್ತಿಗಳನ್ನ ಆದಿಕೇಶವುಲು ಮಕ್ಕಳಿಗೆ ವರ್ಗಾಯಿಸುವುದಿಲ್ಲವೆಂದು ರಘುನಾಥ್ ಪಟ್ಟು ಹಿಡಿದಿದ್ದಾಗಲೇ, ಇಸವಿ 2016 ರಲ್ಲಿ ರಘುನಾಥ್ ತಮ್ಮ ಪತ್ನಿ ಮಂಜುಳಾ ಹೆಸರಿಗೆ ತಮ್ಮ ಆಸ್ತಿಗಳನ್ನು ಹಸ್ತಾಂತರಿಸಲು ವಿಲ್ ಬರೆದಿದ್ದರು! ಈ ಮಧ್ಯೆ ರಘುನಾಥ್ ತಮ್ಮ ಆಸ್ತಿಯನ್ನೆಲ್ಲ ಮಾರಲು ಮುಂದಾಗಿದ್ದರು ಕೂಡ!

**ನಿಗೂಢ ನೇಣು....**

ಇದೇ ಸಂದರ್ಭದಲ್ಲಿ ಆದಿಕೇಶವುಲು ಮಕ್ಕಳು ರಘುನಾಥ್ ರನ್ನು ವೈಟ್‌ಫೀಲ್ಡ್ ನ ತಮ್ಮ ಗೆಸ್ಟ್ ಹೌಸ್ ಗೆ ಬರಹೇಳಿದ್ದ ಆರೋಪವಿದೆ! ಅದರಂತೆ,ಅವತ್ತು 2019ರ ಮೇ 2 ರಂದು ವೈಟ್ ಫೀಲ್ಡ್‌ನ ಗೆಸ್ಟ್ ಹೌಸ್‌ಗೆ ರಘುನಾಥ್ ತೆರಳಿದ್ದರು. ಮೇ, 4 ರಂದು ಪತ್ನಿ ಮಂಜುಳಾಗೆ ಕರೆ ಮಾಡಿ ತಾನು ಅಪತ್ತಿನಲ್ಲಿರುವುದಾಗಿ ಹೇಳಿದ್ದರು. ಆದಿಕೇಶವುಲು ಪುತ್ರ ಡಿ.ಎ. ಶ್ರೀನಿವಾಸ್‌ಗೆ ಸೇರಿದ ಗೆಸ್ಟ್ ಹೌಸ್ ಗೆ ತೆರಳಿದ್ದಾಗ ರಘುನಾಥ್ ಅವರು ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದರು. ಈ ಕೇಸ್ ಹೆಚ್‌ಎಎಲ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿತ್ತು. ಅಂದಿನ ಪೊಲೀಸ್ ಇನ್ಸ್‌ಪೆಕ್ಟರ್ ಎಸ್ ವೈ ಮೋಹನ್ ತನಿಖೆ ಕೈಗೊಂಡು

☞ 11

# ಡ್ರಗ್ಸ್ ನಶೆಯಲ್ಲಿ ನಡುರೋಡಲ್ಲೇ ಬೆತ್ತಲಾದ ಕುಖ್ಯಾತ ರೌಡಿ ಮಲೆಯಾಳಿ ಮಧು!

5 ☞

ಘಟನೆ ನಡೆದ ತಕ್ಷಣ ಜೆ.ಪಿ. ನಗರದ ಆಗಿನ ಪೊಲೀಸ್ ಇನ್ಸ್‌ಪೆಕ್ಟರ್ ಮಂಜುನಾಥ್, ಪುಟ್ಟೇನಹಳ್ಳಿ ಪೊಲೀಸ್ ಇನ್ಸ್‌ಪೆಕ್ಟರ್ ಆರ್.ಎಸ್. ಚೌಧರಿ, ಎಸಿಪಿ ಮಹಾದೇವ್, ಡಿಸಿಪಿಗಳಾದ ಡಾ. ರೋಹಿಣಿ ಕಟೋಚ್ ಸೆಪಟ್, ಎನ್. ಶಶಿಕುಮಾರ್, ವೆಸ್ಟ್ ಹೆಚ್ಚುವರಿ ಪೊಲೀಸ್ ಕಮಿಷನರ್ ಉಮೇಶ್ ಕುಮಾರ್, ಅಪರಾಧ ಜಂಟಿ ಪೊಲೀಸ್ ಕಮಿಷನರ್ ಸಂದೀಪ್ ಪಾಟೀಲ್, ಬೆರಳಚ್ಚು ಮತ್ತು ವಿಧಿವಿಜ್ಞಾನ ತಜ್ಞರು ಶ್ವಾನ ದಳದೊಂದಿಗೆ ಸ್ಥಳಕ್ಕೆ ಧಾವಿಸಿ ಪರಿಶೀಲನೆ ನಡೆಸಿ ಅಪರಾಧ ಸ್ಥಳದಲ್ಲಿ ಸಾಕ್ಷ್ಯಗಳನ್ನು ಸಂಗ್ರಹಿಸಿದ್ದರು. ಅಂದು ಮುಂಜಾನೆ ಬೆಳಿಗ್ಗೆ 6 ಗಂಟೆಗೆ ಅಂದಿನ ಪೊಲೀಸ್ ಆಯುಕ್ತ ಭಾಸ್ಕರ್ ರಾವ್ ಕೂಡ ಸ್ಥಳಕ್ಕೆ ಭೇಟಿ ನೀಡಿ ಪರಿಸ್ಥಿತಿಯನ್ನು ಅವಲೋಕಿಸಿ 24 ಗಂಟೆಗಳಲ್ಲಿ ಅಪರಾಧಿಗಳನ್ನು ಬಂಧಿಸಲು ನಾಲ್ಕು ವಿಶೇಷ ತಂಡಗಳನ್ನು ರಚಿಸಿದ್ದರು.

ರಕ್ತ ತೊಯ್ದಿದ್ದ ಶರ್ಟ್‌ಗಳಲ್ಲೆ ಅಂಡಲೆಯುತ್ತಿದ್ದ ಆರೋಪಿಗಳನ್ನು ವಿಶ್ವಾಸಾರ್ಹ ಮಾಹಿತಿ ಮತ್ತು ತಾಂತ್ರಿಕ ಮಾಹಿತಿಯ ಸಹಾಯದಿಂದ ಜೆ.ಪಿ. ನಗರ ಪೊಲೀಸ್ ಠಾಣೆಯ ಚಾಣಾಕ್ಷ ತಂಡವು ಜೋಡಿ ಕೊಲೆಯಾದ ಕೇವಲ 10 ಗಂಟೆಗಳ ಒಳಗೆ ಇಬ್ಬರು ಪ್ರಮುಖ ಆರೋಪಿಗಳನ್ನು ಬಂಧಿಸಿತ್ತು. ಅವತ್ತು ಮಧುಸೂಧನ್ ಅಲಿಯಾಸ್ ಮಲೆಯಾಳಿ ಮಧು ಮತ್ತು ಲಿಖಿನ್ ಎಂದು ಗುರುತಿಸಲಾದ ಇಬ್ಬರು ವ್ಯಕ್ತಿಗಳನ್ನು ಬಂಧಿಸಿದ್ದರು! ರೌಡಿ ಶೀಟರ್ ಟ್ಯಾಬ್ ರಘು ತಮ್ಮ ನರೇಂದ್ರ ಅಲಿಯಾಸ್ ನರು ನ್ಯಾಯಾಲಯದಲ್ಲಿ ಶರಣಾಗಿದ್ದ. ಹಳೇ ದ್ವೇಷದ ಹಿನ್ನಲೆಯಲ್ಲಿ ಸೌತ್ ಬೆಂಗಳೂರಿನ ಸುಫಾರಿ ಕಿಲ್ಲರ್ ತಮ್ಮ ಮಂಜನನ್ನು ಕೊಂದು ಮುಗಿಸಿದ್ದಾಗಿ ಎಲ್ಲರೂ ಪೊಲೀಸರೆದುರು ಒಪ್ಪಿಕೊಂಡಿದ್ದರು! ತನಿಖೆಯಲ್ಲಿ ಆರೋಪಿ ಮಧುಸೂಧನ ಅಲಿಯಾಸ್ ಮಲಯಾಳಿ ಮಧು ಮತ್ತು ಲಿಖಿನ್ ಬಿ.ವಿ. ಅಲಿಯಾಸ್ ಬೋಪಣ್ಣ ಕುಪ್ಪಂಡ ಕೊಲೆಯಾದ ದಿವಂಗತ ರಘು ಅಲಿಯಾಸ್ ಟ್ಯಾಬ್ಲೆಟ್ ರಘು ಅವರ ಸಹಚರರು ಎಂದು ತಿಳಿದುಬಂದಿತ್ತು.



ಭಾಸ್ಕರ್ ರಾವ್



ಸಂದೀಪ್ ಪಾಟೀಲ್



ರೋಹಿಣಿ ಸೆಪಟ್

ಲಿಖಿನ್ ಬಿ.ವಿ ವಿರುದ್ಧ ಜೆ.ಪಿ. ನಗರ ಪೊಲೀಸ್ ಠಾಣೆ ಮತ್ತು ಕುಮಾರಸ್ವಾಮಿ ಲೇಔಟ್ ಪೊಲೀಸ್ ಠಾಣೆಯಲ್ಲಿ ಎರಡು ಪ್ರಕರಣಗಳು ದಾಖಲಾಗಿವೆ. ರೌಡಿ ಶೀಟರ್ ತಮ್ಮ ಮಂಜನ ಕೊಲೆ 2017ರಲ್ಲಿ ನಡೆದಿದ್ದ ಟ್ಯಾಬ್ಲೆಟ್ ರಘು ಅವರ ಕೊಲೆಗೆ ಪ್ರತೀಕಾರವಾಗಿದೆ ಎಂದು ಹೇಳಿದ್ದರು.

**ಟ್ಯಾಬ್ಲೆಟ್‌ನನ್ನು ಪೈಪ್ ಲೈನ್ ಬಳಿ ಕ್ರೂರವಾಗಿ ಕೊಂದಿದ್ದರು...**

ಬೆಂಗಳೂರಿನ ದಕ್ಷಿಣ ಭಾಗದಲ್ಲಿ ನಡೆಯುತ್ತಿದ್ದ ರೌಡಿಶೀಟ್ ಚಟುವಟಿಕೆಗಳು ಮತ್ತು ಏರಿಯಾ ಕಂಟ್ರೋಲ್ ಕುರಿತ ಒಳಗೊಳಗೇ ನಡೆಯುತ್ತಿದ್ದ ಸಂಘರ್ಷದಿಂದ ಸ್ಥಳೀಯ ಗ್ಯಾಂಗ್ ವೈಷಮ್ಯದಿಂದ ರೌಡಿ ಶೀಟರ್ ರಘು ಅಲಿಯಾಸ್ ಟ್ಯಾಬ್ಲೆಟ್ ರಘುನನ್ನು 2017ರ ಆಗಸ್ಟ್ ತಿಂಗಳಲ್ಲಿ ಬೆಂಗಳೂರು ನಗರದ ತಲಘಟ್ಟಪುರದ ಸಮೀಪದಲ್ಲಿರುವ ಯೂಕಲಿಪ್ಟಸ್ ತೋಟದಲ್ಲಿ ಶಸ್ತ್ರಸಜ್ಜಿತ ಗ್ಯಾಂಗ್ ಒಂದು ಕ್ರೂರವಾಗಿ ಹ್ಯಾಕ್ ಮಾಡಿ ಕೊಲೆ ಮಾಡಿತ್ತು. ಈ ಕೊಲೆಯಲ್ಲಿ ಸಂಜಯ್ ಅಲಿಯಾಸ್ ಸಂಜು, ದಕ್ಷಿಣ ಬೆಂಗಳೂರು ಭಾಗದ ರೌಡಿ ವಲಯದ ಮಂಜುನಾಥ್ ಅಲಿಯಾಸ್ ತಮ್ಮ ಮಂಜು, ಶಿವ ಅಲಿಯಾಸ್ ಶಿವಣ್ಣ, ರಘುವಿನ ಹಳೆಯ ಸಹಚರ ಲೋಕೇಶ್, ಸ್ಥಳೀಯ ರವಿ ಅಲಿಯಾಸ್ ರವಿಚಂದ್ರ ಮುಂತಾದವರ ಹೆಸರು ಸುಪಾರಿ ವಾಸನೆಯಲ್ಲಿ ತೇಲಿಬಂದಿತ್ತು. ಈ ಕೊಲೆಗೆ ಹಳೆಯ ವೈಷಮ್ಯ ಹಣಕಾಸು ವ್ಯವಹಾರವೆಂದು ಪೊಲೀಸರು ಶರಾ ಬರೆದಿದ್ದರು.

**ಸುಫಾರಿ ಕಿಲ್ಲರ್ ತಮ್ಮ ಮಂಜ ನಡುಬೀದೀಲಿ ಹೆಣವಾದ!**

ಬೆಂಗಳೂರು ಸೌತ್‌ನಲ್ಲಿದ್ದುಕೊಂಡು ಹಲವಾರು ಸುಫಾರಿ ಕಿಲ್ಲಿಂಗ್ ನಡೆಸಿ ಕರ್ನಾಟಕ ಪೊಲೀಸ್ ಇಲಾಖೆಗೆ ಚಳ್ಳೇಹಣ್ಣು ತಿನ್ನಿಸಿ ಬದುಕುತ್ತಿದ್ದ ನಟೋರಿಯಸ್ ಸುಪಾರಿ ಹಂತಕ ರೌಡಿ ಶೀಟರ್ ತಮ್ಮ ಮಂಜ ಫೀಲ್ಡ್‌ನಲ್ಲಿ ಮಾಡಿದ್ದ ಖತರ್ನಾಕ್ ಕೇಸುಗಳು ಸಿಸಿಬಿ, ಸಿಐಡಿಗೂ ತಲೆನೋವು ತಂದಿದ್ದವು. ಆನೇಕಲ್ ಕೋರ್ಟ್ ಬಳಿ ಕೊಲೆಯಾಗಿದ್ದ ಕೋಟ್ಯಾಧಿಪತಿ ಮುದುಕನೊಬ್ಬನ ಸಸ್ಪೆನ್ಸ್ ಮರ್ಡರ್ ಮಿಸ್ಟರಿಯ ಮಾಸ್ಟರ್ ಮೈಂಡ್ ಕೂಡ ಇದೇ ತಮ್ಮ ಮಂಜ ಎಂಬ ವದಂತಿಗಳೂ ಇದ್ದವು.

ಹೆಚ್‌ಎಸ್‌ಆರ್ ಶ್ರೀಧರನ ಇಶಾರೆ ಮೇರೆಗೆ ಹಲವಾರು ಕೊಲೆ ಮಾಡಿದ್ದ ತಮ್ಮ ಮಂಜ, ತಾನು ಕನಕಪುರ ರಸ್ತೆಯಲ್ಲಿ ಬೆಂಗಳೂರು ಸೌತ್‌ನಲ್ಲಿ ಹವಾ ಮಾಡಬೇಕೆಂದು ಹೊರಟಿದ್ದ ಇಂಡಿಫೆಂಡೆಂಟ್ ಕಿಲ್ಲರ್! ಇಂತಹ ಹಿನ್ನಲೆಯ ತಮ್ಮ ಮಂಜನನ್ನು ಟ್ಯಾಬ್ ರಘುವಿನ ಸಹೋದರ ನರೇಂದ್ರ, ಅಲಿಯಾಸ್ ನರು ಮತ್ತು ಇತರರು ಹಳೆಯ ಸೇಡು ತೀರಿಸಿಕೊಳ್ಳಲು ಸಂಚು ರೂಪಿಸಿ ರೌಡಿ ಶೀಟರ್ ಮಂಜ ಅಲಿಯಾಸ್ ತಮ್ಮ ಮಂಜನನ್ನು ಕೊಲೆ ಮಾಡಲು ಸ್ಕೆಚ್ ಹಾಕಿದ್ದರು.

ಈ ಪಾತಕಿಗಳು 2019 ಇಸವಿಯಲ್ಲಿ ಆಗಸ್ಟ್ ತಿಂಗಳ 25ನೇ ತಿರೀಖು ರಾತ್ರಿ 11.30 ರಲ್ಲಿ ಕೆಎ-01 ಎಮ್‌ಹೆಚ್-9516 ಸಂಖ್ಯೆಯ ಕಾರಿನಲ್ಲಿ ರೌಡಿ ಶೀಟರ್ ತಮ್ಮ ಮಂಜನನ್ನು ಜೆ.ಪಿ. ನಗರದಲ್ಲಿ ತುಂಬಾ ದೂರದಿಂದ ಫಾಲೋಯಿಂಗ್ ಮಾಡಿಕೊಂಡು ಹೋಗಿ ದ್ವಿಚಕ್ರ ವಾಹನದಲ್ಲಿದ್ದ ಮಂಜ ಮತ್ತು ವರುಣ್ ಅವರನ್ನು ಹಿಂಬಾಲಿಸಿ, ಜೆ.ಪಿ. ನಗರದ ನಂದಿನಿ ಜಂಕ್ಷನ್ ಬಳಿ ಕಾರನ್ನು ಅವರ ಬೈಕಿಗೆ ಡಿಕ್ಕಿ ಹೊಡೆದು ನೆಲಕ್ಕೆ ಬೀಳಿಸಿ ಭೀಕರವಾಗಿ ಕೊಲೆ ಮಾಡಿದ್ದರು. ರೌಡಿ ಶೀಟರ್ ತಮ್ಮ ಮಂಜನ ಕತ್ತು ಕುಯ್ದು ಸತ್ತವನ ಮುಖದ ಮೇಲೆ ಉಚ್ಚೆ ಹುಯ್ದಿದ್ದ ಇದೇ ಸೈಕೋ ಮಲೆಯಾಳಿ ಮಧು ಶಿಷ್ಯನ ಸೇಡು ಮುಗಿಯಿತು ಎಂದು ಕೇಕೆ ಹಾಕಿದ್ದ! ಅಂದು ಕೂಡ ಟ್ಯಾಬ್ ಹಾಕಿಕೊಂಡೇ ಫೀಲ್ಡ್‌ಗಿಳಿದಿದ್ದ ಟ್ಯಾಬ್ ರಘು ಹುಡುಗರು ನಟೋರಿಯಸ್ ಹಂತಕ ತಮ್ಮ ಮಂಜನನ್ನು ನಿರಾಯಾಸವಾಗಿ ನಡು ಬೀದಿಯಲ್ಲಿ ಮುಗಿಸಿಬಿಟ್ಟಿದ್ದರು!

**ಜೇಬಿನಲ್ಲೇ ಇರ್ತಿತ್ತು ಟ್ಯಾಬ್ಲೆಟ್!**

ಬೆಂಗಳೂರು ದಕ್ಷಿಣ ಭಾಗದ ತಲಘಟ್ಟಪುರ, ಕನಕಪುರ ರಸ್ತೆ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಅಕ್ರಮವಾಗಿ ನಡೆಯುತ್ತಿದ್ದ, ಅಂದರ್ ಬಾಯರ್ ಇಸ್ಪೀಟ್ ಅಡ್ಡೆಗಳು, ಸ್ಕಿಲ್ ಗೇಮ್, ಕೋಳಿ ಪಂದ್ಯ ಭೂಮಾಫಿಯಾದ ಮೇಲೆ ಹಿಡಿತ ಸಾಧಿಸಲು ರೌಡಿಸಂಗಿಳಿದಿದ್ದ ಈ ಟ್ಯಾಬ್ ರಘುಗೆ 'ಟ್ಯಾಬ್ಲೆಟ್ ರಘು' ಎಂಬ ಹೆಸರು ಬರಲು ನಿಖರ ಕಾರಣ, ರಘು ನಿರಂತರವಾಗಿ ನಿಷೇಧಿತ ಗುಳಿಗೆಗಳು, ನಿದ್ರೆ ಮಾತ್ರೆ, ನೋವಿನ ಮಾತ್ರೆ. ಕಾಫ್ ಸಿರಫ್, ಎಂಡಿಎಂ ಮಾತ್ರೆ ತರದ ಡ್ರಗ್ಸ್(ಪೇನ್ ಕಿಲ್ಲರ್, ಸಿಡೇಟಿವ್ ತರಹದ ಟ್ಯಾಬ್ಲೆಟ್‌ಗಳು) ಸೇವಿಸುತ್ತಿದ್ದ.

ಸದಾ ಮಂಪರು ಸ್ಥಿತಿಯಲ್ಲಿರುವಂತೆ ವರ್ತಿಸುತ್ತಿದ್ದ ಈತ ಯಾವಾಗ್ಲೂ ತನ್ನ ಜೇಬಿನಲ್ಲಿ ಟ್ಯಾಬ್ಲೆಟ್ ಇಟ್ಟುಕೊಂಡು ಎಲ್ಲೆಲ್ಲೂ ತಿರುಗುವುದು, ಗಲಾಟೆಗೂ ಮುನ್ನ ಗುಳಿಗೆಗಳನ್ನು ಸೇವಿಸುವ ಅಭ್ಯಾಸ ರೂಢಿಸಿಕೊಂಡಿದ್ದನಂತೆ! ಈ ಕಾರಣದಿಂದ ಅಪರಾಧ ಜಗತ್ತಿನಲ್ಲೂ, ಸ್ಥಳೀಯವಾಗಿ ಕೂಡ 'ಟ್ಯಾಬ್ಲೆಟ್ ರಘು' ಎಂದು ಕರೆಯತೊಡಗಿದ್ದರು. ರೌಡಿಶೀಟರ್ ಅರಸಯ್ಯ, ಸೈಕಲ್ ರವಿ, ಬೇಕರಿ ರಘು, ಸಿಂಡಿಕೇಟ್‌ನಲ್ಲಿ ಗುರುತಿಸಿಕೊಂಡಿದ್ದ ರೌಡಿ ಟ್ಯಾಬ್ ರಘು ವಿರುದ್ಧ ಮುಖ್ಯವಾಗಿ ರೌಡಿಸಂ, ದಬ್ಬಾಳಿಕೆ, ಹಲ್ಲೆ, ಶಸ್ತ್ರಾಸ್ತ್ರ ಬಳಕೆ ಅಪರಾಧ ಪ್ರಕರಣಗಳು ದಾಖಲಾಗಿದ್ದವು.

ಕನಕಪುರ ರಸ್ತೆಯ ತಲಘಟ್ಟಪುರ ವಲಯ ಕೋಣನಕುಂಟೆ, ವಜ್ರಹಳ್ಳಿ ಸುತ್ತಮುತ್ತಲ ಪ್ರದೇಶ,




ಉತ್ತರಹಳ್ಳಿ ಭಾಗಗಳು, ಕೆಲವೊಮ್ಮೆ ಬನ್ನೇರುಘಟ್ಟ ರಸ್ತೆ ಸಂಪರ್ಕ ಪ್ರದೇಶಗಳಲ್ಲಿ ಭೂ ಕಬಳಿಕೆ, ಕೊಲೆ ಯತ್ನ, ಹಣ ವಸೂಲಿ, ಬೆದರಿಕೆ, ಮುಂತಾದ ಅಪರಾಧ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದ ಟ್ಯಾಬ್ ರಘು ಪ್ರಭಾವ ಒಂದು ದೊಡ್ಡ ಮಟ್ಟದ ಡಾನ್ ಮಟ್ಟದಲ್ಲಿರದಿದ್ದರೂ, ದಕ್ಷಿಣ ವಲಯದಲ್ಲಿ 'ಲೋಕಲ್ ಎನ್‌ಫೋರ್ಸರ್, ಫೀಲ್ಡ್ ರೌಡಿ' ಎಂಬಂತೆಯೇ ಪರಿಚಿತನಾಗಿದ್ದ!

ಸ್ಥಳೀಯ ಬಿಲ್ಡರ್‌ಗಳ ಮೇಲೆ, ಲೇಔಟ್ ಅಭಿವೃದ್ಧಿ ಸಂಬಂಧಿತ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡುತ್ತಿದ್ದ ಟ್ಯಾಬ್ ರಘುವಿನ ರೌಡಿ ಪಾಳಯದಲ್ಲಿ ಬಲಗೈ ಭಂಟನಂತೆ ಗುರ್ತಿಸಿಕೊಂಡಿದ್ದ ಮಧುಸೂಧನ್ ಅಲಿಯಾಸ್ ಮಲೆಯಾಳಿ ಮಧು ಕೂಡ ಗುರುವಿನಂತೆಯೇ ಡ್ರಗ್ಸ್ ಚಟಕ್ಕೆ ದಾಸನಾಗಿದ್ದವನೆ. ಚಟ ಚಟ್ಟಕ್ಕೆ ಕರೆಯಿತು ಎಂಬಂತೆ, ಈಗ ಒನ್ ಲೈನ್ ಡ್ರಗ್ಸ್ ನಶೆಯಲ್ಲಿ ಬಟ್ಟೆಬರೆ ಕಿತ್ತೆಸೆದು ನಡುರೋಡ್‌ನಲ್ಲಿ ಬೆತ್ತಲಾಗಿ ಸುತ್ತಾಡಿ 'ಫೀಲ್ಡ್'ನಲ್ಲಿ ಮಾನ ಮರ್ಯಾದೆ ಕಳೆದುಕೊಂಡಿದ್ದಾನೆ... ಪೊಲೀಸ್ ಕೇಸ್ ಬೇರೆ ಆಗಿದೆ.

ನಿಮ್ಹಾನ್ಸ್ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆದ ಕೂಡಲೇ ಪರಪ್ಪನ ಅಗ್ರಹಾಸ ಗೆಸ್ಟ್‌ಹೌಸ್‌ಗೆ ಅತಿಥಿಯಾಗಿ ಹೋಗಲೇಬೇಕು.ಅಲ್ಲಿಂದ ವಕೀಲರ ಸಂಪರ್ಕಿಸಿ ಕೋರ್ಟ್‌ನಲ್ಲಿ ಜಾಮೀನು ಗಿಟ್ಟಿಸಿ ಹೊರಗಡೆ ಬರಬೇಕು... ಬಂದ ಮೇಲೂ ಬೆಲೆ ಸಿಗೋದು ಈ ಬಾರಿ ಡೌಟ್! ☯

# ಮಲ್ಪೆ ಪೊಲೀಸರ ಎಡವಟ್ಟು; ಎಸ್ಪಿ ಹೈರಾಣ!

6 ☞

ಕೇಸು ದಾಖಲಿಸಬೇಕೆಂದು ಒತ್ತಾಯಿಸಿ ಒಂದು ದಿನದ ಗಡುವು ನೀಡಿದ್ದರು. ಆದರೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕ್ರಮ ಕೈಗೊಳ್ಳದ ಹಿನ್ನೆಲೆಯಲ್ಲಿ ಉಡುಪಿ ಜಿಲ್ಲೆಯ ವಿವಿಧ ಸಂಘ ಸಂಸ್ಥೆಗಳು, ಜನಪ್ರತಿನಿಧಿಗಳು, ಬಿಲ್ಲವ ಸಮುದಾಯ ಸಂಘ ಸಂಸ್ಥೆಗಳು ಸೇರಿದಂತೆ ಬ್ರಹ್ಮಾವರ ಪೊಲೀಸ್ ಠಾಣೆಯ ಎದುರು ಪ್ರತಿಭಟನೆ ನಡೆಯಿತು. ಪ್ರತಿಭಟನಾಕಾರರ ಮನವೊಲಿಸಲು ಉಡುಪಿ ಜಿಲ್ಲಾ ಸ್ಥಾನೀಯ ಜಿಲ್ಲಾಧಿಕಾರಿಗಳು ಬಂದಿದ್ದರು. ಆದರೆ ಮನವೊಲಿಕೆಗೆ ಪ್ರತಿಭಟನಾಕಾರರು ಬಗ್ಗಲಿಲ್ಲ. ಸುಮಾರು ಆರು ಗಂಟೆಗಳ ಕಾಲ ಪ್ರತಿಭಟನೆ ನಡೆದಾಗ ಪೊಲೀಸರೇ ಮಂಡಿಯೂರಬೇಕಾಯಿತು. ಅಕ್ಷತಾ ಅವರು ಉಡುಪಿ ಅಜ್ಜರಕಾಡು ಆಸ್ಪತ್ರೆಯಲ್ಲಿದ್ದಾಗ ನೀಡಿದ ಹೇಳಿಕೆಯಂತೆಯೇ ಮೂವರು ಪೊಲೀಸ್ ಅಧಿಕಾರಿಗಳು ಮತ್ತು ದೇವೇಂದ್ರ ಸುವರ್ಣ, ಅವರ ಮಗನ ಮೇಲೆ ಕೇಸು ದಾಖಲಿಸಿಕೊಳ್ಳಲಾಯಿತು. ಈ ವಿಚಾರವನ್ನು ಸ್ಪಷ್ಟಪಡಿಸಿಕೊಂಡ ಪ್ರತಿಭಟನಾಕಾರರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹರಿರಾಮ್ ಶಂಕರ್ ಅವರಿಗೆ ಧನ್ಯವಾದ ತಿಳಿಸಿ ಪ್ರತಿಭಟನೆಯನ್ನು ಕೊನೆಗೊಳಿಸಿದರು. ☯

# ಅತ್ತೆ ಮಗನಿಂದಲೇ ಭೀಕರವಾಗಿ ಹತ್ಯೆಯಾದ ಸಂಧ್ಯಾ!


ಕೊಲೆಯಾದ ಸಂಧ್ಯಾ

**ಚಿ**ಕ್ಕಮಗಳೂರು ತಾಲೂಕಿನ ಅರೇನೂರು ಗ್ರಾಮದಲ್ಲಿ ಗೃಹಿಣಿ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಎರಡು ದಿನದ ಬಳಿಕ ಹಂತಕ ಪೊಲೀಸರಿಗೆ ಸಿಕ್ಕಿಬಿದ್ದಾನೆ. ತನ್ನಿಂದ ದೂರವಾದ ಸಿಟ್ಟಿಗೆ ಅತ್ತೆ ಮಗಳನ್ನೇ ಆರೋಪಿ ಬರ್ಬರವಾಗಿ ಕೊಲೆ ಮಾಡಿ ಪರಾರಿಯಾಗಿದ್ದ. ಸದ್ಯ ಆಲ್ದೂರು ಪೊಲೀಸರು ಆತನನ್ನು ಬಂಧಿಸಿ ಜೈಲಿಗಟ್ಟಿದ್ದಾರೆ.

ತನ್ನಿಂದ ದೂರವಾದ ಸಿಟ್ಟಿಗೆ ಅತ್ತೆ ಮಗಳನ್ನೇ ಹತ್ಯೆ ಮಾಡಿ ಪರಾರಿಯಾಗಿದ್ದ ಹಂತಕನನ್ನು ಪೊಲೀಸರು ಎರಡು ದಿನದ ಬಳಿಕ ಬಂಧಿಸಿ ಜೈಲಿಗಟ್ಟಿದ್ದಾರೆ. ಮೂಡಿಗೆರೆ ತಾಲೂಕಿನ ವಾಟೆಖಾನ್ ಗ್ರಾಮದ ನಿವಾಸಿ ಜನಾರ್ಧನ್ (38) ಬಂಧಿತ ಆರೋಪಿ. ಜನಾರ್ಧನ್‌ಗೆ ಹೆಂಡತಿ ಇದ್ದರೂ ಗಂಡನನ್ನ ಬಿಟ್ಟಿದ್ದ ಅತ್ತೆ ಮಗಳು ಸಂಧ್ಯಾ ಮೇಲೆ ಪ್ರೀತಿ ಇತ್ತು. ತನ್ನೊಂದಿಗೆ ಬಂದವಳು ವಾಪಸ್ ಮನೆಗೆ ತೆರಳಿದ್ದಕ್ಕೆ ಆಕ್ರೋಶಗೊಂಡು ಕೊಲೆಗೈದಿದ್ದ.

**ನಡೆದದ್ದೇನು?**

ಡಿಸೆಂಬರ್ 1ರ ಬೆಳಗ್ಗೆ ಅರೇನೂರು ಗ್ರಾಮದ ಸಂಧ್ಯಾ ಎಂಬ ಮಹಿಳೆಯನ್ನ ಮನೆಯ ಹಿಂಭಾಗದಲ್ಲಿ ಕತ್ತು ಕೂಯ್ದು ಬರ್ಬರವಾಗಿ ಹತ್ಯೆ ಮಾಡಿ ಹಂತಕ ಎಸ್ಕೇಪ್ ಆಗಿದ್ದ. ಘಟನೆ ನಡೆದು ಎರಡು ದಿನಗಳ ಬಳಿಕ ಸಂಧ್ಯಾಳನ್ನ ಬರ್ಬರವಾಗಿ ಹತ್ಯೆ ಮಾಡಿದ್ದ ಹಂತಕನನ್ನ ಪೊಲೀಸರು ಬಂಧಿಸಿದ್ದಾರೆ. ಅತ್ತೆ ಮಗನಿಂದಲೇ ಸಂಧ್ಯಾ ಬರ್ಬರವಾಗಿ ಹತ್ಯೆಯಾಗಿದ್ದಾಳೆ. ಇದಕ್ಕೆ ಕಾರಣವಾಗಿದ್ದು, ಅನೈತಿಕ ಸಂಬಂಧ.

ಜನಾರ್ಧನ್ ಸಂಧ್ಯಾಳ ಅತ್ತೆ ಮಗ. ಸಂಧ್ಯಾಳ ಹತ್ಯೆ ಮಾಡಿ ವಾಟೆಖಾನ್ ಕಾಡು ಸೇರಿದ್ದ ಆತನನ್ನು ಖಚಿತ ಮಾಹಿತಿ ಮೇರೆಗೆ ಪೊಲೀಸರು ಇದೀಗ ಬಂಧಿಸಿದ್ದಾರೆ. ಸಂಧ್ಯಾ ಹತ್ಯೆಯಾದ ದಿನವೇ ಆಲ್ದೂರು ಪೊಲೀಸರಿಗೆ ಜನಾರ್ಧನ್ ಮೇಲೆ ಅನುಮಾನ ಮೂಡಿತ್ತು. ಆ ಅನುಮಾನಕ್ಕೆ ಕಾರಣವಾಗಿದ್ದು ಸಂಧ್ಯಾ ಮತ್ತು ಜನಾರ್ಧನ್ ನಡುವಿನ ಲವ್ ಸ್ಟೋರಿ. ಹತ್ಯೆಯಾದ ಹಿಂದಿನ ದಿನ ವಾಟೆಖಾನ್ ಗ್ರಾಮದಿಂದ ಅರೇನೂರು ಗ್ರಾಮಕ್ಕೆ ವಾಪಸ್ ಬಂದಿದ್ದ ಸಂಧ್ಯಾಳನ್ನ ಬರ್ಬರವಾಗಿ ಹತ್ಯೆ ಮಾಡಿದ್ದಾನೆ. ಇದಕ್ಕೆ ಕಾರಣವಾಗಿದ್ದು ಒಂದು ಕಡೆ ಹೆಂಡತಿ ಕಾಟ, ಮತ್ತೊಂದು ಕಡೆ ಅತ್ತೆ ಮಗಳ ಲವ್ ಟಾರ್ಚರ್.

ಕಳೆದ ಒಂದು ತಿಂಗಳ ಹಿಂದೆ ಸಂಧ್ಯಾ ಅರೇನೂರು ಗ್ರಾಮದ ತನ್ನ ತಾಯಿ ಮನೆಯಿಂದ ಏಕಾಏಕಿ ನಾಪತ್ತೆಯಾಗಿದ್ದಳು. ಕುಟುಂಬದವರು ಆಲ್ದೂರು ಪೊಲೀಸ್ ಠಾಣೆಯಲ್ಲಿ ನಾಪತ್ತೆ ಪ್ರಕರಣ ದಾಖಲು ಮಾಡಿದ್ದರು. ಸಂಧ್ಯಾಳಿಗಾಗಿ ಹುಡುಕಾಟ ನಡೆಸಿದ ಪೊಲೀಸರು, ಸಂಧ್ಯಾ ಮೂಡಿಗೆರೆ ತಾಲೂಕಿನ ವಾಟೆಖಾನ್ ಗ್ರಾಮದ ತನ್ನ ಅತ್ತೆ ಮನೆಯಲ್ಲಿ ಇರುವುದು ಗೊತ್ತಾಗಿತ್ತು. ಆದರೆ ನವೆಂಬರ್ 30ರ ಸಂಜೆ ಸಂಧ್ಯಾ ಅರೇನೂರು ಗ್ರಾಮದ ಮನೆಗೆ ಬಂದಿದ್ದು, ಬೆಳಗ್ಗೆ ಮನೆಯ ಹಿಂಭಾಗದಲ್ಲಿ ಹೆಣವಾಗಿದ್ದಳು.

ತನ್ನ ಅತ್ತೆ ಮಗ ಜನಾರ್ಧನ್ ಜೊತೆ ಸಂಧ್ಯಾಳಿಗೆ ಬಾಲ್ಯದಿಂದಲೇ ಸಲಿಗೆ ಬೆಳೆದಿತ್ತು. ಇದೇ ಸಲುಗೆ ಪ್ರೇಮವಾಗಿತ್ತು. ಆದರೆ ಮನೆಯವರು ಇವರ ಮದುವೆಗೆ ಒಪ್ಪಿಗೆ ನೀಡದ ಹಿನ್ನೆಲೆ ಸಂಧ್ಯಾಳನ್ನ ಬಾಳೆಹೊನ್ನೂರು ಸಮೀಪದ ಶಿರಗೋಳ ಗ್ರಾಮದ ರವಿ ಜೊತೆ ಮದುವೆ ಮಾಡಲಾಗಿತ್ತು. ಜನಾರ್ಧನ್ ಕೂಡ ಮೂಡಿಗೆರೆ ಮೂಲದ ಯುವತಿ ಜೊತೆ ವಿವಾಹವಾಗಿದ್ದ. ಆದರೆ ಸಂಧ್ಯಾ ಮತ್ತು ಜನಾರ್ಧನ್ ಮಧ್ಯೆ ಅನೈತಿಕ ಸಂಬಂಧ ಬೆಳೆದಿತ್ತು. ಇದೆ ವಿಚಾರಕ್ಕೆ ಸಂಧ್ಯಾ ಮತ್ತು ಪತಿ ರವಿ ಜೊತೆ ಗಲಾಟೆಯಾಗಿ ಸಂಧ್ಯಾ ಮೂರು ವರ್ಷದ ಹಿಂದೆ ತನ್ನ ಮೂವರು ಮಕ್ಕಳ ಜೊತೆ ಅರೆನೂರು ಗ್ರಾಮದ ತಾಯಿ ಮನೆ ಸೇರಿದ್ದಳು.

ಜನಾರ್ಧನ್ ಮತ್ತು ಸಂಧ್ಯಾಳ ಆತ್ಮೀಯತೆ ಇನ್ನೂ ಹೆಚ್ಚಾಗಿತ್ತು. ಇದೇ ವಿಷಯಕ್ಕೆ ಜನಾರ್ಧನ್ ಪತ್ನಿ ತನ್ನ ಎರಡು ಮಕ್ಕಳನ್ನು ಕರೆದುಕೊಂಡು ತವರು ಮನೆ ಸೇರಿದ್ದಳು. ಜನಾರ್ಧನ್ ಪತ್ನಿ ತವರುಮನೆ ಸೇರುತ್ತಿದ್ದಂತೆ ಸಂಧ್ಯಾ ಮದುವೆಯಾಗುವಂತೆ ಪೀಡಿಸಿದ್ದಾಳೆ. ಯಾರಿಗೂ ಹೇಳಿದೆ ವಾಟೆಖಾನ್ ಗ್ರಾಮದಲ್ಲಿರುವ ಜನಾರ್ಧನ್ ಮನೆಗೆ ಹೋಗಿ ಅಲ್ಲೇ ವಾಸವಾಗಿದ್ದಳು. ಈ ವಿಷಯ ಪೊಲೀಸ್ ಠಾಣೆವರೆಗೂ ಹೋಗುತ್ತಿದ್ದಂತೆ ವಾಪಸ್ ಬಂದಿದ್ದಳು. ಮನೆಯವರಿಗೆ ಹೇಳಿ ತನ್ನನ್ನು ಕರೆದುಕೊಂಡು ಹೋಗುವಂತೆ ಡಿಸೆಂಬರ್ 1ರ ಬೆಳಗ್ಗೆ ಜನಾರ್ಧನ್‌ಗೆ ಫೋನ್ ಮಾಡಿದ್ದಳು. ಒಂದು ಕಡೆ ಹೆಂಡತಿ ಕಾಟ ಮತ್ತೊಂದು ಕಡೆ ಅತ್ತೆ ಮಗಳ ಕಾಟಕ್ಕೆ ಆಕ್ರೋಶಗೊಂಡ ಜನಾರ್ಧನ್, ಸಂಧ್ಯಾಳ ಕುತ್ತಿಗೆಯನ್ನ ತಾನು ತಂದಿದ್ದ ಚಾಕುವಿನಿಂದ ಕೊಯ್ದು ತನ್ನ ವಾಟೆಖಾನ್ ಗ್ರಾಮದ ಮನೆಯ ಹಿಂಭಾಗದ ಕಾಡು ಸೇರಿದ್ದ.


ಆರೋಪಿ ಜನಾರ್ಧನ

ಸದ್ಯ ತನ್ನ ಪ್ರೇಯಸಿ ಅತ್ತೆ ಮಗಳನ್ನೇ ಕೊಂದ ಜನಾರ್ಧನ್ ಜೈಲು ಸೇರಿದ್ದಾನೆ. ಇವರಿಬ್ಬರ ಅನೈತಿಕ ಸಂಬಂಧಕ್ಕೆ ನಾಲ್ಕು ಕುಟುಂಬಗಳು ಕಣ್ಣೀರು ಹಾಕಿದರೆ, ತಾಯಿಯನ್ನು ಕಳೆದುಕೊಂಡು ಮಕ್ಕಳು ಅನಾಥರಾಗಿದ್ದಾರೆ. ತಮ್ಮನ್ನ ಸಾಕಿ ಬೆಳೆಸಬೇಕಿದ್ದ ಅಪ್ಪ ಜೈಲು ಸೇರಿದ್ದಾನೆ. ☯

# ಲಿಕ್ಕರ್ ಧಣಿ ಆದಿಕೇಶವುಲು ಮಕ್ಕಳು ಅರೆಸ್ಟ್!!

9 ☞

ರಘುನಾಥ್ ಸಾವನ್ನು 'ಆತ್ಮಹತ್ಯೆ' ಪ್ರಕರಣವೆಂದು ಮುಕ್ತಾಯಗೊಳಿಸಲಾಗಿತ್ತು!


**ಆತ್ಮಹತ್ಯೆ ಅಲ್ಲ ಕೊಲೆ...**

ಕೆಲ ತಿಂಗಳ ನಂತರ ಫೆಬ್ರವರಿ 15,2020ರಂದು ರಘುನಾಥ್‌ರನ್ನು ಕೊಲೆ ಮಾಡಿರಬಹುದೆಂದು ಅನುಮನಿಸಿ ಅವರ ಪತ್ನಿ ಮಂಜುಳಾ ಅವರು ಹೆಚ್‌ಎಎಲ್ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಆದರೆ, ಅಲ್ಲಿನ ಪೊಲೀಸರು ದೂರು ಸ್ವೀಕರಿಸದಿದ್ದಾಗ ಶ್ರೀಮತಿ ಮಂಜುಳ ಅವರು ಕೋರ್ಟ್‌ಗೆ ತೆರಳಿ ಖಾಸಗಿ ದೂರು ಸಲ್ಲಿಸಿದ್ದರು. ನಂತರ ಕೋರ್ಟ್ ಆದೇಶದಂತೆ ಎಸ್‌ಐಟಿ ರಚಿಸಿ ತನಿಖೆ ನಡೆಸಲಾಗಿತ್ತು.

ರಘುನಾಥ್ ಪತ್ನಿ ಮಂಜುಳಾ ಅವರ ಆರೋಪದಲ್ಲಿ ಹುರುಳಿಲ್ಲವೆಂದು ಎಸ್‌ಐಟಿ ಪೊಲೀಸರು ನ್ಯಾಯಾಲಯಕ್ಕೆ ಅಂತಿಮ ವರದಿ ಸಲ್ಲಿಕೆ ಮಾಡಿದ್ದರು! ಎಸ್‌ಐಟಿ ಪೊಲೀಸರ 'ಬಿ' ರಿಪೋರ್ಟ್ ಪ್ರಶ್ನಿಸಿ ಕೋರ್ಟ್ ಮೆಟ್ಟಿಲೇರಿದ್ದ ಮಂಜುಳಾ ಮತ್ತೆ ಮರು ತನಿಖೆ ನಡೆಸುವಂತೆ ಮನವಿ ಮಾಡಿದ್ದರು. ಆರೋಪಿಗಳು ಪ್ರಭಾವಿಗಳಾಗಿರುವುದರಿಂದ ಈ ಕೇಸ್ ಬಗ್ಗೆ ಮರು ತನಿಖೆ ನಡೆಸಬೇಕು ಹಾಗೂ ಈ ಕೇಸ್ ತನಿಖೆಯನ್ನು ಸಿಬಿಐಗೆ ವಹಿಸಬೇಕೆಂದು ಕೋರಿ ಹೈಕೋರ್ಟ್ ಮೆಟ್ಟಿಲೇರಿದ್ದರು!

**ಸಿಬಿಐ ತನಿಖೆ ಶುರು...**

ಈ ಮನವಿಯನ್ನು ಪುರಸ್ಕರಿಸಿದ ಹೈಕೋರ್ಟ್, ಈ ಬಗ್ಗೆ ಸಿಬಿಐ ತನಿಖೆಗೆ ಆದೇಶ ಮಾಡಿತ್ತು. ಮೃತರ ಕುಟುಂಬಸ್ಥರು ನ್ಯಾಯಸಮ್ಮತ ತನಿಖೆ ಬಯಸುತ್ತಾರೆ.




ಆರೋಪಿಗಳು ಪ್ರಭಾವಿಯಾಗಿರುವುದರಿಂದ, ತನಿಖೆಯ ಮೇಲೂ ಪ್ರಭಾವ ಬೀರಿರಬಹುದೆಂದು ಅರ್ಜಿದಾರೆ ಮಂಜುಳಾ ಆರೋಪ ಮಾಡಿದ್ದರು. ಬಿ ರಿಪೋರ್ಟ್ ಸಲ್ಲಿಸಿರುವುದರಿಂದ ಮತ್ತೊಂದು ಎಸ್‌ಐಟಿ ತನಿಖೆ ಅವಶ್ಯಕತೆ ಇಲ್ಲ. ಅನಂತರ ಸಿಬಿಐ ಈ ಪ್ರಕರಣದ ತನಿಖೆಯನ್ನು ಪ್ರಾರಂಭಿಸಿತ್ತು.

ಕಿಡ್ನಾಪ್ ಮಾಡಿ ಆತ್ಮಹತ್ಯೆ ಎಂಬ ಭಾವನೆ ಬರುವಂತೆ ನಂಬಿಸಿ ಕೊಲೆ ಮಾಡಿದ್ದಾರೆ ಎಂದು ಹೆಚ್‌ಎಎಲ್ ಪೊಲೀಸ್ ಠಾಣೆಗೆ ರಘುನಾಥ್ ಪತ್ನಿ ಮಂಜುಳ ದೂರು ನೀಡಿದ್ದರು. ಆರೋಪಿಗಳಾದ ಆದಿಕೇಶವಲು ಮಗ ಶ್ರೀನಿವಾಸ್, ದಾಮೋದರ್, ರಾಮಚಂದ್ರಯ್ಯ, ಪ್ರತಾಪ್ ವಿರುದ್ಧ ದೂರು ನೀಡಿದ್ದರು. ದಿನಾಂಕ 4-5-2019ರಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಶವ ಪತ್ತೆಯಾಗಿತ್ತು. ನಂತರ ನಕಲಿ ವಿಲ್ ಅನ್ನು ಉಪವಿಭಾಗಾಧಿಕಾರಿ ಕೋರ್ಟ್‌ಗೆ ಸಲ್ಲಿಕೆ ಮಾಡಿ ರಘುನಾಥ್ ಅವರ ಆಸ್ತಿ ಹೊಡೆಯಲು ಸಂಚು ಮಾಡಿದ್ದರು ಎಂದು ದೂರು ಸಲ್ಲಿಸಿದ್ದರು. ಆದರೆ, ಹೆಚ್‌ಎಎಲ್ ಪೊಲೀಸರು ಬಿ ರಿಪೋರ್ಟ್ ಸಲ್ಲಿಕೆ ಮಾಡಿದ್ದರು. ರಘುನಾಥ್ ಪತ್ನಿ ಬಿ ರಿಪೋರ್ಟ್ ಪಶ್ನಿಸಿ ಹೈಕೋರ್ಟ್ ರಿಟ್ ಅರ್ಜಿ ಸಲ್ಲಿಕೆ ಮಾಡಿದ್ರು. ರಿಟ್ ಅರ್ಜಿ ವಿಚಾರಣೆ ನಡೆಸಿ ಎಸ್‌ಐಟಿ ತನಿಖೆಗೆ ಹೈಕೋರ್ಟ್ ಆದೇಶ ಮಾಡಿತ್ತು.

ಎಸ್‌ಐಟಿ ತಂಡ ಸಹ ಕೊಲೆ ಪ್ರಕರಣದಲ್ಲಿ ಬಿ ರಿಪೋರ್ಟ್ ಸಲ್ಲಿಕೆ ಮಾಡಿತ್ತು. ಬಳಿಕ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ ಮೃತನ ಪತ್ನಿ ಮಂಜುಳ ಸಿಬಿಐ ತನಿಖೆಗೆ ಮನವಿ ಮಾಡಿದ್ದರು. ಈಗ ನಕಲಿ ವಿಲ್ ಸೃಷ್ಟಿಸಿದ ಕೇಸ್‌ನಲ್ಲಿ ಮಾತ್ರ ಮೂವರು ಆರೋಪಿಗಳನ್ನು ಬಂಧಿಸಲಾಗಿದೆ. ರಘುನಾಥ್ ಕೊಲೆ ಕೇಸ್‌ನಲ್ಲಿ ಇನ್ನೂ ಯಾರನ್ನು ಸಿಬಿಐ ಬಂಧಿಸಿಲ್ಲ.... ಮುಂದೇನಾಗುವುದೋ ಗೊತ್ತಿಲ್ಲ!

ಆದಿಕೇಶವಲು ಕರ್ನಾಟಕದಲ್ಲಿ ಪ್ರಖ್ಯಾತ ಲಿಕ್ಕರ್ ಉದ್ಯಮಿಯಾಗಿದ್ದರು. ಜೊತೆಗೆ ಆಂಧ್ರದ ಟಿಟಿಡಿ ಅಧ್ಯಕ್ಷರಾಗಿದ್ದರು. ಆಂಧ್ರದಲ್ಲಿ ಟಿಡಿಪಿ ಪಕ್ಷದಿಂದ ಚಿತ್ತೂರು ಕ್ಷೇತ್ರದಿಂದ ಒಮ್ಮೆ ಲೋಕಸಭೆಗೆ ಆಯ್ಕೆಯಾಗಿದ್ದರು. ಚಿತ್ತೂರು, ಕಡಪಾ, ಅನಂತಪುರ ಜಿಲ್ಲೆಗಳಲ್ಲಿ ಆದಿಕೇಶವಲು ನಾಯ್ಡು ರಾಜಕೀಯವಾಗಿ ಪ್ರಭಾವ ಹೊಂದಿದ್ದರು. ಆಂಧ್ರದ ಬಲಿಜ ಅಥವಾ ಕಾಪು ಸಮುದಾಯದ ಮೇಲೆ ರಾಜಕೀಯ ಹಿಡಿತ ಹೊಂದಿದ್ದರು. ಚಂದ್ರಬಾಬು ನಾಯ್ಡು ಅವರಿಗೂ ಆತ್ಮೀಯರಾಗಿದ್ದರು. ನಮ್ಮ ಕರ್ನಾಟಕದಲ್ಲಿಯೂ ಶ್ರೀಮಂತ ಉದ್ಯಮಿಯಾಗಿ ಸಾಕಷ್ಟು ಆಸ್ತಿಪಾಸ್ತಿಗಳನ್ನು ಸಂಪಾದಿಸಿದ್ದಾರೆ. ಇಲ್ಲಿನ ರಾಜಕಾರಣಿಗಳಿಗೆ ದೇಣಿಗೆ ಕೊಡುತ್ತ ಆಪ್ತರಾಗಿದ್ದರು. ಈಗ ಅವರ ಮಕ್ಕಳಾದ ಶ್ರೀನಿವಾಸ್ ಮತ್ತು ಕಲ್ಪಜಾ ನಕಲಿ ಛಾಪಾ ಕಾಗದ ಹಾಗೂ ನಕಲಿ ವಿಲ್ ಸೃಷ್ಟಿಸಿ ರಘುನಾಥ್ ಅವರ ಆಸ್ತಿ ಕಬಳಿಕೆಗೆ ಯತ್ನಿಸಿದ ಕೇಸ್‌ನಲ್ಲಿ ಸಿಬಿಐನಿಂದ ಬಂಧನಕ್ಕೊಳಗಾಗಿದ್ದಾರೆ. ಒಟ್ಟಾರೆ, ಇದೊಂದು ಹೈ ಪ್ರೊಫೈಲ್ ಪ್ರಕರಣವಾಗಿದ್ದು ದೇಶದ ಗಮನ ಸೆಳೆದಿದೆ..... ☯

# ಸೌಜನ್ಯ ಫೈಲ್ಸ್



11

ನಿರೂಪಣೆ :

**ಮೋಹನ್ ಬೋಳಂಗಡಿ**

# ನ್ಯಾಯಾಲಯದಲ್ಲಿ ವಿಚಾರಣೆ ಆರಂಭಕ್ಕೆ ಮುಹೂರ್ತ!

ಸೌಜನ್ಯ ಹತ್ಯಾ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿದ್ದ ಸಂತೋಷ್‌ರಾವ್‌ನನ್ನು ಜಾಮೀನಿನ ಮೇರೆಗೆ ಬಿಡುಗಡೆಗೊಳಿಸುವಂತಹ ಪ್ರಯತ್ನಕ್ಕೆ ಮೊದಲ ಬಾರಿ ಹಿನ್ನಡೆ ಉಂಟಾದರೂ ಸೌಜನ್ಯಪರ ಹೋರಾಟ ನಡೆಸುತ್ತಿದ್ದ ಮಹೇಶ್ ಶೆಟ್ಟಿ ತಿಮರೋಡಿ ಮತ್ತವರ ತಂಡ ತನ್ನ ಕಾರ್ಯ ಸಾಧನೆಗಾಗಿ ಪ್ರಯತ್ನ ಕೈ ಬಿಡಲಿಲ್ಲ. ಸಾಮಾನ್ಯವಾಗಿ ಹೈಕೋರ್ಟ್‌ನಲ್ಲಿ ಜಾಮೀನು ಅರ್ಜಿ ತಿರಸ್ಕೃತಗೊಂಡರೆ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಬೇಕು. ಆದರೆ ಸುಪ್ರೀಂ ಕೋರ್ಟ್‌ಗೆ ಹೋಗಲು ನ್ಯಾಯವಾದಿಗಳ ಶುಲ್ಕ ಭರಿಸುವ ಶಕ್ತಿ ಇಲ್ಲದೇ ಇದ್ದುದರಿಂದ ಮತ್ತೇ ಸ್ಥಳೀಯ ನ್ಯಾಯಾಲಯದಲ್ಲಿ ಪ್ರಯತ್ನ ಮಾಡುವಂತಹ ಯತ್ನ ಮಾಡಲಾಯಿತು. ಸಂತೋಷ್‌ರಾವ್ ಪರ ಎರಡನೇ ಬಾರಿಗೆ ವಿಚಾರಣಾ ನ್ಯಾಯಾಲಯಕ್ಕೆ ಜಾಮೀನು ಅರ್ಜಿ ಸಲ್ಲಿಸಲಾಯಿತು. ನ್ಯಾಯಾಲಯ ಯಥಾ ಪ್ರಕಾರ ಸಂತೋಷ್‌ರಾವ್ ಪರ ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು ಈ ಹಿಂದೆ ನೀಡಿದ್ದ ಕಾರಣಗಳ ಅನುಸಾರವಾಗಿ ತಿರಸ್ಕೃತಗೊಳಿಸಿತು. ಆದರೆ ಆತನ ಪರ ವಕೀಲ ಮೋಹಿತ್ ಕುಮಾರ್ ಅವರು ಮರಳಿ ಯತ್ನವ ಮಾಡು ಅಂತ ಮತ್ತೆ ರಾಜ್ಯ ಹೈಕೋರ್ಟ್‌ಗೆ ಜಾಮೀನು ಅರ್ಜಿ ಸಲ್ಲಿಸಿದರು.

ಸೌಜನ್ಯ ಅತ್ಯಾಚಾರ ಮತ್ತು ಕೊಲೆ ಪ್ರಕರಣದಲ್ಲಿ ಸಂತೋಷ್‌ರಾವ್ ಕೃತ್ಯ ಎಸಗಿದ್ದಾನೆ ಎನ್ನುವುದಕ್ಕೆ ಪ್ರತ್ಯಕ್ಷ ಸಾಕ್ಷಿಗಳಿಲ್ಲ. ಕೇವಲ ಸಾಂದರ್ಭಿಕ ಸಾಕ್ಷಿಗಳ ಆಧಾರದಲ್ಲಿ ಸಂತೋಷ್‌ರಾವ್ ಮೇಲೆ ತನಿಖಾ ಸಂಸ್ಥೆಗಳು ಆರೋಪ ಹೊರಿಸಿದೆ. ಸಂತ್ರಸ್ತ ಕುಟುಂಬದ ಸದಸ್ಯರು ಈ ಪ್ರಕರಣದಲ್ಲಿ ಸಾಕ್ಷಿದಾರರಾಗಿದ್ದರೂ ಅವರ್ಯಾರೂ ನ್ಯಾಯಾಲಯದಲ್ಲಿ ಆರಂಭವಾಗಿಲ್ಲ. ಪ್ರಕರಣ ನಡೆದು ಸುಮಾರು ನಾಲ್ಕು ವರ್ಷ ಕಳೆದಿದೆ. ಆರಂಭದಿಂದ ಆರೋಪಿಯು ನ್ಯಾಯಾಂಗ ಬಂಧನದಲ್ಲಿದ್ದಾನೆ. ಆರೋಪಿಯನ್ನು ಯಾವುದೇ ವಿಚಾರಣೆ ಇಲ್ಲದೆ ನ್ಯಾಯಾಂಗ ಬಂಧನದಲ್ಲಿ ಮುಂದುವರಿಸುವುದು ಸಹಜ ನ್ಯಾಯಕ್ಕೆ ವಿರೋಧವಾದದ್ದು. ಪ್ರಾಸಿಕ್ಯೂಶನ್ ಪರವಾಗಿ ಆರೋಪಿಯು ಸಾಕ್ಷ್ಯ ನಾಶ ಮತ್ತು ಸಾಕ್ಷಿಗಳಿಗೆ ಬೆದರಿಕೆ ಒಡ್ಡಬಹುದು ಎಂದು ವಾದ ಮಂಡಿಸಿರುವುದರಿಂದ ಆ ಬಗ್ಗೆಯೂ ನ್ಯಾಯಾಲಯವು ಕ್ರಮ ಕೈ ಗೊಳ್ಳಬೇಕಾಗುತ್ತದೆ. ಅತ್ಯಾಚಾರ ಕೊಲೆಯಂತಹ ಗಂಭೀರ ಪ್ರಕರಣಗಳಲ್ಲಿ ಆರೋಪಿಗೆ ಜಾಮೀನು ನೀಡುವ ಸಂದರ್ಭದಲ್ಲಿ ನ್ಯಾಯಾಲಯವು ವಿವೇಚನೆಯನ್ನು ಬಳಸಬೇಕಾಗುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿತು. ಅಲ್ಲದೇ ಪ್ರಕರಣದ ವಿಚಾರಣೆಯನ್ನು ಆದಷ್ಟು ಶೀಘ್ರವಾಗಿ ಆರಂಭಿಸಿ ಅಂತಿಮ ತೀರ್ಪು ನೀಡುವಂತೆ ವಿಚಾರಣಾ ನ್ಯಾಯಾಲಯಕ್ಕೆ ಸೂಚನೆ ನೀಡಿತ್ತು. ಇದೇ ಸಂದರ್ಭದಲ್ಲಿ ವಿಚಾರಣೆ ಆರಂಭವಾಗಿ ಆರಂಭಿಕ ಪ್ರಮುಖ 16 ಮಂದಿ



ಸಂತೋಷ್ ರಾವ್

ತನಿಖೆಯ ಸಂದರ್ಭದಲ್ಲಿ ಸಂತೋಷ್‌ರಾವ್‌ನನ್ನು ಗುರುತಿಸಿ ಸಾಕ್ಷಿ ಹೇಳಿಕೆ ದಾಖಲಿಸಿಲ್ಲ. ಸಂತೋಷ್‌ರಾವ್ ಆ ಸ್ಥಳದಲ್ಲಿ ಇದ್ದ ಎನ್ನುವುದಕ್ಕೆ ಇರುವಂತಹ ಏಕೈಕ ಸಾಕ್ಷಿ ಹರೀಶ್ ಮಡಿವಾಳ. ಬೇರೆ ಪೂರಕ ಸಾಕ್ಷಿಗಳು ಇಲ್ಲ. ಕೃತ್ಯ ನಡೆದ ಸ್ಥಳದಿಂದ ಸುಮಾರು 5ಕಿ.ಮೀ. ದೂರದಲ್ಲಿ ಅದೂ ಸಾವಿರಾರು ಭಕ್ತಾದಿಗಳು ಇದ್ದಂತಹ ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ಸಂತೋಷ್‌ರಾವ್‌ನನ್ನು ಸ್ಥಳೀಯರು ಹಿಡಿದು ಪೊಲೀಸರಿಗೆ ಒಪ್ಪಿಸಿರುವುದು ತದನಂತರ ಪೊಲೀಸರು ಆತನೇ ಸೌಜನ್ಯ ಪ್ರಕರಣದ ಆರೋಪಿ ಎಂದು ನಿಶ್ಚಯಿಸಿಕೊಂಡು ಬಂಧಿಸಿರುವುದು ಆತನೇ ಆರೋಪಿ ಎನ್ನುವುದಕ್ಕೆ ಯಾವುದೇ ಪ್ರಬಲ ಸಾಕ್ಷ್ಯಗಳಿಲ್ಲ ಎಂದು ಆತನ ಪರ ವಕೀಲ ಮೋಹಿತ್ ಕುಮಾರ್ ವಾದ ಮಂಡಿಸಿದ್ದ ಸಂದರ್ಭದಲ್ಲಿ ಅದಕ್ಕೆ ಪ್ರತಿಯಾಗಿ ಸಿಬಿಐ ಪರ ವಕೀಲರು ಪ್ರಬಲ ಆಕ್ಷೇಪಣೆ ಸಲ್ಲಿಸಲಿಲ್ಲವಾದರೂ ಆರೋಪಿಯು ಸಾಕ್ಷ್ಯ ನಾಶ ಮಾಡುವ ಸಾಧ್ಯತೆ ಇದೆ ಮತ್ತು ಸಾಕ್ಷಿದಾರರಿಗೆ ಬೆದರಿಕೆ ಒಡ್ಡಬಹುದು ಎಂಬ ಭೀತಿಯನ್ನು ಸಹಜ ರೀತಿಯಲ್ಲಿ ವ್ಯಕ್ತ ಪಡಿಸಿದ್ದರು. ವಾದ ಪ್ರತಿವಾದಗಳನ್ನು ಆಲಿಸಿದ ಮಾನ್ಯ ಹೈಕೋರ್ಟ್‌ನ ಏಕ ಸದಸ್ಯ ಪೀಠವು ಪ್ರಕರಣದ ವಿಚಾರಣೆಯು ವಿಚಾರಣಾ ಸಾಕ್ಷಿದಾರರ ವಿಚಾರಣೆ ಮುಗಿದ ಬಳಿಕ ಆರೋಪಿಗೆ ಜಾಮೀನು ಕೋರುವ ಅವಕಾಶವನ್ನು ಮುಕ್ತವಾಗಿರಿಸಿ ಮೇಲ್ಮನವಿಯನ್ನು ಇತ್ಯರ್ಥಪಡಿಸಿತು.



ಮಹೇಶ್ ಶೆಟ್ಟಿ ತಿಮರೋಡಿ

ರಾಜ್ಯ ಹೈಕೋರ್ಟ್ ನೀಡಿದಂತಹ ಈ ತೀರ್ಪಿನ ಅನ್ವಯ ಸಂತೋಷ್‌ರಾವ್ ಪರ ವಕೀಲ ಮೋಹಿತ್ ಕುಮಾರ್ ಅವರು ಸಿಬಿಐನ ವಿಶೇಷ ನ್ಯಾಯಾಲಯಕ್ಕೆ ರಾಜ್ಯ ಹೈಕೋರ್ಟ್‌ನ ತೀರ್ಪಿನ ವಿವರಣೆಯನ್ನು ನೀಡಿ ಸೌಜನ್ಯ ಕೊಲೆ ಪ್ರಕರಣದ ವಿಚಾರಣೆಯನ್ನು ಆದಷ್ಟು ಶೀಘ್ರ ಆರಂಭಿಸಬೇಕು ಮತ್ತು ಆರೋಪಿಯ ಮೇಲೆ ದೋಷಾರೋಪಣೆಯನ್ನು ಹೊರಿಸಬೇಕು ಎಂದು ಕೋರಿಕೊಂಡರು. ಅದರಂತೆ ನ್ಯಾಯಾಲಯವು ದೋಷಾರೋಪಣೆಗೆ ದಿನಾಂಕ ನಿಗದಿಪಡಿಸಿತು. ಆ ದಿನದಂದು ನ್ಯಾಯಾಲಯಕ್ಕೆ ಪರಪ್ಪನ ಅಗ್ರಹಾರ ಜೈಲಿನಲ್ಲಿದ್ದ ಸಂತೋಷ್‌ರಾವ್‌ನನ್ನು ಹಾಜರುಪಡಿಸಲಾಯಿತು. ನ್ಯಾಯಾಧೀಶರು ಆತನ ಮೇಲೆ ತನಿಖಾ ಸಂಸ್ಥೆಗಳು ಹೊರಿಸಿದಂತಹ ಆರೋಪಗಳನ್ನು ಓದಿ ಹೇಳಿ ಅಭಿಪ್ರಾಯ ಕೇಳಿದರು. ಸಹಜವಾಗಿಯೇ ಆರೋಪಿ ಸಂತೋಷ್‌ರಾವ್ ತನ್ನ ಮೇಲೆ ತನಿಖಾ ಸಂಸ್ಥೆಗಳು ಹೊರಿಸಿದಂತಹ ಆರೋಪಗಳನ್ನು ನಿರಾಕರಿಸಿ ವಿಚಾರಣೆ ನಡೆಸಲು ಕೋರಿಕೊಂಡ. ಇಲ್ಲಿಗೆ ಪ್ರಕರಣದ ವಿಚಾರಣೆಯ ಪ್ರಾರಂಭಿಕ ಹಂತ ಮುಗಿಯಿತು. ನಂತರ ವಿಚಾರಣೆಯ ಸಂದರ್ಭದಲ್ಲಿ ಆರೋಪ ಪಟ್ಟಿಯಲ್ಲಿ ದಾಖಲಿಸಲಾಗಿರುವ ಸಾಕ್ಷಿಗಳ ಪೈಕಿ ಎಷ್ಟು ಮಂದಿ ಸಾಕ್ಷಿಗಳನ್ನು ವಿಚಾರಣೆಗೆ ಕರೆಯಬೇಕು ಎಂದು ನಿರ್ಧರಿಸುವಂತಹ ಸಮಾಲೋಚನೆಗೆ ದಿನಾಂಕ ನಿಗದಿಪಡಿಸಲಾಯಿತು. ಆ ದಿನದಂದು ನ್ಯಾಯಾಧೀಶರ ಉಪಸ್ಥಿತಿಯಲ್ಲಿ ಪ್ರಾಸಿಕ್ಯೂಶನ್ ಪರ ವಕೀಲ ಅಂದರೆ ಸಿಬಿಐಯನ್ನು ಪ್ರತಿನಿಧಿಸುತ್ತಿದ್ದ ಶಿವಾನಂದ ಪೆರ್ಲ, ಆರೋಪಿ ಸಂತೋಷ್‌ರಾವ್‌ನನ್ನು ಪ್ರತಿನಿಧಿಸುತ್ತಿದ್ದ ಮೋಹಿತ್ ಕುಮಾರ್ ಅವರು ಕೂಲಂಕಷವಾಗಿ ಚರ್ಚೆ ನಡೆಸಿದರು. ಸಿಬಿಐ ಪಟ್ಟಿ ಮಾಡಿರುವಂತಹ ಸಾಕ್ಷಿದಾರರ ಪೈಕಿ ಒಟ್ಟು 67 ಮಂದಿಯನ್ನು ವಿಚಾರಣೆಗೆ ಗುರಿಪಡಿಸಲು ನಿರ್ಧರಿಸಲಾಯಿತು. ಮಾನ್ಯ ಹೈಕೋರ್ಟ್ ನೀಡಿರುವಂತಹ ಸೂಚನೆಯನ್ವಯ ಈ 67 ಸಾಕ್ಷಿದಾರರ ಪೈಕಿ ಪ್ರಮುಖವಾದಂತಹ 16 ಸಾಕ್ಷಿದಾರರನ್ನು ವಿಚಾರಣೆಗೆ ಗುರಿಪಡಿಸಲು ನಿರ್ಧರಿಸಲಾಯಿತು. 16 ಸಾಕ್ಷಿದಾರರ ವಿಚಾರಣೆಯನ್ನು ನಿರಂತರವಾಗಿ ನಡೆಸಲು ಎರಡು ದಿನ ನಿಗದಿ ಪಡಿಸಿ ಅವರಿಗೆ ಸಮನ್ಸ್ ನೀಡಲಾಯಿತು. ಅಲ್ಲಿಗೆ ಸೌಜನ್ಯ ಪ್ರಕರಣದ ವಿಚಾರಣೆ ಸಿಬಿಐ ನ್ಯಾಯಾಲಯದಲ್ಲಿ ಆರಂಭಗೊಳ್ಳುವುದು ಖಚಿತವಾಯಿತು. ಸಿಬಿಐ ನ್ಯಾಯಾಲಯವು ಹೊರಡಿಸಿದಂತಹ ಸಾಕ್ಷಿ ವಿಚಾರಣೆಯ ಸಮನ್ಸ್ ಸಂಬಂಧಿತ ಸಾಕ್ಷಿದಾರರಿಗೆ ಸ್ಥಳೀಯ ಪೊಲೀಸರ ಮೂಲಕ ತಲುಪಿತು. ಅದುವರೆಗೆ ಯಾರ ಗಮನಕ್ಕೂ ಬಾರದಿದ್ದ ಸೌಜನ್ಯ ಪ್ರಕರಣದ ವಿಚಾರಣೆಯ ಸುದ್ದಿ ತಿಮರೋಡಿ ಬಳಗಕ್ಕೆ ಸಂತೋಷ್‌ರಾವ್ ವಕೀಲರ ಮೂಲಕ ತಿಳಿದಿತ್ತು. ಸಾಕ್ಷಿದಾರರು ನ್ಯಾಯಾಲಯದಲ್ಲಿ ಯಾವ ರೀತಿಯಲ್ಲಿ ಹೇಳಿಕೆಯನ್ನು ದಾಖಲಿಸಬೇಕು ಮತ್ತು ಪಾಟಿ ಸವಾಲಿನ ವೇಳೆಗೆ ಹೇಗೆ ಪ್ರಶ್ನೆಗಳಿಗೆ ಉತ್ತರಿಸಬೇಕು ಎಂಬ ಬಗ್ಗೆ ತಿಳುವಳಿಕೆ ನೀಡಲು ಮಹೇಶ್ ಶೆಟ್ಟಿ ತಿಮರೋಡಿ ತೀರ್ಮಾನಿಸಿದ್ದರು. ಸಾಕ್ಷಿದಾರರಿಗೆ ಸಮನ್ಸ್ ಸಿಕ್ಕಿದ ಬಳಿಕ ಅವರೆಲ್ಲರನ್ನು ಪ್ರತ್ಯಪ್ರತ್ಯೇಕವಾಗಿ ಸಂಪರ್ಕಿಸಿ ಆರೋಪಿ ಪರ ವಕೀಲರೊಂದಿಗೆ ಮಾತುಕತೆ ನಡೆಸಲಾಯಿತು. ಎಲ್ಲಾ ಸಾಕ್ಷಿದಾರರು ಆರೋಪಿ ಪರ ವಕೀಲರು ನೀಡಿದ ತಿಳುವಳಿಕೆಯ ಪ್ರಕಾರ ನ್ಯಾಯಾಲಯದಲ್ಲಿ ಸಾಕ್ಷ್ಯ ನುಡಿಯುವ ಭರವಸೆ ನೀಡಿದರು. ಆದರೆ ಆ ರೀತಿಯಾಗಿ ಸಾಕ್ಷ್ಯವನ್ನು ನುಡಿದರೆ ಆರೋಪಿಯನ್ನು ನಿಸ್ಸಂಶಯವಾಗಿ ನ್ಯಾಯಾಲಯ ದೋಷಮುಕ್ತಗೊಳಿಸಲು ಸಾಧ್ಯವಿಲ್ಲ. ಬದಲಾಗಿ ಈ ಪ್ರಕರಣದಲ್ಲಿ ಈ ಹಿಂದೆ ಸಿಓಡಿ ವಿಚಾರಣೆಯ ಸಂದರ್ಭದಲ್ಲಿ ಗುರುತಿಸಿದ್ದಂತಹ ಮೂವರು ಯುವಕರ ಹೆಸರುಗಳನ್ನು ಸಾಕ್ಷಿ ವಿಚಾರಣೆಯ ಸಂದರ್ಭದಲ್ಲಿ ನ್ಯಾಯಾಲಯದ ಗಮನಕ್ಕೆ ತರಬೇಕು ಮತ್ತು ಅವರನ್ನು ಪ್ರಾಸಿಕ್ಯೂಶನ್‌ಗೆ ಒಳಪಡಿಸಲು ಒತ್ತಡ ಹೇರಬೇಕು ಎಂದು ನಿರ್ಧರಿಸಿ ಸಂಬಂಧಪಟ್ಟ ಸಾಕ್ಷಿದಾರರಿಗೆ ಸೂಚನೆ ನೀಡಲಾಯಿತು. ಅವರೆಲ್ಲರೂ ಅದೇ ರೀತಿ ಹೇಳಿಕೆ ನೀಡುವಂತಹ ಭರವಸೆ ನೀಡಿದ್ದರು. ಅವರೆಲ್ಲರೂ ಸಂತ್ರಸ್ಥೆ ಸೌಜನ್ಯಳ ಮನೆಯವರು ಮತ್ತು ನಿಕಟ ಬಂಧುಗಳೇ ಆಗಿದ್ದರು.

ಮುಂದುವರಿಯುವುದು.....

---

7 ☞ ಅವರು ಸ್ಥಳಕ್ಕೆ ಬೆಂಬಲಿಗರೊಂದಿಗೆ ಬಂದರು. ಸ್ಥಳದಲ್ಲಿದ್ದ ಎಸ್‌ಐಯವರೊಂದಿಗೆ ಮಾತುಕತೆ ನಡೆಸಿದರು. ಗ್ರಾಮಸ್ಥರಲ್ಲಿ ಕೋಳಿ ಅಂಕ ನಡೆಸುವಂತೆ ಸೂಚನೆ ನೀಡಿದರು. ಇದು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಯಿತು. ವಿಷಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಗಮನಕ್ಕೆ ಬಂತು. ತಕ್ಷಣ ಅವರು ಕೆಎಸ್‌ಆರ್‌ಪಿ ಸಿಬ್ಬಂದಿಗಳನ್ನು ಕಳುಹಿಸಿದರು. ಸಂಜೆ 5.00ಗಂಟೆಯ ವೇಳೆಗೆ ಕೋಳಿ ಅಂಕವನ್ನು ಸ್ಥಗಿತಗೊಳಿಸಿ ಶಾಸಕ ರೈಯವರು ತೆರಳಿದಂತಹ ಸಂದರ್ಭದಲ್ಲಿ ಹೆಚ್ಚುವರಿ ಪೊಲೀಸ್ ಬಲದೊಂದಿಗೆ ಸ್ಥಳಕ್ಕೆ ಬಂದ ವಿಟ್ಲ ಪೊಲೀಸರು 16 ಮಂದಿಯನ್ನು ವಶಕ್ಕೆ ತೆಗೆದುಕೊಂಡು ಕೆಲವು ಕೋಳಿಗಳನ್ನು, ಕೋಳಿಯ ಕಾಲಿಗೆ ಕಟ್ಟುವಂತಹ ಕತ್ತಿಗಳನ್ನು ಸ್ವಾಧೀನಪಡಿಸಿಕೊಂಡರು. ಪೊಲೀಸರು ಅಶೋಕ್ ಕುಮಾರ್ ರೈ ಸಹಿತ 17 ಮಂದಿಯ ಮೇಲೆ ಕೇಸು ದಾಖಲಿಸಿದರು.



ಮಾಹಿತಿ ತಿಳಿದು ವಿಧಾನಪರಿಷತ್ ಸದಸ್ಯ ಕಿಶೋರ್ ಕುಮಾರ್ ಪುತ್ತೂರು ಠಾಣೆಗೆ ಆಗಮಿಸಿ ಪೊಲೀಸ್ ಅಧಿ ಕಾರಿಗಳೊಂದಿಗೆ ಮಾತುಕತೆ ನಡೆಸಿ ಬಂಧಿತರನ್ನು ಬಿಡುಗಡೆಗೊಳಿಸಿದರು. ಈ ವಿಚಾರ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿ ಚರ್ಚೆ ಹುಟ್ಟು ಹಾಕಿತ್ತು. ಶಾಸಕ ರೈಯವರ ಆ ಸಂದರ್ಭದ ನಡವಳಿಕೆಗೆ ಸಾರ್ವಜನಿಕರು ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದರು. ಘಟನೆ ರಾಜಕೀಯ ತಿರುವು ಪಡೆಯುತ್ತಿದ್ದಂತೆಯೇ ಬಿಜೆಪಿಯ ಮಾಜಿ ಶಾಸಕ ಸಂಜೀವ ಮಠಂದೂರು ಜಿಲ್ಲಾ ಬಿಜೆಪಿ ಅಧ್ಯಕ್ಷ ಸತೀಶ್ ಕುಂಪಲ ನೇತೃತ್ವದಲ್ಲಿ ಬಿಜೆಪಿಯ ತಂಡವೊಂದು ಕೇಪು ಉಳ್ಳಾಲ್ತಿ ದೈವಸ್ಥಾನಕ್ಕೆ ಭೇಟಿ ನೀಡಿದ್ದು, ಅಲ್ಲಿದ್ದ ಸ್ಥಳೀಯರೊಂದಿಗೆ ಮಾತುಕತೆ ನಡೆಸಿ ಅವರಿಗೆ ಬೆಂಬಲ ಸೂಚಿಸಿ ಎರಡನೇ ದಿನದ ಕೋಳಿ ಅಂಕ ನಡೆಸುವಲ್ಲಿ ಯಶಸ್ವಿಯಾಯಿತು. ಸಂಜೆಯ ವೇಳೆಗೆ ಪೊಲೀಸರು ಮತ್ತೇ ಕೋಳಿ ಅಂಕಕ್ಕೆ ಧಾಳಿ ನಡೆಸಿ ಮಾಜಿ ಶಾಸಕರ ಸಹಿತ 27 ಮಂದಿಯನ್ನು ಬಂಧಿಸಿ ಕೇಸು ದಾಖಲಿಸಿಕೊಂಡರು. ಮತ್ತು ಕೋಳಿಗಳನ್ನು ವಶಪಡಿಸಿಕೊಂಡಿದ್ದಾರೆ.

ಮೂರನೇ ದಿನಕ್ಕೆ ಅಂದರೆ ಡಿ.22ರಂದು ಮತ್ತೇ ಕೋಳಿ ಅಂಕ ನಡೆಯುವ ಸಾಧ್ಯತೆ ಇರುವುದರಿಂದ ಪೊಲೀಸ್ ಗಢಣವೇ ಉಳ್ಳಾಲ್ತಿ ದೈವಸ್ಥಾನದ ಜಾತ್ರಾ ಗದ್ದೆಯಲ್ಲಿ ಬೀಡು ಬಿಟ್ಟಿದೆ. ಒಟ್ಟಾರೆಯಾಗಿ ಸಾಂಪ್ರದಾಯಿಕವಾಗಿ ನಡೆಯುತ್ತಿದ್ದಂತಹ ಕೋಳಿ ಅಂಕ ವಿವಾದದ ಗೂಡಾಗಿದೆ.

# ಜಾಮೀನು ರದ್ದಾದಾಗ ದರ್ಶನ್ ಹೇಳಿದ್ದು ಅದೊಂದೇ ಮಾತು...

ದರ್ಶನ್ ಸ್ಪೆಷಲ್!

ರೇಣುಕಾಸ್ವಾಮಿ ಕೊಲೆ ಕೇಸ್ ಆರೋಪದಲ್ಲಿ ಬಂಧನದಲ್ಲಿರೋ ನಟ ದರ್ಶನ್ ಅವರಿಗೆ ಮೊದಲಿಗೆ ಜಾಮೀನು ಸಿಕ್ಕಿತ್ತು. ಆರೋಗ್ಯ ಸಮಸ್ಯೆಯಿಂದ ಕೆಲಕಾಲ ವಿಶ್ರಾಂತಿ ಪಡೆದು, ಬಳಿಕ 'ದಿ ಡೆವಿಲ್' ಸಿನಿಮಾ ಶೂಟಿಂಗ್ ಮುಗಿಸಿಕೊಟ್ಟಿದ್ದರು. ಇನ್ನೇನು ಸಿನಿಮಾ ರಿಲೀಸ್ ಆಗುವ ಹೊತ್ತಿಗೆ ದರ್ಶನ್ ಅವರ ಜಾಮೀನನ್ನು ಸುಪ್ರೀಂಕೋರ್ಟ್ ರದ್ದು ಮಾಡಿದ್ದು, ದರ್ಶನ್ ಮತ್ತೆ ಜೈಲು ಸೇರಿದ್ದಾರೆ. ತಮ್ಮ ಜಾಮೀನು ರದ್ದಾದ ವಿಷಯವನ್ನು ತಿಳಿದು ಪತ್ನಿ ವಿಜಯಲಕ್ಷ್ಮಿ ಅವರಿಗೆ ದರ್ಶನ್ ಆ ಒಂದು ಮಾತು ಹೇಳಿದ್ದರು! ಅದೇನು ಎಂದು ವಿಜಯಲಕ್ಷ್ಮಿ ಇತ್ತೀಚಿನ ಸಂದರ್ಶನವೊಂದರಲ್ಲಿ ರಿವೀಲ್ ಮಾಡಿದ್ದಾರೆ.



'ಡಿ ಕಂಪನಿ' ಯುಟ್ಯೂಬ್ ಚಾನಲ್‌ಗೆ ವಿಜಯಲಕ್ಷ್ಮಿ ಮೊನ್ನೆ ಮೊನ್ನೆ ಸಂದರ್ಶನ ನೀಡಿದ್ದಾರೆ. ಇದರಲ್ಲಿ ಡೆವಿಲ್ ಸಿನಿಮಾ, ದರ್ಶನ್ ಅವರ ಪ್ರಕರಣ, ಡಿಬಾಸ್ ಅಭಿಮಾನಿಗಳ ಮೇಲಿನ ಆರೋಪಗಳು ಸೇರಿದಂತೆ ಹಲವು ವಿಚಾರಗಳನ್ನು ಅವರು ಹಂಚಿಕೊಂಡಿದ್ದಾರೆ. ಬಹಳ ಮುಖ್ಯವಾಗಿ, ಸುಪ್ರೀಂಕೋರ್ಟ್‌ನಲ್ಲಿ ಜಾಮೀನು ರದ್ದಾದಾಗ ದರ್ಶನ್ ಪ್ರತಿಕ್ರಿಯೆ ಹೇಗಿತ್ತು ಎನ್ನುವುದನ್ನು ವಿವರಿಸಿದ್ದಾರೆ.



'ದರ್ಶನ್‌ಗೆ ಜಾಮೀನು ರದ್ದಾಗುತ್ತೆ ಎನ್ನುವ ಅಂದಾಜು ಕೂಡ ಇರಲಿಲ್ಲ. ಆ ದಿನ ದರ್ಶನ್ ಊರಲ್ಲಿ ಇರಲಿಲ್ಲ, ಕುದುರೆ ವಿಚಾರವಾಗಿ ತಮಿಳುನಾಡಿಗೆ ಹೋಗಿದ್ರು. ನಾನು ಸುಪ್ರೀಂಕೋರ್ಟ್‌ನಲ್ಲಿ ತೀರ್ಪು ನೀಡುವ ದಿನ ವಿಡಿಯೋ ಕಾನ್ಫರೆನ್ಸ್ ಮೂಲಕ ಭಾಗಿಯಾಗಿದ್ದೆ. ದರ್ಶನ್‌ಗೆ ಜಾಮೀನು ರದ್ದು ಎಂದು ತೀರ್ಪು ಬಂದ ತಕ್ಷಣ ತುಂಬಾ ಬೇಜಾರಾಯ್ತು. ಆ ವಿಚಾರವನ್ನು ದರ್ಶನ್‌ಗೆ ಹೇಗೆ ತಿಳಿಸೋದು ಅಂತ ಒದ್ದಾಡಿದೆ. ತೀರ್ಪು ಬಂದ 15 ನಿಮಿಷಗಳ ಕಾಲ ನಾನು ದರ್ಶನ್‌ಗೆ ಫೋನ್ ಮಾಡಲೇ ಇಲ್ಲ' ಎಂದಿದ್ದಾರೆ ವಿಜಯಲಕ್ಷ್ಮಿ.



'ಕೈಯಲ್ಲಿ ಫೋನ್ ಹಿಡಿದುಕೊಂಡು, ಈ ವಿಷಯ ಹೇಗೆ ಹೇಳೋದು ಅಂತ ಯೋಚನೆ ಮಾಡ್ತಿದ್ದೆ. ದರ್ಶನ್ ಕೂಡ ಅದೇ ಟೆನ್ಷನ್‌ನಲ್ಲಿ ಇದ್ದರು. ಈ ಕೇಸ್ ಸುಪ್ರೀಂಕೋರ್ಟ್‌ಗೆ ಬಂದಾಗಿನಿಂದಲೂ ಅವರು ಈ ಯೋಚನೆಯಲ್ಲೇ ಇರುತ್ತಿದ್ರು. ಅವರು ಅದನ್ನ ಹೊರಗೆ ಹೇಳಿಕೊಳ್ಳುತ್ತಿರಲಿಲ್ಲ. ಆದರೆ ಅದು ನನಗೆ ಕಾಣುತ್ತಿತ್ತು. ತುಂಬಾ ಸಲ ಅವರು ಸುಮ್ಮನೆ ಆಗಿಬಿಡುತ್ತಿದ್ರು. ಯಾರೊಂದಿಗೂ ಮಾತನಾಡುತ್ತಿರಲಿಲ್ಲ. ರೂಮಲ್ಲಿ ಒಬ್ಬರೇ ಇರುತ್ತಿದ್ರು. ನಾವು ಬೇಕಂತಲೇ ಹೋಗಿ ಕಾಮಿಡಿ ಎಲ್ಲ ಮಾಡ್ತಿದ್ವಿ. ಅದಕ್ಕೆ ದರ್ಶನ್ ರಿಯಾಕ್ಟ್ ಮಾಡುತ್ತಿರಲಿಲ್ಲ. ತುಂಬಾ ಸೈಲೆಂಟ್ ಆಗಿಬಿಡುತ್ತಿದ್ರು. ಕೊನೆಗೆ ದರ್ಶನ್‌ಗೆ ಇನ್ಯಾರೋ ಫೋನ್ ಮಾಡಿ ಬೇಲ್ ವಿಚಾರ ಹೇಳುವ ಬದಲು ನಾನೇ ಹೇಳುವುದು ಒಳ್ಳೆಯದು ಅಂತ ಫೋನ್ ಮಾಡಿದೆ. ಏನಾಯ್ತು ವಿಜಿ ಅಂದ್ರು? ಆಗ ನಾನು ಬೇಲ್ ಕ್ಯಾನ್ಸಲ್ ಆಯ್ತು ಅಂದೆ. ಆಗ ಅವರ ಬಾಯಿಂದ ಒಂದು ಪದ ಬರಲಿಲ್ಲ. ಒಂದು ನಿಮಿಷ ಮೌನವಾಗಿದ್ರು. ನಂತರ ಹೌದಾ, ಆಯ್ತು ಬಿಡು, ಬ್ಯಾಗ್ ರೆಡಿ ಮಾಡು ಬರ್ತಾ ಇದ್ದೀನಿ ಅಂದ್ರು. ನೀನು ಹುಷಾರು, ಸ್ಟ್ರಾಂಗ್ ಆಗಿ ಇರು, ಅಳುತ್ತಾ ಕೂರಬೇಡ, ವಿನೀಶ್‌ನ ಚೆನ್ನಾಗಿ ನೋಡ್ಕೋ, ನಾನು ಬರೋಕೆ ಮೂರು ಗಂಟೆ ಸಮಯ ಹಿಡಿಯುತ್ತೆ. ಅಲ್ಲಿಗೆ ಬಂದು ತಕ್ಷಣ ಹೊರಡುತ್ತೀನಿ, ಮನೇದು ಏನೇನಿದೆಯೋ ನೋಡಿಕೋ, ನೀನು ಹುಷಾರು ಅಂದ್ರು…' ಎಂದು ಆ ದಿನ ನಡೆದಿದ್ದನ್ನು ವಿಜಯಲಕ್ಷ್ಮಿ ಬಿಚ್ಚಿಟ್ಟಿದ್ದಾರೆ. ☯



## ಪವಿತ್ರ ಪಾಪಿಯ ಭೇಟಿ ನಿರಾಕರಿಸಿದ ದಾಸ!

ಚಿತ್ರದುರ್ಗ ರೇಣುಕಾಸ್ವಾಮಿ ಪ್ರಕರಣದಲ್ಲಿ ನಟ ದರ್ಶನ್ ಹಾಗೂ ಗೆಳತಿ ಪವಿತ್ರ ಗೌಡ ಪರಪ್ಪನ ಅಗ್ರಹಾರ ಜೈಲಿನಲ್ಲಿದ್ದಾರೆ. ಬೆಂಗಳೂರಿನ 57ನೇ ಸಿಸಿಹೆಚ್ ಕೋರ್ಟ್‌ನಲ್ಲಿ ಟ್ರಯಲ್ ಶುರುವಾಗಿದ್ದು, ಆರೋಪಿಗಳಿಗೆ ಭಯ ಶುರುವಾಗಿದೆ. ದರ್ಶನ್ ಮತ್ತು ಪವಿತ್ರ ಗೌಡ ಒಂದೇ ಜೈಲಿನಲ್ಲಿದ್ದಾರೆ. ಹೀಗಿದ್ದೂ, ಪರಸ್ಪರ ಭೇಟಿ ಸಾಧ್ಯವಾಗುತ್ತಿಲ್ಲ. ಕಾನೂನಿನಲ್ಲಿರುವ ಅವಕಾಶ ಪಡೆದುಕೊಂಡು ಪವಿತ್ರ ಗೌಡ, ದರ್ಶನ್ ಭೇಟಿಗೆ ಪ್ರಯತ್ನಿಸುತ್ತಿದ್ದಾರೆ. ಆದರೆ ಅದಕ್ಕೆ ದರ್ಶನ್ ಸೊಪ್ಪು ಹಾಕಿಲ್ಲ ಎಂಬ ಮಾಹಿತಿ ಸಿಕ್ಕಿದೆ. ಇದರ ಬೆನ್ನಲ್ಲೇ ಇಬ್ಬರ ಮಧ್ಯೆ ಮನಸ್ತಾಪ ಉಂಟಾಗಿದೆ ಎಂಬ ಗುಲ್ಲೆದ್ದಿದೆ.

ಜೈಲು ಡಿಜಿಪಿ ಅಲೋಕ್‌ಕುಮಾರ್ ಇತ್ತೀಚೆಗೆ ಪರಪ್ಪನ ಅಗ್ರಹಾರ ಜೈಲಿಗೆ ಭೇಟಿ ನೀಡಿದ್ದ ವೇಳೆ ದರ್ಶನ್ ಭೇಟಿಗೆ ಪವಿತ್ರಾಗೌಡ ಅವಕಾಶ ಕೇಳಿದ್ದಾಳೆ. ಅದಕ್ಕೆ ಅಲೋಕ್ ಕುಮಾರ್ ಕಾನೂನಿನಲ್ಲಿ ಅವಕಾಶ ನೋಡಿಕೊಂಡು ಪರಿಶೀಲಿಸುವುದಾಗಿ ತಿಳಿಸಿದ್ದಾರೆ. ಅದನ್ನೇ ನೆಪವಾಗಿಟ್ಟುಕೊಂಡು ಮರಳಿ ಯತ್ನವ ಮಾಡು ಅನ್ನುವಂತೆ ಪವಿತ್ರಾಗೌಡ ಪ್ರಯತ್ನಿಸಿದ್ದಾಳೆ. ಆದರೆ ಪವಿತ್ರಾಗೌಡ ಆಸೆಗೆ ದರ್ಶನ್ ನಯವಾಗಿಯೇ ನಿರಾಸೆಯ ಗಿಫ್ಟ್ ನೀಡಿದ್ದಾರೆ.

ತನ್ನನ್ನು ನೋಡಲು ಬಂದಿದ್ದ ಹಿತೈಷಿಗಳ ಬಳಿ ಪವಿತ್ರ ಗೌಡ ಕಾನೂನು ಹೋರಾಟದ ಬಗ್ಗೆ ಮಾತುಕತೆ ನಡೆಸಿದ್ದಾರೆ. ಕೇಸ್ ಸಂಬಂಧ ಟ್ರಯಲ್ ಶುರುವಾಗಿದೆ, ಮಾತಾಡಬೇಕು ಎಂದು ದರ್ಶನ್‌ಗೆ ತಿಳಿಸಿದ್ದಾಳೆ. ಆದರೆ ಪವಿತ್ರಾಗೌಡ ಭೇಟಿಗೆ ದರ್ಶನ್ ಒಪ್ಪಿಲ್ಲ… ☯

## ಜೈಲಿನಲ್ಲಿ ಪವಿತ್ರಾಗೌಡಗೆ ಟಿವಿ!

ರಾಜ್ಯಾದ್ಯಂತ ತೀವ್ರ ಚರ್ಚೆಗೆ ಗ್ರಾಸವಾಗಿರುವ ರೇಣುಕಾಸ್ವಾಮಿ ಕೊಲೆ ಪ್ರಕರಣವು ದಿನಕ್ಕೊಂದು ತಿರುವು ಪಡೆದುಕೊಳ್ಳುತ್ತಿದೆ. ಈ ಪ್ರಕರಣದ ಪ್ರಮುಖ ಆರೋಪಿ ಪವಿತ್ರಾಗೌಡ ಅವರಿಗೆ ಜೈಲಿನಲ್ಲಿ ಟಿವಿ ಸೌಲಭ್ಯ ಒದಗಿಸುವಂತೆ ನ್ಯಾಯಾಲಯ ನೀಡಿರುವ ಆದೇಶವು ಇದೀಗ ಹೊಸ ಚರ್ಚೆಯನ್ನು ಹುಟ್ಟುಹಾಕಿದೆ. ಆದರೆ ಈ ಆದೇಶದ ಹಿಂದಿನ ನಿಜವಾದ ಕಾರಣವೇನು? ಪವಿತ್ರಾಗೌಡ ಕೇಳಿದ್ದೇನು, ಕೋರ್ಟ್ ಕೊಟ್ಟಿದ್ದೇನು? ಈ ಬಗ್ಗೆ ವಿವರವಾಗಿ ಅರಿಯಬೇಕು ನೀವು.

ರೇಣುಕಾಸ್ವಾಮಿ ಕೊಲೆ ಪ್ರಕರಣದ ಎ1 ಆರೋಪಿಯಾಗಿರುವ ಪವಿತ್ರಾಗೌಡ ಅವರನ್ನು ಇರಿಸಲಾಗಿರುವ ಸೆಲ್‌ಗೆ ಟಿವಿ ಅಳವಡಿಸಲು ಬೆಂಗಳೂರಿನ 57ನೇ ಸಿಸಿಹೆಚ್ ನ್ಯಾಯಾಲಯವು ಕಾರಾಗೃಹ ಅಧಿಕಾರಿಗಳಿಗೆ ಸೂಚನೆ ನೀಡಿದೆ. ಇಷ್ಟು ಗಂಭೀರ ಸ್ವರೂಪದ ಪ್ರಕರಣದಲ್ಲಿ, ನ್ಯಾಯಾಲಯವೇ ಇಂತಹ ಸೌಲಭ್ಯಕ್ಕೆ ನಿರ್ದೇಶನ ನೀಡಿರುವುದು ಸಹಜವಾಗಿಯೇ ಸಾರ್ವಜನಿಕರಲ್ಲಿ ಭಾರೀ ಅಚ್ಚರಿ ಹುಟ್ಟುಹಾಕಿದೆ. ಪವಿತ್ರಾ ಗೌಡ ಅವರ ಪರ ವಕೀಲರಾದ ಎಸ್. ಬಾಲನ್ ಅವರು ನ್ಯಾಯಾಲಯಕ್ಕೆ ಕೇವಲ ಟಿವಿಗಾಗಿ ಮಾತ್ರ ಮನವಿ ಮಾಡಿರಲಿಲ್ಲ. ಅವರ ಮನವಿ ಪತ್ರದಲ್ಲಿ ಹಲವು ಸೌಲಭ್ಯಗಳ ಬೇಡಿಕೆ ಇತ್ತು. ಆ ಪಟ್ಟಿ ಹೀಗಿದೆ:

★ ಟಿವಿ ★ ರೇಡಿಯೋ ★ ದಿನಪತ್ರಿಕೆ ★ ಮ್ಯೂಸಿಕ್ ★ ಮೆಡಿಟೇಷನ್ ★ ಮನೆ ಊಟ ಈ ದೊಡ್ಡ ಪಟ್ಟಿಯನ್ನು ಮುಂದಿಟ್ಟರೂ, ಮಾನ್ಯ ನ್ಯಾಯಾಲಯ ಈ ಎಲ್ಲವನ್ನೂ ಒಪ್ಪಲಿಲ್ಲ. ಬದಲಿಗೆ, ಕಾನೂನಿನ ಚೌಕಟ್ಟಿನಲ್ಲಿ ಯಾವುದು ಸರಿಹೊಂದುತ್ತದೆ ಎಂಬುದನ್ನು ಮಾತ್ರ ಪರಿಗಣಿಸಿತು.

ಈ ಬೇಡಿಕೆಗಳನ್ನು ಕರ್ನಾಟಕ ಕಾರಾಗೃಹ ನಿಯಮಾವಳಿ 749ರ ನಿಯಮ VI (Karnataka Prison Manual, Rule 749, Clause VI) ಅಡಿಯಲ್ಲಿ ಅಧಿಕೃತವಾಗಿ ಸಲ್ಲಿಸಲಾಗಿತ್ತು. ಇಲ್ಲಿ ಗಮನಿಸಬೇಕಾದ ಪ್ರಮುಖ ಅಂಶವೆಂದರೆ, ನ್ಯಾಯಾಲಯವು ವೈಯಕ್ತಿಕ ಅನುಕಂಪದ ಮೇಲೆ ಯಾವುದೇ ಸೌಲಭ್ಯ ನೀಡಿಲ್ಲ. ಬದಲಿಗೆ, ಅದರ ಪಾತ್ರವು ಅಸ್ತಿತ್ವದಲ್ಲಿರುವ ಕಾನೂನನ್ನು ವ್ಯಾಖ್ಯಾನಿಸಿ, ಅದರ ಅನ್ವಯ ಆದೇಶ ನೀಡುವುದಷ್ಟೇ ಆಗಿದೆ.

ಎರಡೂ ಕಡೆಯ ವಾದವನ್ನು ಆಲಿಸಿದ 57ನೇ ಸೆಷನ್ಸ್ ನ್ಯಾಯಾಲಯವು, ಜೈಲು ನಿಯಮಾವಳಿಗಳ ಪ್ರಕಾರ ಟಿವಿ, ದಿನಪತ್ರಿಕೆ ಮತ್ತು ಗ್ರಂಥಾಲಯದ ಪುಸ್ತಕಗಳನ್ನು ಒದಗಿಸಲು ಅನುಮತಿ ನೀಡಿತು. ಆದರೆ, ಮನೆ ಊಟ, ಸಂಗೀತ ಅಥವಾ ಧ್ಯಾನದಂತಹ ಮನವಿಗಳನ್ನು ಪುರಸ್ಕರಿಸಲಿಲ್ಲ, ಏಕೆಂದರೆ ಅವುಗಳು ನಿಯಮಾವಳಿಯ ನಿಗದಿತ ಚೌಕಟ್ಟಿನ ಹೊರಗಿರಬಹುದು. ಇದು ಕಾನೂನಿನ ಅಡಿಯಲ್ಲಿ ಖೈದಿಗಳಿಗೆ ಯಾವ ಹಕ್ಕುಗಳಿವೆ ಮತ್ತು ಯಾವುವು ಕೇವಲ ಮನವಿಗಳಾಗಿ ಉಳಿಯುತ್ತವೆ ಎಂಬುದನ್ನು ಸ್ಪಷ್ಟವಾಗಿ ತೋರಿಸುತ್ತದೆ.

ಸಾರ್ವಜನಿಕರ ಗ್ರಹಿಕೆಗೆ ಇದು ವಿಶೇಷ ಸೌಲಭ್ಯದಂತೆ ಕಂಡರೂ, ನ್ಯಾಯಾಲಯದ ಈ ನಿರ್ಧಾರವು ಕಾನೂನಿನ ಮೂಲಭೂತ ತತ್ವವನ್ನು ಎತ್ತಿಹಿಡಿಯುತ್ತದೆ: ನಿಯಮಗಳು ಎಲ್ಲರಿಗೂ ಒಂದೇ. ಗಂಭೀರ ಪ್ರಕರಣಗಳ ಆರೋಪಿಗಳಿಗೂ ಕಾರಾಗೃಹ ನಿಯಮಾವಳಿಗಳ ಅಡಿಯಲ್ಲಿ ನಿರ್ದಿಷ್ಟ ಹಕ್ಕುಗಳು ಲಭ್ಯವಿರುತ್ತವೆ ಎಂಬುದನ್ನು ಈ ಘಟನೆ ಸ್ಪಷ್ಟಪಡಿಸಿದೆ. ಸಾರ್ವಜನಿಕರ ಆಕ್ರೋಶದ ನಡುವೆಯೂ, ಕಾನೂನು ತನ್ನ ನಿಯಮಗಳನ್ನು ಎಲ್ಲರಿಗೂ ಸಮಾನವಾಗಿ ಅನ್ವಯಿಸಬೇಕಾದ ಅನಿವಾರ್ಯತೆಯನ್ನು ಈ ಘಟನೆ ನೆನಪಿಸುತ್ತದೆ ಅಲ್ಲವೇ. ☯

# ದೇಣಿಗೆ ಕೊಡಿಸುವ ನೆಪದಲ್ಲಿ ವಂಚನೆ! ಎರಡು ದಿನದಲ್ಲಿ 2 ಕೋಟಿ ಪಂಗನಾಮ!!






ಜಮಖಂಡಿ ವೃದ್ಧಾಶ್ರಮ

ಬಾಗಲಕೋಟೆ
✍ಮಂಜುನಾಥ ಕರೋಳಿ

ಇಂದಿನ ಕಾಲಮಾನದಲ್ಲಿ ಸೈಬರ್ ವಂಚನೆ ಬಹುವೇಗದಲ್ಲಿ ಕ್ಷಣಾರ್ಧದಲ್ಲೇ ಬ್ಯಾಂಕ್ ಖಾತೆಗಳಿಂದ ಹಣ ಲಪಟಾಯಿಸುತ್ತಿದ್ದಾರೆ. ಜಾಗತಿಕ ಮಟ್ಟದಲ್ಲಿ ಇದು ಅತಿಯಾದ ವ್ಯಾಪ್ತಿಯಲ್ಲಿ ಬೆಳೆದಿರುವುದು ವಿಷಾದಕರ ಸಂಗತಿ ಎಂದು ಹೇಳಬಹುದು. ಯಾಕೆಂದರೆ ಅಮಾಯಕರಷ್ಟೇ ಅಲ್ಲದೆ ವಿದ್ಯಾವಂತರನ್ನು ಸಹ ಮರಳು ಮಾಡುವ ಈ ಆನ್‌ಲೈನ್ ವಂಚಕರು ಬೆಳೆದಿದ್ದಾರೆ ಎನ್ನಬಹುದು. ಅದರಲ್ಲೂ ಭಾರತದಲ್ಲಿ ಸೈಬರ್ ಅಪರಾಧಿಗಳು ತಮ್ಮ ಚಾಣಾಕ್ಷತನದಿಂದ ಸಲೀಸಾಗಿ ಹಣ ಲಪಟಾಯಿಸುತ್ತಿದ್ದಾರೆ. ಅದೇ ರೀತಿ ಇಲ್ಲಿ ಅಂತ ರಾಜ್ಯ ಸೈಬರ್ ವಂಚಕರು ಕರ್ನಾಟಕ ಮೂಲದ ಒಂದು ವೃದ್ಧಾಶ್ರಮ ಸಂಸ್ಥೆಗೆ ದೇಣಿಗೆ ಕೊಡುತ್ತೆವೆ ಮತ್ತು ಇನ್ನಿತರ ಸಂಸ್ಥೆಗಳಿಂದ ನಿಮಗೆ ಫಂಡ್ ಕೊಡಿಸುತ್ತೇವೆ ಅಂತಾ ಬಣ್ಣದ ಮಾತುಗಳನ್ನು ಆಡಿ ಅತಿ ಚಾಣಾಕ್ಷತನದಿಂದ ಅವರ ಮೊಬೈಲ್ ಪಡೆದು ಓಟಿಪಿ ಆ್ಯಪ್ ಹಾಕಿ ಅವರ ಬ್ಯಾಂಕ್ ಖಾತೆಯಿಂದ ಬರೋಬ್ಬರಿ 2 ಕೋಟಿ ರೂ.ಗಳನ್ನು ಲಪಟಾಯಿಸಿರುವ ಬಗ್ಗೆ ಬಾಗಲಕೋಟೆ ಜಿಲ್ಲೆಯ ಜಮಖಂಡಿಯಲ್ಲಿ ನಡೆದಿರುವ ಬಗ್ಗೆ ಬಾಗಲಕೋಟೆ ಸಿಈಎನ್ ಪೊಲೀಸ್ ಠಾಣೆಯಿಂದ ವರದಿಯಾಗಿದೆ

ಬಾಗಲಕೋಟೆ ಜಿಲ್ಲೆಯ ಜಮಖಂಡಿ ನಗರದಲ್ಲಿ ಜಯ ಭಾರತ ಮಾತೆ ಎಂಬ ಒಂದು (NGO) ಸಂಸ್ಥೆ ಇದ್ದು ನಗರ ಹಾಗೂ ಗ್ರಾಮೀಣ ಸೇವಾಸಂಸ್ಥೆಯಾದ ಇದು ಬಾಗಲಕೋಟೆ, ವಿಜಯಪುರ, ಬೆಳಗಾವಿ, ಗದಗ ಜಿಲ್ಲೆಗಳಲ್ಲಿ ವೃದ್ಧಾಶ್ರಮ ಹಾಗೂ ನಿರ್ಗತಿಕ ಕೇಂದ್ರಗಳನ್ನು ಈ ಸಂಸ್ಥೆ ನಡಿಸುತ್ತಿದ್ದು, ಇದಕ್ಕಾಗಿ ವಿವಿಧ ದಾನಿಗಳಿಂದ ಸಂಘ-ಸೆಂಸ್ಥೆಗಳಿಂದ ಸಹಾಯ ನಿರೀಕ್ಷಿಸಿದ್ದರು. ಕಂಪನಿಗಳಿಂದ ಸಿಎಸ್‌ಆರ್ ಫಂಡ್‌ನಿಂದ ಹಣ ನೆರವು ಕೋರಿದ್ದರು. ಈ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಮನವಿಗಳನ್ನು ಸಹ ಮಾಡಿದ್ದರು. ಇದನ್ನು ಗಮನಿಸಿದ ಆಸ್ಸಾಂ ಮೂಲದ ಸುರ್ಜಿತ್ ಮತ್ತು ಸಿದ್ದಾರ್ಥ ಹಾಗೂ ಪಶ್ಚಿಮ ಬಂಗಾಳದ ಮಾನಸ್ ಗೋಷ್ ಎಂಬ ಈ ಮೂದರು



ವಂಚಕರು ವಂಚಿಸಿದ ಬಗ್ಗೆ ಎನ್‌ಜಿಓ ಮುಖ್ಯಸ್ಥ ತೋರಿಸುತ್ತಿರುವುದು

ಜಮಖಂಡಿಯ ಜಯ ಭಾರತ ಮಾತೆ NGO ಕಾರ್ಯದರ್ಶಿ ಶಶಾಂಕ ಒಳವಾಡೆ ಎಂಬುವವರನ್ನು ಸಂಪರ್ಕಿಸುತ್ತಾರೆ. ಅವರೊಂದಿಗೆ ಪರಸ್ಪರ ಸಂವಾದ ನಡೆಸಿ ಈ ಹೊರರಾಜ್ಯದ ಮೂವರು ಶಶಾಂಕ ಅವರಿಗೆ ನಾವು ಸಂಸ್ಥೆಗೆ ದೇಣಿಗೆ ಕೊಡಿಸುತ್ತೇವೆ ಅಂತ ನಂಬಿಸಿದ್ದಾರೆ

**ಎರಡು ದಿನದಲ್ಲಿ 2 ಕೋಟಿ ಪಂಗನಾಮ!**

ಬಾಗಲಕೋಟೆ ಹಾಗೂ ಇನ್ನಿತರ ಜಿಲ್ಲೆಗಳಲ್ಲಿ ವೃದ್ಧಾಶ್ರಮ ನಿರ್ಗತಿಕ ವಸತಿಕೇಂದ್ರ ಸಡೆಸುತ್ತಿದ್ದ ಶಶಾಂಕ್‌ರವರು ಸಾಮಾಜಿಕ ಜಾಲ ತಾಣದ ಮೂಲಕ ದೇಣಿಗೆಗಾಗಿ ನೆರವು ಕೊರಿದ್ದರು. ಇದನ್ನು ಗಮನಿಸಿ ಮಾಹಿತಿ ಆಧರಿಸಿ ಜೂನ್ ತಿಂಗಳಲ್ಲಿ ಜಮಖಂಡಿಗೆ ಈ ವಂಚಕರು ಆಗಮಿಸಿದ್ದರು. ದೇಣಿಗೆ ಯಾವ ಉದ್ದೇಶ ಸೇರಿದಂತೆ ಇತ್ಯಾದಿ ಮಾಹಿತಿ ಪಡೆದುಕೊಳ್ಳುತ್ತಾರೆ. ನಂತರ ಕೆವೈಸಿ ಮಾಡುವ ನೆಪದಲ್ಲಿ ಶಶಾಂಕ್ ಅವರ ಫೋನ್ ಪಡೆದುಕೊಂಡು ಅದರಲ್ಲಿ ಓಟಿಪಿ ಆ್ಯಪ್ ಹಾಕಿ ಅದನ್ನು ಹ್ಯಾಕ್ ಮಾಡಿದ್ದಾರೆ. ಬಳಿಕ ಜಯ ಭಾರತ ಮಾತೆ ಸಂಸ್ಥೆಯ ಬ್ಯಾಂಕ್ ಖಾತೆಯ ವಿವರ ಪಡೆದು ಎಲ್ಲೆಡೆ ಕ್ಯೂಆರ್ ಕೋಡ್ ಕಳಿಸಿದ್ದಾರೆ. ಜೂನ್



ಎಸ್ಪಿ ಸಿದ್ದಾರ್ಥ್ ಗೋಯಲ್



ಅ||ಎಸ್ಪಿ ಪ್ರಸನ್ನ ದೇಸಾಯಿ

ತಿಂಗಳಿಂದ ವಿವಿಧ ಧಾನಿಗಳಿಂದ ಖಾತೆಗೆ ಹಣ ಜಮಾ ಆಗುತ್ತ ಬಂದಿದೆ. ನಂತರ ನವೆಂಬರ್ ತಿಂಗಳಿನಿಂದ ಈ ವಂಚಕರು ತಮಗೆ ಬೇಕಾದವರ ಖಾತೆಗೆ ಹಣ ಜಮಾ ಮಾಡುತ್ತಾ ಹೋಗಿದ್ದಾರೆ. ಹೀಗೆ ಒಂದೂವರೆ ದಿನದಲ್ಲಿ ಬರೊಬ್ಬರಿ 2 ಕೋಟಿ ರೂಪಾಯಿ ಹಣ ಲಪಟಾಯಿಸಲಾಗಿತ್ತು. ಒಂದೂವರೆ ದಿನದಲ್ಲಿ ಆರ್‌ಟಿಜಿಎಸ್ ಹಾಗೂ ನೆಫ್ಟ್ ಮೂಲಕ ಎರಡು ಲಕ್ಷಕ್ಕೂ ಅಧಿಕ ಟ್ರಾನ್ಸಕ್ಷನ್ ಆಗಿದೆ ಜೊತೆಗೆ ಶಶಾಂಕ್ ಅವರಿಗೆ ಯಾವುದೇ ಬ್ಯಾಂಕ್ ಟ್ರಾನ್ಸಾಕ್ಷನ್ ಬಾರದಂತೆ ತಡೆಹಿಡಿದಿದ್ದಾರೆ. ಅದರಿಂದ ಯಾವುದೇ ಸಂದೇಶ ಬಾರದೇ ಇದ್ದಾಗ ಸಂಶಯ ಬಂದು ಶಶಾಂಕ ಅವರು ಬ್ಯಾಂಕ್‌ನ್ನು ಸಂಪರ್ಕಿಸಿದಾಗ ಈ ಮೂವರು ಅಂತರಾಜ್ಯ ವಂಚಕರು ತಮ್ಮ ನಂಸ್ಥೆಯ ಖಾತೆಯಿಂದ ಹಣ ಲಪಟಾಯಿಸಿದ್ದು ಗೊತ್ತಾಗಿದೆ. ತಾವು ಇದರಿಂದ ಭಾರಿ ಪ್ರಮಾಣದಲ್ಲಿ ಮೋಸ ಹೋಗಿದ್ದು ಎಂದು ತಿಳಿದುಬಂದಿದೆ. ನಂತರ ಶಶಾಂಕರವರು ಬಾಗಲಕೋಟೆ ಸೈಬರ್ ಅಪರಾಧ ಠಾಣೆಗೆ ದೂರು ನೀಡಿದ್ದು, ತಮಗಾದ ಅನ್ಯಾಯಕ್ಕೆ ಸೂಕ್ತವಾದ ಕ್ರಮವಹಿಸಿ ಆರೋಪಿಗಳಿಂದ ಹಣ ಮರಿಕಳಿಸುವಂತೆ ಮನವಿ ಮಾಡಿದ್ದಾರೆ ಹಾಗೂ ಈ ರೀತಿ ಆನ್‌ಲೈನ್ ವಂಚನೆಗಳು ಮೇಲಿಂದ ಮೇಲೆ ಆಗುತ್ತಿದ್ದು, ಸಾರ್ವಜನಿಕರು ಜಾಗೃತರಾಗಬೇಕಾಗಿದೆ. ಪೊಲೀಸರು ವಂಚಕರನ್ನು ಬಂಧಿಸಿ ಆ ಸಂಸ್ಥೆಗೆ ಹಣ ಕೊಡಿಸಬೇಕು ಎಂದು ಸ್ಥಳೀಯರು ಸಹ ಆಗ್ರಹಿಸಿದ್ದಾರೆ.

ಜಮಖಂಡಿಯ ಜಯ ಭಾರತ ಮಾತೆ ಸಂಸ್ಥೆಗೆ ನ್ಯಾಯ ಒದಗಿಸಬೇಕು. ಇಂತಹ ಆನ್‌ಲೈನ್ ವಂಚಕರನ್ನು ಮಟ್ಟ ಹಾಕಬೇಕಿದೆ. ಒಟ್ಟಾರೆಯಲ್ಲಿ ಆಧುನಿಕತೆಯಲ್ಲಿ ತಂತ್ರಜ್ಞಾನ ಹೆಚ್ಚಾಗಿದ್ದು ಒಂದು ಕಡೆ ವರವಾದರೆ ಇನ್ನೊಂದು ಕಡೆ ಇಂತಹ ವಂಚನೆ ದುರುಪಯೋಗಕ್ಕೆ ಕಾರಣವಾಗುತ್ತಿದೆ. ಇಂತಹ ವಂಚಕರು ನಿಮ್ಮ ಮಧ್ಯದಲ್ಲೂ ಇರಬಹುದು. ಯಾವುದೇ ಹಂತದಲ್ಲಾದರೂ ನಿಮಗೂ ಇದೇ ರೀತಿ ಆಗದಿರಲಿ, ನೀವೂ ಜಾಗೃತರಾಗಬೇಕಿರುವುದು ಸಧ್ಯದ ಪರಿಸ್ಥಿತಿಯಾಗಿದೆ. ಇಂತಹ ವಂಚಕರು ಯಾವುದೇ ಕಾರಣದಲ್ಲಿ ನಿಮ್ಮನ್ನು ಸಂಪರ್ಕಿಸಿ ನಿಮ್ಮ ಖಾತೆಯನ್ನು ಹ್ಯಾಕ್ ಮಾಡಿ ಹಣ ಲಪಟಾಯಿಸಬಹುದು. ಇದರಿಂದ ಸಾರ್ವಜನಿಕರು ಜಾಗೃತರಾಗಬೇಕು. ಸ್ವತಃ ಬ್ಯಾಂಕ್‌ನವರೇ ಕರೆಮಾಡಿ ಯಾವುದೇ ರೀತಿಯ ನಿಮ್ಮ ಮೊಬೈಲ್‌ನಿಂದ ಓಟಿಪಿ ಪಡೆಯುವುದಿಲ್ಲ. ಒಂದು ವೇಳೆ ಓಟಿಪಿ ಕೇಳಿದರೆ ಯಾವ ನಂಬರ್‌ನಿಂದ ನಿಮಗೆ ಕರೆ ಬಂದಿರುತ್ತದೆಯೋ ಆ ಸಂಖ್ಯೆಯನ್ನು ಸೈಬರ್ ಕ್ರೈಂ ವಿಭಾಗದವರಿಗೆ ಮಾಹಿತಿ ನೀಡಬೇಕಿದೆ.



ಡಿವೈಎಸ್ಪಿ ರೋಷನ್ ಜಮೀರ್



ಪಿಎಸ್‌ಐ ಅನಿಲ್ ಕುಂಬಾರ್

ಇದರಿಂದ ಎಚ್ಚೆತ್ತುಕೊಂಡು ಸಾರ್ವಜನಿಕರು ಜಾಗೃತರಾಗಬೇಕು ಹಾಗೂ ಜಮಖಂಡಿಯ ಜಯ ಭಾರತ ಮಾತೆ ಸಂಸ್ಥೆಗೆ ಆದ ಅನ್ಯಾಯಕ್ಕೆ ಪೊಲೀಸರಿಂದ ನ್ಯಾಯ ದೊರಕಲಿ ಎಂಬುದೇ 'ಪೊಲೀಸ್ ನ್ಯೂಸ್' ಆಶಯವಾಗಿದೆ.

## ಓದುಗರ ಗಮನಕ್ಕೆ

### ರಾಜಕೀಯ ಸುದ್ದಿಯೂ ಇರುತ್ತದೆ...

'ಪೊಲೀಸ್ ನ್ಯೂಸ್' ವಾರಪತ್ರಿಕೆಯಲ್ಲಿ ಬರೀ ಅಪರಾಧ ವರದಿಗಳು ಮಾತ್ರ ಬರುತ್ತದೆ ಅಂದುಕೊಳ್ಳಬೇಡಿ. ಬದಲಾದ ಕಾಲಮಾನದಲ್ಲಿ ಇನ್ನು ಮುಂದೆ ರಾಜಕೀಯ, ಭ್ರಷ್ಟಾಚಾರ, ಮುಚ್ಚಿ ಹೋಗಿರುವ 'ಕ್ರೈಂ' ಮುಂತಾದ ರಹಸ್ಯ ವರದಿಗಳನ್ನು ಬ್ಲಾಸ್ಟ್ ಮಾಡಲಿದ್ದೇವೆ. ನಿಮ್ಮ ಊರುಗಳಲ್ಲಿ ಇಂತಹ ಬ್ಲಾಸ್ಟ್ ಮಾಡುವಂತಹ ಸುದ್ದಿಗಳಿದ್ದರೆ ನಮಗೆ ಕಳುಹಿಸಿ ಕೊಡಿ. ನಿಮ್ಮ ಹೆಸರು, ವಿಳಾಸವನ್ನು ರಹಸ್ಯವಾಗಿಡುವ ಜವಾಬ್ದಾರಿ ನಮ್ಮದು. ನೀವು ಕಳುಹಿಸುವ ವರದಿಗೆ ದಾಖಲೆಗಳಿದ್ದರೆ ಒಳ್ಳೆಯದು. ಅಕಸ್ಮಾತ್ ದಾಖಲೆಗಳು ಇಲ್ಲದಿದ್ದಲ್ಲಿ, ನೀವು ಕಳುಹಿಸುವ ವರದಿಯಲ್ಲಿ ದಾಖಲೆಗಳು ಸಿಗುವ ಜಾಗವನ್ನು ನಮೂದಿಸಿದರೆ ಸಾಕು, ದಾಖಲೆ ಎತ್ತುವ ಜವಾಬ್ದಾರಿ ನಮ್ಮದು.

ನಮ್ಮ ವಿಳಾಸ :

8884452699 policenewsreporter@gmail.com ☎ 080-23588510

ನಂ. 165, 8ನೇ ಮುಖ್ಯರಸ್ತೆಫಿ, ಬಿಇಎಂಎಲ್ ಬಡಾವಣೆ, ಬಸವೇಶ್ವರನಗರ, ಬೆಂಗಳೂರು-560 079

# ಸ್ಯಾಂಡಲ್‌ವುಡ್‌ನಲ್ಲಿ ಮತ್ತೆ ಶುರುವಾಯಿತು ಸುದೀಪ್-ದರ್ಶನ್ 'ಫ್ಯಾನ್ಸ್' ವಾರ್!



ಕಿಚ್ಚ ಸುದೀಪ್ ಅಭಿನಯದ ಬಹು ನಿರೀಕ್ಷಿತ 'ಮಾರ್ಕ್' ಸಿನಿಮಾ ಇದೇ 25ರಂದು ಬಿಡುಗಡೆಗೆ ಸಜ್ಜಾಗಿರುವಂತೆಯೇ ಇದರ 'ಪ್ರೀ ರಿಲೀಸ್' ಕಾರ್ಯಕ್ರಮದಲ್ಲಿ ಸುದೀಪ್ ನೀಡಿದ್ದಾರೆ ಎನ್ನಲಾದ



2014ರಲ್ಲಿ ಗಂಡನಿಂದ ಹಿಂಸೆಯಾದಾಗ ಸುದೀಪ್ ಸಹಾಯ ಪಡೆದಿದ್ದ ವಿಜಯಲಕ್ಷ್ಮಿ

ಹೇಳಿಕೆಯೊಂದು, ದರ್ಶನ್ ಅವರ ಪತ್ನಿ ವಿಜಯಲಕ್ಷ್ಮಿ ಹಾಗೂ ದಾಸನ ಅಭಿಮಾನಿಗಳ ನಡುವೆ ವಾರ್‌ಗೆ ಕಾರಣವಾಗಿದೆ! ಇಷ್ಟಕ್ಕೂ ಸುದೀಪ್ ಏನು ಹೇಳಿದ್ರು?

'ನಾವು ಸಿನಿಮಾ ಬಿಡುಗಡೆ ಮಾಡುವ ಜೊತೆಗೆ ಯುದ್ಧವೊಂದನ್ನು ಸಹ ಮಾಡಬೇಕಿದೆ. ಹೊರಗೆ ಪಡೆಯೊಂದು ಯುದ್ಧಕ್ಕೆ ರೆಡಿ ಆಗುತ್ತಿದೆ. ನಾನು ಮಾತನಾಡಬಾರದು ಎಂದು ಸುಮ್ಮನಿದ್ದೆ, ಮಾತನಾಡಲು ಬರುವುದಿಲ್ಲ ಎಂದರ್ಥವಲ್ಲ, ಆದರೆ ಕೆರಳಿಸುತ್ತಾ ಹೋದರೆ ಸುಮ್ಮನೆ ಕೂರಲು ಆಗುವುದಿಲ್ಲ' ಎಂದು ಸುದೀಪ್ ಹೇಳಿದ್ದರು!

ಇನ್ನೂ ಸುದೀಪ್ ಮಾತಿಗೆ ಟಾಂಗ್ ಕೊಟ್ಟಂತೆ ಮಾತನಾಡಿರುವ ದರ್ಶನ್ ಪತ್ನಿ ವಿಜಯಲಕ್ಷ್ಮಿ, ಕೆಲವರು ದರ್ಶನ್ ಅಮ್ರ ಇಲ್ಲದೇ ಇದ್ದಾಗ ಏನೇನೋ ಮಾತಾಡ್ತಾ ಇದ್ದಾರೆ. ಅವರ ಬಗ್ಗೆ ಅವ್ರ ಫ್ಯಾನ್ಸ್ ಬಗ್ಗೆ ಎಲ್ಲಾ ಮಾತಾಡ್ತಾರೆ. ವೇದಿಕೆ ಮೇಲೆ ನಿತ್ಕೊಂಡು ಮಾತಾಡೋದು. ವೀಡಿಯಾಗಳಲ್ಲಿ ಕುಳಿತು ಮಾತಾಡೋದು. ಹೊರಗೆ ಕುತ್ಕೊಂಡ್ ಮಾತಾಡೋದು ಎಲ್ಲಾ ಮಾಡ್ತಿದ್ದಾರೆ. ಅದೇ ಜನರು ದರ್ಶನ್ ಅವರು ಇದ್ದಾಗ ಬೆಂಗಳೂರಲ್ಲಿ ಇರ್ತಾರಾ ಇಲ್ವಾ ಅಂತಾನೇ ಗೊತ್ತಾಗಲ್ಲ! ಅಂತ ಹೇಳಿದ್ದಾರೆ. ವಿಜಿ ಮಾತಿಗೆ ತಿರುಗೇಟು ನೀಡಿರುವ ಕಿಚ್ಚನ ಅಭಿಮಾನಿಗಳು, 2011ರ ಹಳೆಯ ಫೋಟೋವನ್ನ ವೈರಲ್ ಮಾಡಿದ್ದಾರೆ.





ಅಂದು ನಿಮ್ಮ ಮೇಲೆ ನಿಮ್ಮ ಗಂಡನಿಂದಲೇ ಹಲ್ಲೆಯಾಗಿ, ದರ್ಶನ್ ಮೇಲೆ ಕೇಸ್ ಬಿದ್ದು, ನಿಮ್ಮ ಸಂಸಾರ ಬೀದಿಗೆ ಬೀಳುವ ಸ್ಥಿತಿಯಲ್ಲಿತ್ತು. ಆಗ ನಿಮಗೆ ಬೆಂಬಲವಾಗಿ ನಿಂತಿದ್ದು ಇದೇ ಕಿಚ್ಚ ಸುದೀಪ್ ಅನ್ನೋದನ್ನ ಮರೀಬೇಡಿ. ಕಷ್ಟದಲ್ಲಿ ಸುದೀಪ್ ಬೇಕು, ಈಗ ಟಾಂಗ್ ಕೊಡ್ತೀರಾ ಅಂತ ಪ್ರಶ್ನೆ ಮಾಡ್ತಿದ್ದಾರೆ. ಅಂದು ನೀವು ಅಳುತ್ತಾ ನಿಂತಾಗ ಕಣ್ಣೀರು ಒರೆಸಿದ್ದು ಯಾರು ಅನ್ನೋದನ್ನ ಒಮ್ಮೆ ನೆನಪು ಮಾಡಿಕೊಳ್ಳಿ ಮೇಡಂ ಅಂತ ಸೋಶಿಯಲ್ ಮೀಡಿಯಾದಲ್ಲಿ ಪೋಸ್ಟ್ ಮಾಡುತ್ತಿದ್ದಾರೆ.

ಅಂದು ಸುದೀಪ್ ಅವರ ಪೈಲ್ವಾನ್ ಸಿನಿಮಾ ರಿಲೀಸ್ ಆದಾಗ ಅದನ್ನ ಬೇಕಂತಲೇ ಟಾರ್ಗೆಟ್ ಮಾಡಿದ್ರು. ಸಿನಿಮಾ ಥಿಯೇಟರ್‌ಗೆ ಬರುವ ಮುನ್ನವೇ ಪೈರಸಿ ಮಾಡಿ ಟೆಲಿಗ್ರಾಂನಲ್ಲಿ ಹರಿಬಿಟ್ಟಿದ್ರು. ಅಂದು ಸುದೀಪ್ ಕಣ್ಣೀರು ಹಾಕಿದ್ರು, ನೊಂದು ಕೊಂಡಿದ್ರು. ಆಗೆಲ್ಲಾ ಸಂಭ್ರಮ ಪಟ್ಟವರು ಈಗ್ಯಾಕೆ ಸುದೀಪ್ ಅವರ ಹೇಳಿಕೆಗೆ ಉರಿಗೊಳ್ತಿದ್ದೀರಾ ಅಂತ ಕಿಚ್ಚನ ಬಳಗ ನೇರವಾಗಿಯೇ ಪ್ರಶ್ನೆ ಮಾಡುತ್ತಿದ್ದಾರೆ. ಕರ್ಮ ತಿರುಗಿ ನೋಡುತ್ತೆ ಅನ್ನೋದು ಇದೇನಾ ಅಂತಿದ್ದಾರೆ.

ವಿಪರ್ಯಾಸ ಅಂದ್ರೆ, ಈಗ ದರ್ಶನ್ ಅವರ ಡೆವಿಲ್ ಸಿನಿಮಾವನ್ನ ಕೂಡ ಕಿಡಿಗೇಡಿಗಳು ಪೈರಸಿ ಮಾಡಿ ಟೆಲಿಗ್ರಾಂನಲ್ಲಿ ಬಿಟ್ಟಿದ್ದಾರೆ. ಆದ್ರೆ ಇದಕ್ಕೆ ಸುದೀಪ್ ಸಂಭ್ರಮ ಪಟ್ಟಿಲ್ಲ. ಬದಲಿಗೆ ಪೈರಸಿ ಮಾಡೋ ಪಡೆಯ ವಿರುದ್ಧ ಖಡಕ್ ಎಚ್ಚರಿಕೆ ನೀಡಿದ್ದಾರೆ. ಕಲಾವಿದರ ಶ್ರಮಕ್ಕೆ ಬೆಲೆ ಕೊಡಿ ಅಂತ ಹೇಳಿದ್ದಾರೆ. ಅಂದು ನೀವು ಮಾಡಿದ್ದನ್ನ, ಇಂದು ನಮ್ಮ ಬಾಸ್ ಮಾಡ್ತಿಲ್ಲ. ಇದೇ ಸುದೀಪ್ ಮತ್ತು ಉಳಿದವರ ನಡುವಿನ ವ್ಯತ್ಯಾಸ ಅಂತ ಕಿಚ್ಚನ ಫ್ಯಾನ್ಸ್ ಹೇಳ್ತಿದ್ದಾರೆ.

ಸುದೀಪ್ ಅವರಿಗೆ ದರ್ಶನ್ ಬಗ್ಗೆ ಕೆಟ್ಟದಾಗಿ ಮಾತಾಡಬೇಕು ಅನ್ನೋ ಉದ್ದೇಶ ಇದ್ದಿದ್ರೆ, ಅದಕ್ಕೆ ಎಷ್ಟೋ ಅವಕಾಶಗಳು ಇದ್ವು. ಎಷ್ಟೋ ಇಂಟರ್ವ್ಯೂಗಳಲ್ಲಿ ಅವರು ದರ್ಶನ್ ಬಗ್ಗೆ ಕೇಳಿದ್ರೂ ನಯವಾಗಿಯೇ ಉತ್ತರ ಕೊಟ್ಟಿದ್ದಾರೆ. ಯಾವತ್ತೂ ಯಾರ ಬಗ್ಗೆಯೂ ಕೀಳಾಗಿ ಮಾತಾಡಿಲ್ಲ. ಆದ್ರೆ ಈಗ 'ಯುದ್ಧ'ದ ಮಾತು ಆಡಿದ ತಕ್ಷಣ ಅದನ್ನ ದರ್ಶನ್ ಅವರಿಗೇ ಹೇಳಿದ್ದು ಅಂತ ನೀವಾಗಿಯೇ ನಿರ್ಧಾರ ಮಾಡಿಕೊಳ್ಳೋದು ಎಷ್ಟು ಸರಿ? ಅಂತ ಅಭಿಮಾನಿಗಳು ಕೇಳುತ್ತಿದ್ದಾರೆ...

# ಟ್ರೋಲರ್ಸ್‌ಗಳಿಗೆ ಅಭಿಷೇಕ್ ವಾರ್ನಿಂಗ್!!



ಬಾಲಿವುಡ್ ಬಿಗ್ ಬಿ ಅಮಿತಾಬ್ ಬಚ್ಚನ್ ಅವರ ಸುಪುತ್ರ ಅಭಿಷೇಕ್ ಬಚ್ಚನ್, ನಟಿ ನಿಮ್ರತ್ ಕೌರ್ ಜೊತೆ 'ಸಂಬಂಧ' ಹೊಂದಿದ್ದಾರೆ ಎನ್ನುವ ಗಾಸಿಪ್‌ಗಳು ಇತ್ತೀಚೆಗೆ ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಹರಡಿದ್ದವು. ಇದೇ ಕಾರಣಕ್ಕಾಗಿ ಅಭಿಷೇಕ್ ಹಾಗೂ ಪತ್ನಿ ಐಶ್ವರ್ಯಾ ರೈ ಅವರೊಂದಿಗೆ ವಿಚ್ಛೇದನವಾಗಲಿದೆ ಎಂಬ ಚರ್ಚೆಗಳು ಬಾಲಿವುಡ್ ಅಂಗಳದಲ್ಲಿ ಹಲ್‌ಚಲ್ ಸೃಷ್ಟಿಸಿ ಗಾಸಿಪ್ ಗಾಳಿಮಾತುಗಳಿಗೆ ಆಹಾರವಾಗಿದ್ದವು.

ಸಿನಿಮಾ ಕಲಾವಿದರೆಂದ ಮೇಲೆ ಅವರ ಸುತ್ತಮುತ್ತ ಬಣ್ಣ ಬಣ್ಣದ ಸುದ್ದಿಗಳು ರೆಕ್ಕೆಪುಕ್ಕಗಳ ಸಮೇತ ಸುಳಿದಾಡುವುದು ಸಹಜ. ಹಾಗಂತ ಅದರ ಬಗ್ಗೆ ಮಾತಾಡುತ್ತಾ ಕೂತರೆ ಕೆಲಸದ ಕಡೆ ಗಮನ ಕೊಡಲು ಸಾಧ್ಯವೇ ಆಗುವುದಿಲ್ಲ. ಇದನ್ನ ಮನಗಂಡೇ ತಮ್ಮ ಸುತ್ತಮುತ್ತ ತಮ್ಮ ಬಗ್ಗೆ ಹಲವಾರು ಸುದ್ದಿ ಕೇಳಿ ಬಂದರೂ, ಕೆಲವರು ತಮ್ಮ ಪ್ರತಿಕ್ರಿಯೆಯನ್ನು ನೀಡಲು ಹೋಗುವುದಿಲ್ಲ. ಏಕೆಂದರೆ ಹೀಗೆ ಹರಿದಾಡುವ ಸಾಮಾಜಿಕ ಜಾಲತಾಣಗಳಲ್ಲಿನ ಸುದ್ದಿಗಳಲ್ಲಿ ಅರ್ಧಕ್ಕರ್ಧ ಸುಳ್ಳಾಗಿರುತ್ತವೆ.



ಇನ್ನೂ ಕೆಲವರು ನೆಮ್ಮದಿಯಾಗಿ ಇರುವವರ ಮಾನಸಿಕ ನೆಮ್ಮದಿಯನ್ನು ಹಾಳು ಮಾಡುವ ಉದ್ದೇಶದಿಂದಲೇ ''ಫೇಕ್ ನ್ಯೂಸ್''ಗಳನ್ನು ತೇಲಿ ಬಿಡುತ್ತಾರೆ! ಅಭಿಷೇಕ್ ಬಚ್ಚನ್ ಐಶ್ವರ್ಯ ರೈ ದಂಪತಿಗಳ ದಾಂಪತ್ಯದಲ್ಲಿ ಬಿರುಕು! ಭಾರಿ ಮನಸ್ತಾಪ! ಕುಟುಂಬದಲ್ಲಿ ಕಲಹ! ವಿಚ್ಛೇದನ! ಹೀಗೆ....... ಹಲವಾರು ವರ್ಷಗಳಿಂದ ಟ್ರೋಲ್ಸ್ ಪೇಜ್‌ಗಳಲ್ಲಿ ಸೋಷಿಯಲ್ ಮೀಡಿಯಾ ಪೇಸ್‌ಬುಕ್‌ಗಳಲ್ಲಿ ಸುಖಾ ಸುಮ್ಮನೆ ಸುಳ್ಳು ಸುದ್ದಿ ಹರಿಬಿಡುತ್ತಿದ್ದವರೆಷ್ಟೋ. ಅಂತವರಿಗೆ ಇದೀಗ ನಿರಾಶೆಯಾಗಿದೆ. ಸ್ವತಃ ಅಭಿಶೇಕ್ ಬಚ್ಚನ್ ಅವರು ಈ ಎಲ್ಲಾ ಗಾಸಿಪ್‌ಗಳಿಗೂ ಸರಿಯಾದ ಉತ್ತರ ಕೊಟ್ಟು, ಲೈಕ್ಸ್, ಕಮೆಂಟ್ಸ್‌ಗಳಿಗೆ ಬಾಯಿ ತೆರೆದು ಕುಳಿತ ಮನೆಮುರುಕರ ಬಾಯಿ ಮುಚ್ಚಿಸಿದ್ದಾರೆ.

''ಸುಳ್ಳು ಸುದ್ದಿ'' ಹಂಚಿಕೊಂಡರೆ ಕಾನೂನು ಕಠಿಣ ಕ್ರಮ ಕೈಗೊಳ್ಳುತ್ತದೆ ಎನ್ನುವ ಅರಿವು ಇದ್ದರೂ ಕೂಡ ಲೈಕ್ಸ್, ಶೇರ್ ಹುಚ್ಚಿಗೆ ಬಿದ್ದ ಅನೇಕರು ''ಸುಳ್ಳು ಸುದ್ದಿ''ಯನ್ನು ಪೋಸ್ಟ್ ಮಾಡುತ್ತಲೇ ಇರುತ್ತಾರೆ! ಕಳೆದ 2024ರಲ್ಲಿ ಗೃಹ ಇಲಾಖೆ ನೀಡಿರುವ ಮಾಹಿತಿಯ ಪ್ರಕಾರ, 2021ರಿಂದ 2024ವರೆಗೆ ರಾಜ್ಯದಲ್ಲಿ ಒಟ್ಟು 247 ಪ್ರಕರಣಗಳು ದಾಖಲಾಗಿವೆ. ಆದರೂ ತಮ್ಮ ವಿಕೃತ ಮನಸ್ಥಿತಿಯ ಪ್ರದರ್ಶನ ಮಾಡುವ ಈ ಹೊಸ ತಲೆಮಾರಿನ ಟ್ರೋಲಿಂಗ್ ಪ್ರವೃತ್ತಿಯ ಜನರು ಸುಖಾಸುಮ್ಮನೆ ತಮ್ಮ ಸೋಷಿಯಲ್ ಮೀಡಿಯಾ ಅಕೌಂಟ್‌ಗಳ ವೀವ್ಸ್‌ಗಳನ್ನು ಹೆಚ್ಚಿಸಿಕೊಳ್ಳಲು, ಜಗತ್ತಿನ ಸೆಳೆಯಲು ಈ ರೀತಿಯ ಸುಳ್ಳು ವದಂತಿಗಳನ್ನು ಇತ್ತೀಚೆಗೆ ಯಥೇಚ್ಛವಾಗಿ ಹರಿಯಬಿಡುತ್ತಿದ್ದಾರೆ.

ಇದೆಲ್ಲವೂ ಮಾಮೂಲು ಎಂದುಕೊಂಡ ಅನೇಕರು ಸುಮ್ಮನಾಗುತ್ತಾರೆ. ಆದರೆ, ಸುಖಾ ಸುಮ್ಮನೆ ನೊಂದವರು ತಿರುಗಿಬಿದ್ದು ಕಾನೂನು ಕ್ರಮ ಕೈಗೊಳ್ಳುತ್ತಾರೆ. ಸೋಜಿಗವೆಂದರೆ, ಕೆಲವರಿಗೆ ಇಂಥ ಸುಳ್ಳು ಸುದ್ದಿಗಳನ್ನು ಕೇಳಿ ಕೇಳಿ ಅಭ್ಯಾಸವಾಗಿಬಿಟ್ಟಿರುತ್ತದೆ! ಉದಾಹರಣೆಗೆ ಐಶ್ವರ್ಯ ರೈ ಮತ್ತು ಅಭಿಷೇಕ್ ಬಚ್ಚನ್ ಅವರನ್ನೇ ತೆಗೆದುಕೊಳ್ಳಿ. ಈ ದಂಪತಿಗಳು ಎಷ್ಟೋ ವರ್ಷಗಳಿಂದ ತಮ್ಮ ಕುರಿತ ಗಾಸ್ಸಿಪ್‌ಗೆ ಪ್ರತಿಕ್ರಿಯೆ ನೀಡಲೇ ಹೋಗಿರಲಿಲ್ಲ!

ಮನೆ ಹಾಳರು ಇದನ್ನೇ ವೃತ್ತಿ ಮಾಡಿಕೊಂಡದ್ದನ್ನು ನೋಡಿ ಸಾಕಾಗಿ, ರೋಸಿಹೋಗಿ ಇದೀಗ ಖಾರವಾಗಿ ಪ್ರತಿಕ್ರಿಯಿಸಿದ್ದಾರೆ! ನೀವೇ ಗಮನಿಸಿದ್ದೀರಲ್ಲಾ, ಆರಂಭದಿಂದಲೂ ಐಶ್ವರ್ಯ ಅಭಿಷೇಕ್ ಸಂಸಾರದಲ್ಲಿ ಏನೋ ಸರಿ ಇಲ್ಲ..... ಬಿರುಕುಮುರುಕು ಎಂಬ ಗಾಸಿಪ್‌ಗಳನ್ನೇ ಹರಿಯ ಬಿಡಲಾಗಿದೆ.

ಕೆಲವರು ಜಿದ್ದಿಗೆ ಬಿದ್ದವರಂತೆ ಟ್ರೋಲ್ಸ್ ಫೇಜ್ ಗಳಲ್ಲಿ ಅಭಿಶೇಕ್ ಮತ್ತು ಐಶ್ವರ್ಯಗೆ ಡೈವೋರ್ಸ್ ಕೊಡಿಸಿಯೇ ತೀರಬೇಕೆಂದು ಹಟಕ್ಕೆ ಬಿದ್ದವರಂತೆ ವರ್ತಿಸಿದ್ದಾರೆ! ಬಾಲಿವುಡ್ ಎವರ್ ಗ್ರೀನ್ ಸೂಪರ್ ಸ್ಟಾರ್ ಅಮಿತಾಬ್ ಬಚ್ಚನ್ ಅವರ ಕುಟುಂಬದಲ್ಲಿ ಇಲ್ಲಸಲ್ಲದ ಗಲಾಟೆಗಳನ್ನು ಎಳೆತಂದು 'ಹುಳಿಹಿಂಡಿ' ಕುಟುಂಬ ಹೊಡೆಯುವ ಕೆಲಸ ಮಾಡುತ್ತಿದ್ದಾರೆ!

ಗಂಡ ಹೆಂಡ್ತಿ ಮಧ್ಯೆ ಎಲ್ಲವೂ ಸರಿಯಿಲ್ಲ, ಅತ್ತೆ ಸೊಸೆಗೆ ಆಗಿಬರೋದಿಲ್ಲ, ಇನ್ನು ಮುಗಿದೇ ಹೊಯ್ತು... ಡೈವೋರ್ಸ್ ಆಗೇ ಹೋಯ್ತು..! ಎನ್ನುವಂತೆ ಗುಲ್ಲೆಬ್ಬಿಸಿ ಅವರ ಕುಟುಂಬದಲ್ಲಿ ಅಶಾಂತಿ ಮೂಡಿಸಿ ನೆಮ್ಮದಿ ಹಾಳು ಮಾಡಿದ್ದಾರೆ! ನಟ ಅಭಿಷೇಕ್ ಹೆಸರು, ನಟಿ ನಿಮ್ರತ್ ಕೌರ್ ಜೊತೆಗೆ ತಳುಕು ಹಾಕಿ ಅವರಿಬ್ಬರೂ ವಿವಾಹೇತರ ಸಂಬಂಧ ಹೊಂದಿದ್ದಾರೆ ಎಂದು ಬಿಂಬಿಸಲಾಗಿತ್ತು! ಮನೆ ಮನಸ್ಸುಗಳು ಮುರಿಯಲು ಇನ್ನೇನು ಬೇಕಿತ್ತು?

ಆದರೀಗ ತಮ್ಮ ಕುಟುಂಬದ ವಿರುದ್ಧ ಹಬ್ಬಿಸಲಾಗಿರುವ ಎಲ್ಲಾ ಊಹಾಪೋಹಗಳಿಗೆ, ಗಾಸಿಪ್‌ಗಳಿಗೆ ಹೋಲ್‌ಸೇಲ್ ಆಗಿ ನಟ ಅಭಿಷೇಕ್ ಬಚ್ಚನ್ ಅವರೇ ಉತ್ತರ ನೀಡಿದ್ದಾರೆ! ಅಭಿ ಇತ್ತೀಚೆಗೆ ಖಾಸಗಿ ವಾಹಿನಿಗೆ ನೀಡಿರೋ ಸಂದರ್ಶನವೊಂದರಲ್ಲಿ, ನಿಮ್ರತ್ ಕೌರ್ ಅವರನ್ನು ನೇರವಾಗಿ ಹೆಸರಿಸದೇ, ಇಂತಹ ವದಂತಿಗಳು ಸಾಕಷ್ಟು ಸಮಸ್ಯೆ ತಂದಿತ್ತು, ಆದರೆ ನಮ್ಮ ಕುಟುಂಬ ಹೊಡೆಯಲು ಆಗಿಲ್ಲ! ನಾನು ಹೇಳಬಯಸುವುದು ಇಷ್ಟೇ... ಸುಳ್ಳು ಮಾಹಿತಿಯನ್ನು ಹರಡುತ್ತಿರುವ ವ್ಯಕ್ತಿಗಳಿಗೆ ಅದನ್ನು ಸ್ಪಷ್ಟಪಡಿಸುವ ಅಥವಾ ಸರಿಪಡಿಸುವ ಯಾವುದೇ ಆಸಕ್ತಿ ಇರುವುದಿಲ್ಲ... ಮೊದಲು, ನನ್ನ ಬಗ್ಗೆ ಹಬ್ಬಿಸಲಾದ ವಿಷಯಗಳು ನನ್ನ ಮೇಲೆ ಪರಿಣಾಮ ಬೀರಲಿಲ್ಲ... ಆದರೆ, ದೀರ್ಘ ಕಾಲದ ಅವಮಾನದಿಂದ ನನ್ನ ಕುಟುಂಬ ನೊಂದಿದೆ. ನಾನು ಈ ಬಗ್ಗೆ ಸ್ಪಷ್ಟೀಕರಣ ನೀಡಿದೆ ಸುಮ್ಮನಿದ್ದರೆ ಜನರು ಅವರದೇ ಆದ ವಿರುದ್ಧ ರೀತಿಯಲ್ಲಿ ಅರ್ಥೈಸುತ್ತಾರೆ! ಏಕೆಂದರೆ, ನಕಾರಾತ್ಮಕ ಸುದ್ದಿಗಳು ಮಾರಾಟವಾಗುತ್ತವೆ!

ಇಷ್ಟಕ್ಕೂ ಜನರು ನನ್ನ ಸ್ಥಾನದಲ್ಲಿಲ್ಲ. ಯಾರೂ ನನ್ನ ಜೀವನವನ್ನು ನಡೆಸುತ್ತಿಲ್ಲ. ನಾನು ಯಾರಿಗೆ ಜವಾಬ್ದಾರನಾಗಿರುತ್ತೇನೆಯೋ ಅವರಿಗೆ ಯಾರೂ ಜವಾಬ್ದಾರರಲ್ಲ... ಎಂದು ಅಭಿಷೇಕ್ ಬಚ್ಚನ್ ಖಾರವಾಗಿಯೇ ನುಡಿದಿದ್ದಾರೆ! ಜೊತೆಗೆ, 'ಇಂತಹ ನಕಾರಾತ್ಮಕತೆಯನ್ನು ಹರಡುವ ಜನರು, ಮೊದಲನೆಯದಾಗಿ ತಮ್ಮ ಆತ್ಮಸಾಕ್ಷಿಯೊಂದಿಗೆ ಬದುಕಬೇಕು, ತಮ್ಮ ಆತ್ಮಸಾಕ್ಷಿಯೊಂದಿಗೆ ವರ್ತಿಸಬೇಕು. ಅವರು ತಮ್ಮ ಸೃಷ್ಟಿಕರ್ತನಿಗೆ ಉತ್ತರಿಸಬೇಕು. ಇದು ನನ್ನ ಬಗೆಗಿನ ಸುದ್ದಿಯಾದರೂ ಸರಿ, ಇನ್ನೊಬ್ಬರ ಸುದ್ದಿಯಾದರೂ ಸರಿ... ಒಬ್ಬರು ಮಾಡುವ ತಪ್ಪಿಗೆ ನಮ್ಮ ಇಡೀ ಕುಟುಂಬ ನೋವು ಅನುಭವಿಸಬೇಕಾಗುತ್ತದೆ! ಟ್ರೋಲಿಂಗ್‌ನ ಈ ಹೊಸ ಪ್ರವೃತ್ತಿಗೆ ನಾನು ನಿಮಗೆ ಬಹಳಷ್ಟು ಉದಾಹರಣೆಯನ್ನೂ ನೀಡಬಲ್ಲೆ. ಈ ಟ್ರೋಲಿಂಗ್, ಗಾಸಿಪ್, ವದಂತಿಗಳಿಂದ ಅದೆಷ್ಟೊ ಸಂಸಾರಗಳು ಬೀದಿಗೆ ಬಿದ್ದಿವೆ ಎಂದು ನಾನು ಹೇಳಬಲ್ಲೆ... ಆದರೆ, ಕೊನೆಗೊಂದು ವಿಷಯ ಎಲ್ಲರಿಗೂ ಅರ್ಥವಾಗಬೇಕು. ಅದೇನೆಂದರೆ... ಎಲ್ಲದಕ್ಕೂ ಒಂದು ಅಂತ್ಯ ಅಂತ ಇದೆ.. ಸಾಕಷ್ಟು ಸಂಗತಿಗಳಿಗೆ ಕಾಲವೇ ಉತ್ತರಿಸುತ್ತದೆ... ಎಂದು ನೊಂದು ನುಡಿದಿದ್ದಾರೆ ಅಭಿಷೇಕ್ ಬಚ್ಚನ್!

POLICE NEWS REGISTERED KA/BGW-1618/2024-26 REGD. WITH RNI NO. 36669/82 PAGES : 16 | POSTED AT BANGALORE PSO BG 560026 Every Tuesday | Publishing Date : 21.12.2025

# ರೊಚ್ಚಿಗೆದ್ದ ಐಂದ್ರಿತಾ ರೈ...



ಬೆಂಗಳೂರು ಪ್ರಜೆಗಳ ಗೋಳು ಕೇಳೋರೇ ಇಲ್ಲ. ಗ್ರೇಟರ್ ಬೆಂಗಳೂರು ಸಿಬ್ಬಂದಿ ಆಗಾಗ ಮಾಡುವ ಯಡವಟ್ಟುಗಳಿಂದ ಜನಸಾಮಾನ್ಯರು ಸಂಕಷ್ಟಕ್ಕೆ ಸಿಲುಕುತ್ತಿದ್ದಾರೆ. ಇದೀಗ ನಟಿ ಐಂದ್ರಿತಾ ರೈ ರೊಚ್ಚಿಗೆದ್ದಿದ್ದಾರೆ. ಐಂದ್ರಿತಾ ರೈ ಬೆಂಗಳೂರಿನ ಆರ್. ಆರ್. ನಗರದ ಐಡಿಯಲ್ ಹೋಮ್‌ನಲ್ಲಿ ವಾಸವಾಗಿದ್ದಾರೆ. ಜಿಬಿಎ ಸಿಬ್ಬಂದಿ ಲೇಔಟ್‌ನ ಸುತ್ತಮುತ್ತ ಕಸ ಕ್ಲೀನ್ ಮಾಡಿ ಕಸ ಸುಟ್ಟಿದ್ದಾರೆ. ಸುಟ್ಟ ಕಸದ ಹೊಗೆಯಿಂದ ಮನೆಯಲ್ಲಿ ಇರೋಕೆ ಆಗ್ತಿಲ್ಲ. ಕಪ್ಪು ಕೊಳಕು ನಾತದ ಹೊಗೆ ಮನೆಯೊಳಗೆ ಬರ್ತಿದೆ. ರೆಸಿಡೆನ್ಶಿಯಲ್ ಏರಿಯಾದಲ್ಲಿ ಈ ರೀತಿ ಯಾಕೆ ಮಾಡ್ತಿದ್ದಾರೆ.


ಜಿಬಿಎ ಕಂಟ್ರೋಲ್ ರೂಂಗೆ ಫೋನ್ ಮಾಡಿದ್ರು ನೋ ರೆಸ್ಪಾನ್ಸ್! ಜಿಬಿಎ ಹೆಲ್ಪ್‌ಲೈನ್‌ಗೆ ಕಾಲ್ ಮಾಡಿದ್ರೆ ನಂಬರ್ ಸ್ಥಗಿತವಾಗಿದೆ! ಹೀಗಾಗಿ ಸಂಬಂಧಪಟ್ಟ ಅಧಿಕಾರಿಗಳು ಸಹಾಯ ಮಾಡಿ ಎಂದು ವಿಡಿಯೋ ಮಾಡಿ ಶಾಸಕ ಮುನಿರತ್ನ ಅವರನ್ನ ಟ್ಯಾಗ್ ಮಾಡಿ ಮನವಿ ಮಾಡಿದ್ದಾರೆ... ☯

# ಡಿಸೆಂಬರ್ 25ಕ್ಕೆ ಸಿನಿ ಸುನಾಮಿ!!!



ಖಂಡಿತ ಇದು ಒಳ್ಳೆಯ ಬೆಳವಣಿಗೆ ಅಲ್ಲ...ಕನ್ನಡ ಸಿನಿಮಾಗಳು ಚಿತ್ರಮಂದಿರಗಳಲ್ಲಿ ನಿಲ್ಲುವುದೇ ಪವಾಡ. ಒಳ್ಳೆ ಕಂಟೆಂಟ್ ಇದ್ರೂ, ಇನ್ಯಾವನೋ ಬಲಾಡ್ಯ ಬಂದು ತನ್ನ ಸಿನಿಮಾ ಹಾಕಿ ಆ ಚಿತ್ರವನ್ನ ಎತ್ತಂಗಡಿ ಮಾಡಿಸಿರುತ್ತಾನೆ! ಪೆಂಟಗನ್, ಚೂರಿ ಕಟ್ಟೆ, ದಿ ಟಾಸ್ಕ್, ಕೆರೆ ಬೇಟೆ, ಉಳಿದೆಲ್ಲವ ಬಿಟ್ಟು, ಎರಡೊಂದ್ಲಾ ಎರಡು... ಮುಂತಾದ ಉತ್ತಮ ಚಿತ್ರಗಳು ಸೋತದ್ದೇ ಹೀಗೆ... ಪರಭಾಷಾ ಸಿನಿಮಾ ಬಂದು ಕನ್ನಡ ಸಿನಿಮಾವನ್ನ ಕೊಲ್ಲುವುದು ಒಂದೆಡೆ ಯಾದರೆ, ಕನ್ನಡ ಸಿನಿಮಾವೆ ಇನ್ನೊಂದು ಕನ್ನಡ ಸಿನಿಮಾವನ್ನ ಕೊಲ್ಲುವ ಪರಿಪಾಟ ನಮ್ಮಲ್ಲಿದೆ ಕಣ್ರೀ!

ಡಿಸೆಂಬರ್ 11ರಂದು ಬಿಡುಗಡೆಯಾಗಿ ಈಗ ಎಲ್ಲೆಡೆ ಒಳ್ಳೆಯ ಪ್ರದರ್ಶನ ಕಾಣುತ್ತಿರುವ 'ದಿ ಡೆವಿಲ್' ಚಿತ್ರವನ್ನ ನಾಳೆ 25ಕ್ಕೆ ಆಲ್ಮೋಸ್ಟ್ ಎಲ್ಲಾ ಕಡೆ ಎತ್ತಂಗಡಿ ಮಾಡಲಾಗುತ್ತಿದೆ!




ಕಾರಣ, ಕಿಚ್ಚ ಸುದೀಪ್ ಅಭಿನಯದ 'ಮಾರ್ಕ್' ಹಾಗೂ ಉಪ್ಪಿ, ಶಿವಣ್ಣ, ರಾಜ್ ಬಿ. ಶೆಟ್ಟಿ ಅಭಿನಯದ '45' ಎರಡೂ ದೊಡ್ಡ ಸಿನಿಮಾಗಳು ನಾಳೆ ಡಿಸೆಂಬರ್ 25ರಂದು ರಿಲೀಸ್ ಆಗ್ತಾ ಇವೆ!! ಇವೆರಡು ಸಿನಿಮಾಗಳಿಗೆ ಚಿತ್ರಮಂದಿರಗಳು ಹಂಚಿಕೆ ಆಗಬೇಕು ಅಂದ್ರೆ, 'ದಿ ಡೆವಿಲ್' ಕೊಲೆ ಆಗಲೇಬೇಕು!!! ಆ ಸಿನಿಮಾ ಚೆನ್ನಾಗಿದೆಯೋ ಇಲ್ಲವೋ ಅದು ಬೇರೆ ಮಾತು. ದರ್ಶನ್ ಗಂತೂ ಹೆವಿ ಅನ್ನುವಷ್ಟು ಫ್ಯಾನ್ಸ್ ಇದ್ದಾರೆ. ಆತನ ಸಿನಿಮಾ ಹೇಗೇ ಇದ್ರೂ 50 ಡೇಸ್ ಗ್ಯಾರೆಂಟಿ ಓಡುತ್ತದೆ. ಈಗ ಇಂಥ ಪರಿಸ್ಥಿತಿ ಉದ್ಭವ ಆಗಿದೆ. ಬಂಡವಾಳ ಹಾಕಿದ ನಿರ್ಮಾಪಕರು ಏನು ಮಾಡಬೇಕು?? ಈಗ ಪೈಪೋಟಿಗೆ ಬಿದ್ದು ರಿಲೀಸ್ ಆಗ್ತಿದ್ದಾವಲ್ಲ 45, ಮಾರ್ಕ್... ಇವುಗಳ ಪೈಕಿ ಒಂದು ಗೆದ್ರೆ, ಇನ್ನೊಂದು ಬಿದ್ದು ಹೋಗುವ ಅಪಾಯವು ಇಲ್ಲದ್ದಿಲ್ಲ... ಇದು ಲೀಡರ್ ಇಲ್ಲದ ಸ್ಯಾಂಡಲ್‌ವುಡ್ ನ ಇಂದಿನ ದುಸ್ಥಿತಿ... ☯

# ಮಗಳಿಗಾಗಿ ಪತ್ನಿಯನ್ನೇ ಕಿಡ್ನ್ಯಾಪ್ ಮಾಡಿದ ನಿರ್ಮಾಪಕ!



ಚೈತ್ರಾ ಎಂಬ ಸೀರಿಯಲ್ ನಟಿಯನ್ನು ಕಿಡ್ನ್ಯಾಪ್ ಮಾಡಿದ್ದ ಹರ್ಷವರ್ಧನ್ ಸ್ಟೋರಿ ಬಲೇ ಯಾತನಾಮಯವಾಗಿದೆ! 'ವರ್ಧನ್ ಸಿನಿಮಾಸ್' ಮಾಲೀಕನಾಗಿರುವ ನಿರ್ಮಾಪಕ ಹರ್ಷವರ್ಧನ್, ಕೆಲ ಸೀರಿಯಲ್ ಹಾಗೂ ಸಿನಿಮಾಗಳಲ್ಲಿ ನಟನೆ ಮಾಡಿರುವ ಚೈತ್ರಾಳನ್ನು ಪ್ರೇಮಿಸಿ ಮದುವೆಯಾಗಿದ್ದ. ಇವರಿಗೆ ಒಂದು ಹೆಣ್ಣು ಮಗುವೂ ಇದೆ.

ಹರ್ಷವರ್ಧನ್ ಚೈತ್ರಾ ಇಬ್ಬರೂ ಸೇರಿ 'ನಿನ್ನಲೇನೋ ಹೇಳಬೇಕು' ಎಂಬ ಸಿನಿಮಾ ಮಾಡಿದ್ರು... ಅದು ಬರಕತ್ತಾಗಲಿಲ್ಲವಾದರೂ ಇಬ್ಬರ ಮಧ್ಯೆ ಪ್ರೀತಿ ಹುಟ್ಟಿತ್ತು. ಬಳಿಕ 2023ರಲ್ಲಿ ಪರಸ್ಪರ ಒಪ್ಪಿ ಮದುವೆಯಾಗಿದ್ದರು. ಚೈತ್ರಾ ಹಾಗೂ ಹರ್ಷವರ್ಧನ್‌ಗೂ ಒಂದು ವರ್ಷದ ಹೆಣ್ಣು ಮಗು ಆಗಿತ್ತು. ಕಳೆದ ವರ್ಷ ಇಬ್ಬರ ಮಧ್ಯೆ ಜಗಳವಾಗಿ ಇಬ್ಬರೂ ಪ್ರತ್ಯೇಕವಾಗಿ ವಾಸವಾಗಿದ್ರು. ಗಂಡನ ಬಿಟ್ಟ ನಂತರ ಮಗಳನ್ನು ತನ್ನ ಬಳಿಯೇ ಇಟ್ಟುಕೊಂಡಿದ್ದಳು ನಟಿ ಚೈತ್ರಾ. ಆದರೆ, ತನ್ನ ಪ್ರೀತಿಯ ಮಗಳನ್ನು ಬಿಟ್ಟಿರಲು ಆಗದೇ ಒದ್ದಾಡುತ್ತಿದ್ದ ಹರ್ಷವರ್ಧನ್, ಹೇಗಾದರೂ ಮಾಡಿ ತನ್ನ ಮುದ್ದಿನ ಮಗಳನ್ನು ತನ್ನ ಬಳಿ ಕರೆಸಿಕೊಳ್ಳೋಕೆ ಪ್ರಯತ್ನ ಪಡ್ತಾನೆ ಇದ್ದ. ಆಗಿರಲಿಲ್ಲ.



ಕಡೆಗೆ, ಪತ್ನಿ ಚೈತ್ರಾಳನ್ನು ಕಿಡ್ನ್ಯಾಪ್ ಮಾಡಲು ಸ್ಕೆಚ್ ಹಾಕಿದ್ದ. ಅದರಂತೆ, ಮೊನ್ನೆ ಬೇರೊಬ್ಬರ ಹೆಸರಿನಲ್ಲಿ ಕರೆ ಮಾಡಿ, ಹೊಸ ಸಿನಿಮಾ ವಿಚಾರ ಮಾತಾಡುವುದಿದೆ ಎಂದು ಒಂದೆಡೆ ಕರೆಸಿಕೊಂಡು ಕಿಡ್ನಾಪ್ ಮಾಡಿದ್ದ ಐನಾತಿ ಪ್ರೊಡ್ಯೂಸರ್! ನಂತರ ಚೈತ್ರಾ ಮಮ್ಮಿಗೆ ಕರೆ ಮಾಡಿ ನಿನ್ನ ಮಗಳು ಬೇಕಿದ್ರೆ, ನನ್ನ ಮಗಳನ್ನು ನನಗೆ ಕೊಡಬೇಕು ಎಂಬ ಷರತ್ತು ಹಾಕಿದ್ದ! ಚೈತ್ರಾ ತಾಯಿ ಈ ಬಗ್ಗೆ ಬ್ಯಾಟರಾಯನಪುರ ಪೊಲೀಸ್ ಠಾಣೆಯಲ್ಲಿ ದೂರು ಕೊಟ್ಟಿದ್ದರು. ಅಲ್ಲಿನ ಪೊಲೀಸರು ಹರ್ಷನನ್ನು ಬಂಧಿಸಿ ಚೈತ್ರಾಳನ್ನು ರಕ್ಷಿಸಿದರು. ಆದರೆ, ಇದೇ ಸಂದರ್ಭದಲ್ಲಿ ಇನ್ನೊಂದು ಸ್ಫೋಟಕ ಮಾಹಿತಿ ಬಯಲಾಗಿದೆ. ಅದೇನೆಂದರೆ, ವರ್ಧನ್ ಮೂವೀಸ್ ನಿರ್ಮಾಪಕ ಹರ್ಷವರ್ಧನ ಮನೆಗಳ್ಳ ಎಂಬುದು! ಈತ ಹಾಸನ ಚನ್ನರಾಯಪಟ್ಟಣ ಮುಂತಾದ ಕಡೆ ಮನೆಗಳನ್ನು ದೋಚಿ ಚಿನ್ನ-ಬೆಳ್ಳಿ ಕದ್ದು ಪೊಲೀಸ್‌ಗೆ ಸಿಕ್ಕಿಬಿದ್ದು ಜೈಲು ದರ್ಶನವನ್ನೂ ಮಾಡಿ ಬಂದಿದ್ದಾನಂತೆ! ಇನ್ನೂ ಹಲವು ಕಡೆ ವಾಂಟೆಡ್ ಆಗಿದ್ದು, ಈಗ ಪತ್ನಿಯನ್ನೇ ಕಿಡ್ನಾಪ್ ಮಾಡಿ ಪೊಲೀಸ್ ಗೆ ಸಿಕ್ಕಿಬಿದ್ದು ಸುದ್ದಿಯಾದಾಗ, ಕೆಲ ಠಾಣೆಗಳ ಪೊಲೀಸರು ಇತ್ತ ಧಾವಿಸಿ ಬಂದು ಕೋರ್ಟ್ ಅನುಮತಿ ಪಡೆದು ತಮ್ಮ ಕಸ್ಟಡಿಗೆ ಪಡೆದುಕೊಂಡು ಹೋಗಿದ್ದಾರೆ ಎನ್ನಲಾಗಿದೆ!!





# ಮಾತೃ ಭಾಷಾ ದ್ರೋಹಿಗಳೇ ಪ್ರಿಯಾ ನೋಡಿ ಕಲಿಯಿರಿ!

ಕನ್ನಡದಿಂದಲೇ ಸಿನಿಮಾರಂಗ ಪ್ರವೇಶಿಸಿ, ದೊಡ್ಡ ಸ್ಟಾರ್ ಆದವರು ಕನ್ನಡವನ್ನು ಕಡೆಗಣಿಸುತ್ತಿದ್ದಾರೆ ಎಂದು ಕನ್ನಡಿಗರು ಆಗಾಗ ಬೇಸರ ಹೊರ ಹಾಕುತ್ತಿರುತ್ತಾರೆ. ಆದರೆ ಬೇರೆ ಭಾಷೆಯ ಕಲಾವಿದರು ಆಸೆ ಪಟ್ಟು ಕನ್ನಡ ಕಲಿಯುವುದು ವಿರಳ. ಹೀಗಿರುವಾಗ ಬಹುಭಾಷಾ ನಟಿ ಪ್ರಿಯಾ ಆನಂದ್ ಕನ್ನಡದಲ್ಲಿ ಮಾಡಿದ್ದು ಬೆರಳೆಣಿಕೆಯಷ್ಟು ಸಿನಿಮಾಗಳೇ ಆದರೂ ಕನ್ನಡವನ್ನು ಸುಲಲಿತವಾಗಿ ಮಾತನಾಡುತ್ತಿದ್ದಾರೆ. ನಾನು ಕನ್ನಡ ಕಲಿಯಲು ನಟ ಪುನೀತ್ ರಾಜ್‌ಕುಮಾರ್ ಅವರೇ ಕಾರಣ ಎಂದೂ ಅಚ್ಚರಿ ವಿಚಾರವೊಂದನ್ನು ರಿವೀಲ್ ಮಾಡಿದ್ದಾರೆ ಪ್ರಿಯಾ.



ಪ್ರಿಯಾ ಆನಂದ್ ಅವರು ಪುನೀತ್ ರಾಜ್ ಕುಮಾರ್ ನಟನೆಯ 'ರಾಜಕುಮಾರ' ಹಾಗೂ 'ಜೇಮ್ಸ್' ಸಿನಿಮಾದಲ್ಲಿ ನಾಯಕಿಯಾಗಿ ನಟಿಸಿದ್ದರು. ಆ ಸಿನಿಮಾಗಳು ಭರ್ಜರಿ ಹಿಟ್ ಆಗಿದ್ದವು. ಬಳಿಕ ಶಿವಣ್ಣ ಅಭಿನಯದ ಕರಟಕ ಧಮನಕ ಚಿತ್ರದಲ್ಲಿ ಅವರು ನಟಿಸಿದ್ದರು. ಬಾಲಿವುಡ್ ತಾರೆಯಾದ ಅವರು ಕನ್ನಡವನ್ನು ಇಷ್ಟು ಬೇಗ ಸುಲಲಿತವಾಗಿ ಮಾತನಾಡೋಕೆ ಕಲಿತಿರುವುದು ಎಲ್ಲರಲ್ಲೂ ಅಚ್ಚರಿ ಮೂಡಿಸಿದೆ. ಇದಕ್ಕೆ ಕಾರಣವೇನೆಂದು ಅವರೇ ಬಾಯ್ಬಿಟ್ಟಿದ್ದಾರೆ.

ಕನ್ನಡದ ವಿನೋದ್ ಪ್ರಭಾಕರ್ ನಟನೆಯ 'ಬಲರಾಮನ ದಿನಗಳು' ಸಿನಿಮಾದಲ್ಲಿ ಪ್ರಿಯಾ ಆನಂದ್ ನಾಯಕಿಯಾಗಿದ್ದು, ಈ ಚಿತ್ರದ ಕಾರ್ಯಕ್ರಮದಲ್ಲಿ ಕನ್ನಡದಲ್ಲೇ ಮಾತನಾಡುವ ಮೂಲಕ ಎಲ್ಲರ ಗಮನ ಸೆಳೆದಿದ್ದಾರೆ. ಈ ವಿಡಿಯೋ ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಕೂಡ ಆಗಿದೆ. ನಾನು ಅಪ್ಪುಗೋಸ್ಕರ ಕನ್ನಡ ಕಲಿಯುತ್ತಿದ್ದೇನೆ ಎಂದು ಪ್ರಿಯಾ ಹೇಳಿದ್ದಾರೆ! 'ಎಲ್ಲರಿಗೂ ನಮಸ್ಕಾರ, ನಾನು ಕನ್ನಡದಲ್ಲೇ ಮಾತನಾಡಲು ಪ್ರಯತ್ನಿಸುವೆ. ನಾನು ನನ್ನ ಕೆರಿಯರ್ ಶುರು ಮಾಡಿದ್ದು ತಮಿಳು ಚಿತ್ರರಂಗದಿಂದ, ಈಗ ಮತ್ತೆ ಕನ್ನಡ ಸಿನಿಮಾದಲ್ಲಿ ನಟಿಸುತ್ತಿರುವುದು ಖುಷಿ ತಂದಿದೆ' ಎಂದಿದ್ದಾರೆ!! ☯

Vol. 41 No. 29 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666 policenewsreporter@gmail.com
http//policenews.news https://www.facebook.com/profile.php?id=61579674874846 https://www.instagram.com/police_news?igsh=MWJ6bHJwZDRmZDc1aQ==